Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)

(ವಿಶೇಷ ಸಂಚಿಕೆ)

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.


| | | | |
|---|---|---|---|
| सं–1 | नई दिल्ली सोमवार, जनवरी 20, 1992 | पुष्य 30, 1913 (शक) | खण्ड–13 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಜನವರಿ ೨೦, ೧೯೯೨ | ಪುಷ್ಯ ೩೦, ೧೯೧೩ (ಶಕ) | ಸಂಪುಟ ೧೩ |
| No. 1 | New Delhi Monday, January 20, 1992 | Pushya 30, 1913 (Saka) | Vol. 13 |


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely– (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ [illegible] ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ [illegible], ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) [illegible] ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) [illegible] ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ [illegible] ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ [illegible]ರ ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು [illegible]ತಕ್ಕದ್ದು.

Ministry of Law, Justice & Company Affairs
(Legislative Department)
New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ – (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹನ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) [illegible] ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) [illegible] ಪ್ರದರ್ಶನ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ [illegible] ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ [illegible] ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (a) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs
(Legislative Department)
New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) [illegible] ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು [illegible] 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ [illegible] ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ [illegible] ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಕೃತಿಸ್ವಾಮ್ಯ ಅಧಿನಿಯಮ, 1957

(1957ರ ಅಧಿನಿಯಮ ಸಂಖ್ಯೆ 14)

[ಜೂನ್ 4, 1957]

ಕೃತಿಸ್ವಾಮ್ಯಕ್ಕೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವ ಮತ್ತು ಕ್ರೋಡೀಕರಿಸುವ ಅಧಿನಿಯಮ.
ಭಾರತ ಗಣರಾಜ್ಯದ ಎಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮವಾಗತಕ್ಕದ್ದು:—

## ಅಧ್ಯಾಯ–I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:**—(1) ಈ ಅಧಿನಿಯಮವನ್ನು ಕೃತಿಸ್ವಾಮ್ಯ ಅಧಿನಿಯಮ, 1957 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಅರ್ಥವಿವರಣೆ:**—ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,—

(ಕ) "ಅಳವಡಿಕೆ" ಎಂದರೆ,—

(i) ನಾಟಕ ಕೃತಿಗೆ ಸಂಬಂಧಪಟ್ಟಂತೆ, ಆ ಕೃತಿಯನ್ನು ನಾಟಕವಲ್ಲದ ಕೃತಿಯನ್ನಾಗಿ ಪರಿವರ್ತಿಸುವುದು;

(ii) ಸಾಹಿತ್ಯಿಕ ಕೃತಿ ಅಥವಾ ಕಲಾತ್ಮಕ ಕೃತಿಗೆ ಸಂಬಂಧಪಟ್ಟಂತೆ ಸಾರ್ವಜನಿಕವಾಗಿ ಅಥವಾ ಅನ್ಯಥಾ ಅದನ್ನು ಪ್ರಸ್ತುತಪಡಿಸುವುದರ ಮೂಲಕ ಆ ಕೃತಿಯನ್ನು ನಾಟಕ ಕೃತಿಯನ್ನಾಗಿ ಪರಿವರ್ತಿಸುವುದು;

(iii) ಸಾಹಿತ್ಯಿಕ ಅಥವಾ ನಾಟಕ ಕೃತಿಗೆ ಸಂಬಂಧಪಟ್ಟಂತೆ, ಪುಸ್ತಕದಲ್ಲಿ ಅಥವಾ ವೃತ್ತ ಪತ್ರಿಕೆಯಲ್ಲಿ, ಮ್ಯಾಗಝಿನ್‌ನಲ್ಲಿ ಅಥವಾ ಅಂಥದೇ ನಿಯತಕಾಲಿಕದಲ್ಲಿ ಯಥಾವತ್ತಾಗಿ ನಿರೂಪಿಸುವುದಕ್ಕಾಗಿ ಸೂಕ್ತವಾದ ರೂಪದಲ್ಲಿ ಚಿತ್ರಗಳ ಮೂಲಕ ಕಥೆ ಅಥವಾ ಅಭಿನಯವನ್ನು ಪೂರ್ಣವಾಗಿ ಅಥವಾ ಮುಖ್ಯವಾಗಿ ತಿಳಿಸುವಂಥ ಕೃತಿಯ ಯಾವುದೇ ಸಂಕ್ಷೇಪಣ ಅಥವಾ ಕೃತಿಯ ಯಾವುದೇ ಭಾಷಾಂತರ; ಮತ್ತು

(iv) ಸಂಗೀತ ಕೃತಿಗೆ ಸಂಬಂಧಪಟ್ಟಂತೆ ಕೃತಿಯ ಯಾವುದೇ ವ್ಯವಸ್ಥೆ, ಅಥವಾ ಅನುಲಿಪಿ ಮಾಡುವುದು;

(ಖ) "ವಾಸ್ತುಶಿಲ್ಪ ಕಲಾಕೃತಿ" ಎಂದರೆ ಕಲಾತ್ಮಕ ಸ್ವರೂಪವನ್ನು ಅಥವಾ ವಿನ್ಯಾಸವನ್ನು ಹೊಂದಿರುವ ಯಾವುದೇ ಕಟ್ಟಡ ಅಥವಾ ರಚನೆ ಅಥವಾ ಯಾವುದೇ ಅಂಥ ಕಟ್ಟಡ ಅಥವಾ ರಚನೆಯ ಯಾವುದೇ ಮಾದರಿ;

(ಗ) "ಕಲಾತ್ಮಕ ಕೃತಿ" ಎಂದರೆ,—

(i) ವರ್ಣಚಿತ್ರ, ಶಿಲ್ಪಕಲೆ, ರೇಖಾಚಿತ್ರ (ರೇಖಾಕೃತಿ, ಭೂಪಟ, ರೇಖಾಪಟ ಅಥವಾ ನಕ್ಷೆಯನ್ನು ಒಳಗೊಂಡು) ಕೆತ್ತನೆ ಅಥವಾ ಛಾಯಾಚಿತ್ರ, ಅಂಥ ಯಾವುದೇ ಕೃತಿಯು ಕಲಾತ್ಮಕ ಗುಣಮಟ್ಟವನ್ನು ಹೊಂದಿರಲಿ ಅಥವಾ ಹೊಂದಿಲ್ಲದಿರಲಿ;

(ii) ವಾಸ್ತುಶಿಲ್ಪ ಕಲಾಕೃತಿ; ಮತ್ತು

(iii) ಕಲಾತ್ಮಕ ವೃತ್ತಿ ಕೌಶಲ್ಯದ ಯಾವುದೇ ಇತರ ಕೃತಿ;

(ಘ) "ಕರ್ತೃ" ಎಂದರೆ,—

(i) ಸಾಹಿತ್ಯಿಕ ಅಥವಾ ನಾಟಕದ ಕೃತಿಗೆ ಸಂಬಂಧಪಟ್ಟಂತೆ ಕೃತಿಯ ಕರ್ತೃ;

(ii) ಸಂಗೀತ ಕೃತಿಗೆ ಸಂಬಂಧಪಟ್ಟಂತೆ, ರಚನಕಾರ;

(iii) ಛಾಯಾ ಚಿತ್ರವಲ್ಲದ ಕಲಾತ್ಮಕ ಕೃತಿಗೆ ಸಂಬಂಧಪಟ್ಟಂತೆ, ಕಲಾವಿದ;

(iv) ಛಾಯಾ ಚಿತ್ರಕ್ಕೆ ಸಂಬಂಧಪಟ್ಟಂತೆ, ಛಾಯಾ ಚಿತ್ರವನ್ನು ತೆಗೆಯುವ ವ್ಯಕ್ತಿ;

(v) ಚಲನಚಿತ್ರ ಫಿಲ್ಮಿಗೆ ಸಂಬಂಧಪಟ್ಟಂತೆ ಅದನ್ನು ಪೂರ್ಣಗೊಳಿಸುವ ಕಾಲದಲ್ಲಿನ ಫಿಲ್ಮಿನ ಒಡೆಯ; ಮತ್ತು

(vi) ಧ್ವನಿ ಮುದ್ರಣಕ್ಕೆ ಸಂಬಂಧಪಟ್ಟಂತೆ, ಪ್ಲೇಟನ್ನು ಮಾಡಿಕೊಳ್ಳುವ ಕಾಲದಲ್ಲಿ ಧ್ವನಿ ಮುದ್ರಣವನ್ನು ಯಾವ ಮೂಲ ಪ್ಲೇಟಿನಿಂದ ಮಾಡಿಕೊಳ್ಳಲಾಗಿದೆಯೋ, ಆ ಮೂಲ ಪ್ಲೇಟಿನ ಒಡೆಯ;

(ಘಘ) "ಪ್ರಸಾರ" ಎಂದರೆ, ಸಾರ್ವಜನಿಕರಿಗೆ—

(i) ಚಿಹ್ನೆಗಳು, ಶಬ್ದಗಳು ಅಥವಾ ದೃಷ್ಟಿ ಬಿಂಬಗಳು ಯಾವುದೇ ಒಂದು ಅಥವಾ ಹೆಚ್ಚಿನ ರೂಪಗಳಲ್ಲಿ ಆಗಲಿ ನಿಸ್ತಂತ್ರ ಪ್ರಸರಣದ ಯಾವುದೇ ಸಾಧನಗಳ ಮೂಲಕ, ಅಥವಾ ಪ್ರಸಾರ ಮಾಧ್ಯಮಗಳಿಂದ;

(ii) ತಂತಿಯ ಮೂಲಕ, ತಿಳಿಸುವುದು ಮತ್ತು ಮರು ಪ್ರಸಾರಣವನ್ನು ಒಳಗೊಳ್ಳುತ್ತದೆ;

(ಙ) "ಕ್ಯಾಲೆಂಡರು ವರ್ಷ" ಎಂದರೆ ಜನವರಿ 1ನೇ ದಿವಸದಂದು ಪ್ರಾರಂಭವಾಗುವ ವರ್ಷ;

(ಚ) "ಚಲನಚಿತ್ರ ಫಿಲ್ಮ್" ಧ್ವನಿವಾಹಿನಿ ಯಾವುದಾದರೂ ಇದ್ದರೆ, ಅದನ್ನು ಒಳಗೊಳ್ಳುತ್ತದೆ ಮತ್ತು "ಚಲನಚಿತ್ರ"ವು ಚಲನಚಿತ್ರಕ್ಕೆ ಸದೃಶವಾದ ಯಾವುದೇ ವಿಧಾನದ ಮೂಲಕ ಉತ್ಪಾದಿಸಲಾದ ಯಾವುದೇ ಕೃತಿಯನ್ನು ಒಳಗೊಂಡಿದೆಯೆಂಬುದಾಗಿ ಅರ್ಥೈಸತಕ್ಕುದು;

ವಿವರಣೆ:—ಈ ಖಂಡದ ಉದ್ದೇಶಗಳಿಗಾಗಿ ವಿಡಿಯೋ ಚಲನಚಿತ್ರಗಳನ್ನು ಚಲನಚಿತ್ರ ಕಲೆಗೆ ಸದೃಶವಾದ ಕಾರ್ಯ ವಿಧಾನದ ಮೂಲಕ ಹೊರತಂದ ಕೃತಿ ಎಂಬುದಾಗಿ ಸಹ ಭಾವಿಸತಕ್ಕುದು.

(ಚಚ) "ಸಾರ್ವಜನಿಕರಿಗೆ ತಿಳಿಸುವುದು" ಎಂದರೆ ಉಪಗ್ರಹದ ಮೂಲಕ ತಿಳಿಸುವುದನ್ನೂ ಒಳಗೊಂಡು ಯಾವುದೇ ರೀತಿಯಲ್ಲಿ ಸಾರ್ವಜನಿಕರಿಗೆ ತಿಳಿಸುವುದು;

(ಛ) ಉಪನ್ಯಾಸಕ್ಕೆ ಸಂಬಂಧಪಟ್ಟಂತೆ "ಕೊಡುವುದು" ಎಂಬುದರಲ್ಲಿ ಯಾವುದೇ ಯಾಂತ್ರಿಕ ಉಪಕರಣದ ಅಥವಾ ಪ್ರಸಾರ ಸಾಧನಗಳ ಮೂಲಕ ಕೊಡುವುದನ್ನು ಒಳಗೊಳ್ಳುತ್ತದೆ;

(ಜ) "ನಾಟಕ ಕೃತಿ" ಯು, ಮೂಕ ಪ್ರದರ್ಶನದಲ್ಲಿನ ಪಠಣ, ನೃತ್ಯ, ಕಲಾಕೃತಿ ಅಥವಾ ಮನೋರಂಜನೆಯ ಯಾವುದೇ ಕೃತಿಯನ್ನು, ಬರವಣಿಗೆಯಲ್ಲಿ ಅಥವಾ ಅನ್ಯಥಾ ನಿಗದಿಪಡಿಸಲಾದಂಥ ರಂಗಸ್ಥಳ ಏರ್ಪಾಡು ಅಥವಾ ಅಭಿನಯದ ರೂಪವನ್ನು ಒಳಗೊಳ್ಳುತ್ತದೆ. ಆದರೆ ಚಲನಚಿತ್ರದ ಫಿಲ್ಮನ್ನು ಒಳಗೊಳ್ಳುವುದಿಲ್ಲ;

(ಜಜ) "ಪ್ರತಿ ತಯಾರಿಸುವ ಸಾಧನ ಸಾಮಗ್ರಿ" ಎಂದರೆ ಯಾವುದೇ ಕೃತಿಯ ಪ್ರತಿಗಳನ್ನು ಮಾಡುವುದಕ್ಕಾಗಿ ಉಪಯೋಗಿಸಿದ ಅಥವಾ ಉಪಯೋಗಿಸಬೇಕಾದ ಯಾಂತ್ರಿಕ "ಸಾಧನ ಅಥವಾ ವ್ಯವಸ್ಥೆ" ;

(ಝ) "ಕೆತ್ತನೆಗಳು" ಎಂಬುದು ಕೊರೆತಗಳು, ಕಲ್ಲಚ್ಚುಗಳು, ಮರದ ಕೆತ್ತನೆಗಳು, ಮುದ್ರಣಗಳು ಮತ್ತು ಛಾಯಾಚಿತ್ರಗಳಲ್ಲದ ಅದೇ ಬಗೆಯ ಇತರ ಕೃತಿಗಳನ್ನು ಒಳಗೊಳ್ಳುತ್ತದೆ;

(ಞ) "ಅನನ್ಯ ಲೈಸೆನ್ಸು" ಎಂದರೆ, ಇತರ ಎಲ್ಲ ವ್ಯಕ್ತಿಗಳನ್ನು (ಕೃತಿ ಸ್ವಾಮ್ಯದ ಒಡೆಯನನ್ನು ಒಳಗೊಂಡು) ಹೊರತುಪಡಿಸಿ, ಲೈಸೆನ್ಸುದಾರನಿಗೆ ಅಥವಾ ಲೈಸೆನ್ಸುದಾರ ಮತ್ತು ಅವನಿಂದ ಅಧಿಕೃತರಾದ ವ್ಯಕ್ತಿಗಳಿಗೆ ಕೃತಿಯಲ್ಲಿನ ಕೃತಿಸ್ವಾಮ್ಯದಲ್ಲಿ ಅಡಕವಾಗಿರುವ ಯಾವುದೇ ಹಕ್ಕನ್ನು ಪ್ರದಾನ ಮಾಡುವಂಥ ಲೈಸೆನ್ಸು ಮತ್ತು "ಅನನ್ಯಲೈಸೆನ್ಸು [illegible]ರರನ್ನು [illegible]ಇದನುಸಾರವಾಗಿ ಅರ್ಥೈಸತಕ್ಕುದು;

[illegible] "ಸರ್ಕಾರಿ ಕೃತಿ" ಎಂದರೆ.—

[illegible] ಸರ್ಕಾರದ ಅಥವಾ ಸರ್ಕಾರದ ಯಾವುದೇ ಇಲಾಖೆಯ;

(ii) ಭಾರತದಲ್ಲಿನ [illegible]ವುದೇ ವಿಧಾನ ಮಂಡಲದ;

(iii) ಭಾರತದಲ್ಲಿನ [illegible]ವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ನ್ಯಾಯಿಕ ಪ್ರಾಧಿಕಾರಿಯ;

—ನಿರ್ದೇಶನ ಅಥವಾ [illegible]ಣದ ಮೂಲಕ ಅಥವಾ ಮೇರೆಗೆ ಮಾಡಿದ ಅಥವಾ ಪ್ರಕಟಿಸಿದಂಥ ಕೃತಿ;

(ಠ) [illegible]ಭಾರತೀಯ [illegible] ಎಂದರೆ.—

(i) [illegible]ಆಗಿರುವಂಥ ಕರ್ತೃವಿನ; ಅಥವಾ

(ii) ಭಾರತ[illegible] ಪ್ರಥಮವಾಗಿ ಪ್ರಕಟಿಸಿದಂಥ; ಅಥವಾ

(iii) [illegible]ತಿಯ ಸಂದರ್ಭದಲ್ಲಿ ಆ ಕೃತಿಯನ್ನು ರಚಿಸುವ ಕಾಲದಲ್ಲಿ ಭಾರತದ ನಾಗರೀಕನಾಗಿರುವ ಕರ್ತೃವಿನ ಸಾಹಿತ್ಯ, [illegible]ವಾ ಸಂಗೀತ ಕೃತಿ;

(ಡ) "ಅತಿಲಂಘನಾ ಪ್ರತಿ" ಎಂದರೆ.—

(i) ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಗೆ ಸಂಬಂಧಪಟ್ಟಂತೆ, ಚಲನಚಿತ್ರ ಫಿಲ್ಮಿನ ರೂಪದಲ್ಲಿಲ್ಲದ ಅನ್ಯಥಾ ಅದರ ಯಥಾವತ್ತಾದ ನಿರೂಪಣೆ;

(ii) ಚಲನಚಿತ್ರ ಫಿಲ್ಮಿಗೆ ಸಂಬಂಧಪಟ್ಟಂತೆ, ಫಿಲ್ಮಿನ ಒಂದು ಪ್ರತಿ ಅಥವಾ ಫಿಲ್ಮಿನೊಂದಿಗೆ ಸೇರಿದ ಧ್ವನಿ ವಾಹಿನಿಯ ಯಾವುದೇ ಭಾಗದಲ್ಲಿ ಧ್ವನಿಮುದ್ರಿಸುವುದನ್ನು ಒಳಗೊಂಡ ಧ್ವನಿ ಮುದ್ರಣ;

(iii) ಧ್ವನಿ ಮುದ್ರಣಕ್ಕೆ ಸಂಬಂಧಪಟ್ಟಂತೆ, ಅದೇ ಧ್ವನಿ ಮುದ್ರಣವನ್ನು ಒಳಗೊಂಡಂಥ ಯಾವುದೇ ಧ್ವನಿಮುದ್ರಣ; ಮತ್ತು

(iv) [illegible] ಪ್ರಕರಣದ ಮೇರೆಗೆ ಯಥಾವತ್ತಾದ ಪ್ರಸರಣ ನಿರೂಪಣೆಯ ಹಕ್ಕು ಇರುವಂಥ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ, ಕಾರ್ಯಕ್ರಮವನ್ನು ಧ್ವನಿ ಮುದ್ರಿಸುವ ಧ್ವನಿಮುದ್ರಿಕೆ, ಅಂಥ ಯಥಾವತ್ತಾದ ನಿರೂಪಣೆ, ಪ್ರತಿ ಅಥವಾ ಧ್ವನಿಮುದ್ರಿಕೆಯನ್ನು ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ್ದರೆ ಅಥವಾ ಆಮದು ಮಾಡಿಕೊಂಡಿದ್ದರೆ;

(ಢ) "ಉಪನ್ಯಾಸ"ವು ಸಂಬೋಧನೆ, ಭಾಷಣ, ಧರ್ಮಬೋಧೆಯನ್ನು ಒಳಗೊಳ್ಳುತ್ತದೆ;

(ಣ) ಸಾಹಿತ್ಯಕ ಕೃತಿಯು ಕೋಷ್ಟಕಗಳು, ಸಂಕಲನಗಳು ಮತ್ತು ಗಣಕಯಂತ್ರ ಕಾರ್ಯಕ್ರಮಗಳನ್ನು ಅಂದರೆ ಯಾವ ಡಿಸ್ಕ್, ಟೇಪು, ಮುದ್ರಿತ ಮಾಧ್ಯಮ ಅಥವಾ ಇತರ ಮಾಹಿತಿ ಸಂಗ್ರಹಣಾ ಸಾಧನವನ್ನು ಗಣಕಯಂತ್ರ ಅಥವಾ ಗಣಕ ಯಂತ್ರ ಆಧಾರಿತ ಸಾಧನ ಸಾಮಗ್ರಿಗೆ ಅದನ್ನು ಒದಗಿಸಿದರೆ ಅಥವಾ ಅದರಲ್ಲಿ ಇರಿಸಿದರೆ ಯಾವುದೇ ಮಾಹಿತಿಯನ್ನು ಯಥಾವತ್ತಾಗಿ ನಿರೂಪಿಸಲು ಸಮರ್ಥವಾಗಿರುವುದೋ ಆ ಯಾವುದೇ ಡಿಸ್ಕ್, ಟೇಪು ಮುದ್ರಿತ ಮಾಧ್ಯಮ ಅಥವಾ ಇತರ ಮಾಹಿತಿ ಸಂಗ್ರಹಣಾ ಸಾಧನದ ಮೇಲೆ ಮುದ್ರಿಸಿದ ಕಾರ್ಯಕ್ರಮಗಳನ್ನು" ಒಳಗೊಳ್ಳುತ್ತದೆ ;

(ತ) "ಸಂಗೀತ ಕೃತಿ" ಎಂದರೆ, ಮುದ್ರಿಸಿದ, ಬರಹಕ್ಕೆ ಇಳಿಸಿದ ಅಥವಾ ಅನ್ಯಥಾ ಸುಸ್ಪಷ್ಟವಾಗಿ ನಿರೂಪಿಸಿದ ಅಥವಾ ಯಥಾವತ್ತಾಗಿ ನಿರೂಪಿಸಿದ ಸ್ವರ ಮಾಧುರ್ಯ ಮತ್ತು ಸ್ವರ ಮೇಳದ ಯಾವುದೇ ಸಂಯೋಜನೆ ಅಥವಾ ಅವುಗಳಲ್ಲಿ ಯಾವುದಾದರೂ ಒಂದು

(ಥ) ''ಪ್ರಸ್ತುತಪಡಿಸುವುದು"—ಚಲನಚಿತ್ರ ಫಿಲ್ಮಿನ ಪ್ರದರ್ಶನದ ಮೂಲಕ ಅಥವಾ ಪ್ರಸಾರಣದ ಮೂಲಕ ಅಥವಾ ಧ್ವನಿಮುದ್ರಿಕೆಯನ್ನು ಉಪಯೋಗಿಸುವುದರ ಮೂಲಕ ಅಥವಾ ಇತರ ಯಾವುದೇ ಸಾಧನಗಳ ಮೂಲಕ ಅಂಥ ಯಾವುದೇ ಮಂಡಿಸುವಿಕೆಯನ್ನು ಒಳಗೊಂಡು ದೃಶ್ಯ ಅಥವಾ ಶ್ರವ್ಯ ನಿರೂಪಣೆಯ ಯಾವುದೇ ವಿಧಾನವನ್ನು ಒಳಗೊಳ್ಳುತ್ತದೆ; ಮತ್ತು ಉಪನ್ಯಾಸಕ್ಕೆ ಸಂಬಂಧಪಟ್ಟಂತೆ ಅಂಥ ಉಪನ್ಯಾಸ ಕೊಡುವುದನ್ನು ಒಳಗೊಳ್ಳುತ್ತದೆ;

(ದ) ''ಪ್ರಸ್ತುತಪಡಿಸುವ ಹಕ್ಕುಗಳ ಸಂಘ" ಎಂದರೆ ಕೃತಿ ಸ್ವಾಮ್ಯದ ಹಕ್ಕು ಇರುವಂಥ ಯಾವುದೇ ಕೃತಿಗಳನ್ನು ಭಾರತದಲ್ಲಿ ಪ್ರಸ್ತುತ ಪಡಿಸುವುದಕ್ಕಾಗಿ ಲೈಸೆನ್ಸುಗಳನ್ನು ಕೊಡುವ ಅಥವಾ ಮಂಜೂರು ಮಾಡುವ ವ್ಯವಹಾರಗಳನ್ನು ಭಾರತದಲ್ಲಿ ನಡೆಸುತ್ತಿರುವಂಥ ನಿಗಮಿತವಾಗಿರುವ ಅಥವಾ ಆಗಿಲ್ಲದಿರುವ ಸಂಘ, ಸಂಸ್ಥೆ ಅಥವಾ ಇತರ ನಿಕಾಯ ;

(ಧ) ''ಛಾಯಾಚಿತ್ರ" ಎಂಬುದರಲ್ಲಿ ಛಾಯಾ ಕಲ್ಲಚ್ಚು ಮತ್ತು ಛಾಯಾ ಚಿತ್ರಕ್ಕೆ ಸದೃಶವಾದ ಯಾವುದೇ ವಿಧಾನದ ಮೂಲಕ ಹೊರತಂದ ಯಾವುದೇ ಕೃತಿಗಳನ್ನು ಒಳಗೊಳ್ಳುತ್ತದೆ. ಆದರೆ ಚಲನಚಿತ್ರ ಫಿಲ್ಮಿನ ಯಾವುದೇ ಭಾಗವನ್ನು ಒಳಗೊಳ್ಳುವುದಿಲ್ಲ ;

(ನ) ''ಪ್ಲೇಟು" ಎಂಬುದು ಯಾವುದೇ ಕೃತಿಯ ಪ್ರತಿಗಳನ್ನು ಮುದ್ರಿಸುವುದಕ್ಕಾಗಿ ಅಥವಾ ಯಥಾವತ್ತಾಗಿ ನಿರೂಪಿಸುವುದಕ್ಕಾಗಿ ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿದ ಯಾವುದೇ ಇಡಿಯಚ್ಚು ಅಥವಾ ಇತರ ಪ್ಲೇಟು, ಕಲ್ಲು, ಪಡಿಯಚ್ಚು, ಎರಕದ ಅಚ್ಚು, ಮುದ್ರಣ ಅಚ್ಚು ವರ್ಗಚಿತ್ರ ಪ್ರತಿಛಾಯಾ, ಪ್ರತಿ ತಯಾರಿಸುವ ಸಾಧನ ಸಾಮಗ್ರಿ ಅಥವಾ ಇತರ ಸಾಧನ ಮತ್ತು ಯಾವುದೇ ಮುದ್ರಣದ ಅಚ್ಚು ಅಥವಾ ಕೃತಿಯ ಶ್ರವ್ಯ ನಿರೂಪಣೆಗಾಗಿ ಧ್ವನಿ ಮುದ್ರಿಕೆಗಳನ್ನು ಮಾಡಬೇಕಾದ ಅಥವಾ ಮಾಡಬೇಕೆಂದು ಉದ್ದೇಶಿಸಿರುವಂಥ ಯಾವುದೇ ಮುದ್ರಣದ ಅಚ್ಚು ಅಥವಾ ಇತರ ಸಾಧನ ಸಾಮಗ್ರಿಯನ್ನು ಒಳಗೊಳ್ಳುತ್ತದೆ;

(ಪ) ''ನಿಯಮಿಸಿದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಿದುದು;

(ಬ) ''ಧ್ವನಿಮುದ್ರಿಕೆ" ಎಂದರೆ, ಚಲನಚಿತ್ರ ಫಿಲ್ಮಿನೊಂದಿಗೆ ಸೇರಿರುವ ಧ್ವನಿ ವಾಹಿನಿಯನ್ನು ಹೊರತುಪಡಿಸಿ, ಅದರಿಂದ ಯಥಾವತ್ತಾಗಿ ನಿರೂಪಿಸಲು ಸಮರ್ಥವಾಗುವ ಹಾಗೆ ಶಬ್ದಗಳನ್ನು ಕೂಡಿಸಿರುವಂಥ ಯಾವುದೇ ಡಿಸ್ಕ್, ಟೇಪ್, ರಂಧ್ರಿತ ಸುರಳಿ ಅಥವಾ ಇತರ ಸಾಧನ;

(ಭ) ''ಧ್ವನಿಮುದ್ರಣ" ಎಂದರೆ, ಧ್ವನಿಮುದ್ರಿಕೆಯಲ್ಲಿ ಕೂಡಿಸಿದ ಮತ್ತು ಅದರ ಮೂಲಕ ಯಥಾವತ್ತಾ ನಿರೂಪಿಸಲು ಸಮರ್ಥವಾದ ಶಬ್ದಗಳ ಸಮೂಹ ;

(ಮ) "ಕೃತಿ'' ಎಂದರೆ, ಕೆಳಕಂಡ ಯಾವುದೇ ಕೃತಿ, ಎಂದರೆ,—

(i) ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿ ;

(ii) ಚಲನಚಿತ್ರ ಫಿಲ್ಮು ;

(iii) ಧ್ವನಿಮುದ್ರಿಕೆ ;

(ಯ) "ಸಹ ಕರ್ತೃತ್ವದ ಕೃತಿ" ಎಂದರೆ, ಒಬ್ಬ ಕರ್ತೃವಿನ ಕೊಡುಗೆ ... ಕರ್ತೃವಿನ ಅಥವಾ ಕರ್ತೃಗಳ ಕೊಡುಗೆಯಿಂದ ಭಿನ್ನವಲ್ಲದಂಥ ಇಬ್ಬರು ಅಥವಾ ಹೆಚ್ಚು ಕರ್ತೃಗಳ ಸಹಯೋಗದಿಂ... ಕೃತಿ;

(ಯ.ಕ) "ಶಿಲ್ಪಕೃತಿ" ಎಂಬುದು ಎರಕಗಳು ಮತ್ತು ಮಾದರಿಗಳನ್ನು ಒಳಗೊ...

**3. ಪ್ರಕಟಣೆಯ ಅರ್ಥ :**—ಈ ಅಧಿನಿಯಮದ ಉದ್ದೇಶ...ಗಾಗಿ, 'ಪ್ರಕಟಣೆ' –

(ಕ) ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಯ ಸಂದರ್ಭದಲ್ಲಿ ಕೃತಿಯ ಸ್ವರೂಪಕ್ಕೆ ಗಮನ ಕೊಟ್ಟು ಸಾರ್ವಜನಿಕರ ಯುಕ್ತ ಅಗತ್ಯತೆಗಳನ್ನು ತೃಪ್ತಿಪಡಿಸಲು ಸಾಕಾಗುವಷ್ಟು ರೀತಿಯಲ್ಲಿ ಸಾರ್ವಜನಿಕರಿಗೆ ಪೂರ್ಣವಾಗಿಯೇ ಆಗಲಿ ಅಥವಾ ಭಾಗಶಃವಾಗಿಯೇ ಆಗಲಿ ಆ ಕೃತಿಯ ಪ್ರತಿಗಳನ್ನು ಕೊಡುವುದು;

(ಖ) ಚಲನಚಿತ್ರ ಫಿಲ್ಮಿನ ಸಂದರ್ಭದಲ್ಲಿ ಸಾರ್ವಜನಿಕರಿಗೆ ಆ ಫಿಲ್ಮನ್ನು ಅಥವಾ ಅದರ ಪ್ರತಿಗಳನ್ನು ಮಾರಾಟ ಮಾಡುವುದು ಅಥವಾ ಬಾಡಿಗೆಗೆ ಕೊಡುವುದು ಅಥವಾ ಮಾರಾಟಕ್ಕಾಗಿ ಅಥವಾ ಬಾಡಿಗೆಗಾಗಿ ಕೊಡಮಾಡುವುದು ;

(ಗ) ಧ್ವನಿಮುದ್ರಿಕೆಯ ಸಂದರ್ಭದಲ್ಲಿ, ಸಾರ್ವಜನಿಕರಿಗೆ ಸಾಕಷ್ಟು ಪ್ರಮಾಣದಲ್ಲಿ ಧ್ವನಿಮುದ್ರಿಕೆಗಳನ್ನು ಕೊಡುವುದು;

ಆದರೆ ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿದಂತೆ ಹೊರತು ; ಇ...

(i) ಸಾಹಿತ್ಯಕ, ನಾಟಕ ಅಥವಾ ಸಂಗೀತ ಅಥವಾ ಕಲಾತ್ಮಕ ಕೃತಿಯ ಸಂದರ್ಭದಲ್ಲಿ ಅಂಥ ಕೃತಿಯ ಧ್ವನಿಮುದ್ರಣ ಮಾಡಿದ ಯಾವುದೇ ಧ್ವನಿಮುದ್ರಿಕೆಯನ್ನು ಕೊಡುವುದನ್ನು;

(ii) ಶಿಲ್ಪಕೃತಿ ಅಥವಾ ವಾಸ್ತುಶಿಲ್ಪ ಕಲಾಕೃತಿಯ ಸಂದರ್ಭದಲ್ಲಿ ಅಂಥ ಕೃತಿಯ ಛಾಯ ಚಿತ್ರಗಳನ್ನು ಮತ್ತು ಕೆತ್ತನೆಗಳನ್ನು ಕೊಡುವುದನ್ನು

—ಒಳಗೊಳ್ಳುವುದಿಲ್ಲ.

**4. ಕೃತಿಯನ್ನು ಪ್ರಕಟಿಸಿರುವುದಾಗಿ ಅಥವಾ ಸಾರ್ವಜನಿಕವಾಗಿ ಪ್ರಸ್ತುತ ಪಡಿಸಿರುವುದಾಗಿ ಯಾವಾಗ ಭಾವಿಸತಕ್ಕದಲ್ಲ :**—ಕೃತಿ ಸ್ವಾಮ್ಯದ ಅತಿಲಂಘನೆಗೆ ಸಂಬಂಧಪಟ್ಟಂತೆ ಹೊರತು, ಕೃತಿಸ್ವಾಮ್ಯದ ಒಡೆಯನ ಲೈಸೆನ್ಸು ಇಲ್ಲದೆ ಪ್ರಕಟಿಸಿದರೆ ಅಥವಾ ಸಾರ್ವಜನಿಕವಾಗಿ ಪ್ರದರ್ಶಿಸಿದರೆ ಅದನ್ನು ಪ್ರಕಟಿಸಿರುವುದಾಗಿ ಅಥವಾ ಸಾರ್ವಜನಿಕವಾಗಿ ಪ್ರದರ್ಶಿಸಿರುವುದಾಗಿ ಭಾವಿಸತಕ್ಕದಲ್ಲ.

**5. ಯಾವಾಗ ಕೃತಿಯನ್ನು ಭಾರತದಲ್ಲಿ ಮೊದಲು ಪ್ರಕಟಿಸಿರುವುದಾಗಿ ಭಾವಿಸತಕ್ಕದ್ದು :—** ಈ ಅಧಿನಿಯಮದ ಉದ್ದೇಶಗಳಿಗಾಗಿ, ಭಾರತದಲ್ಲಿ ಪ್ರಕಟವಾದ ಕೃತಿಯನ್ನು, ಬೇರೆ ಯಾವುದೇ ದೇಶದಲ್ಲಿ ಏಕಕಾಲದಲ್ಲಿ ಅದನ್ನು ಪ್ರಕಟಿಸಲಾಗಿದ್ದಾಗ್ಯೂ, ಅಂಥ ಕೃತಿಗಾಗಿ ಕೃತಿ ಸ್ವಾಮ್ಯಕ್ಕೆ ಕಡಿಮೆ ಅವಧಿಯನ್ನು ಅಂಥ ಇತರ ದೇಶವು ಒದಗಿಸಿದ ಹೊರತು, ಭಾರತದಲ್ಲಿ ಮೊದಲು ಪ್ರಕಟವಾಗಿರುವುದಾಗಿ ಭಾವಿಸತಕ್ಕದ್ದು, ಮತ್ತು ಕೃತಿಯನ್ನು, ಭಾರತದಲ್ಲಿನ ಪ್ರಕಟಣೆ ಮತ್ತು ಅಂಥ ಇತರ ದೇಶದಲ್ಲಿ ಪ್ರಕಟಣೆ ಇವುಗಳ ನಡುವಣ ಕಾಲವು ಮೂವತ್ತು ದಿವಸಗಳಿಗೆ ಅಥವಾ ಕೇಂದ್ರ ಸರ್ಕಾರವು ಯಾವುದೇ ನಿರ್ದಿಷ್ಟ ದೇಶಕ್ಕೆ ಸಂಬಂಧಪಟ್ಟಂತೆ ನಿರ್ಧರಿಸಬಹುದಾದಂಥ ಇತರ ಅವಧಿಯನ್ನು ಮೀರದಿದ್ದರೆ, ಭಾರತದಲ್ಲಿ ಮತ್ತು ಇತರ ದೇಶದಲ್ಲಿ ಏಕಕಾಲದಲ್ಲಿ ಪ್ರಕಟಿಸಿರುವುದಾಗಿ ಭಾವಿಸತಕ್ಕದ್ದು.

**6. ಕೆಲವು ವಿವಾದಗಳನ್ನು ಕೃತಿಸ್ವಾಮ್ಯ ಮಂಡಲಿಯು ತೀರ್ಮಾನಿಸತಕ್ಕದ್ದು:—**(ಕ) (3)ನೇ ಪ್ರಕರಣದ ಉದ್ದೇಶಗಳಿಗಾಗಿ, ಯಾವುದೇ,—

(i) ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಯ ಪ್ರತಿಗಳನ್ನು ಸಾರ್ವಜನಿಕರ ಯುಕ್ತ ಅಗತ್ಯತೆಗಳನ್ನು ತೃಪ್ತಿಪಡಿಸಲು ಸಾಕಾಗುವಷ್ಟು ರೀತಿಯಲ್ಲಿ ಸಾರ್ವಜನಿಕರಿಗೆ ಕೊಡಲಾಗಿದೆಯೋ ; ಅಥವಾ

(ii) ಸಾರ್ವಜನಿಕರಿಗೆ ಸಾಕಷ್ಟು ಪ್ರಮಾಣಗಳಲ್ಲಿ ಯಾವುದೇ ಧ್ವನಿಮುದ್ರಿಕೆಗಳ ಪ್ರತಿಗಳನ್ನು ಕೊಡಲಾಗಿದೆಯೋ; ಅಥವಾ

(ಖ) 5ನೇ ಪ್ರಕರಣದ ಉದ್ದೇಶಗಳಿಗಾಗಿ, ಈ ಅಧಿನಿಯಮದ ಮೇರೆಗೆ ಆ ಕೃತಿಗೆ ಸಂಬಂಧಿಸಿದಂತೆ ಒದಗಿಸಿರುವುದಕ್ಕಿಂತ ಇತರ ಯಾವುದೇ ದೇಶದಲ್ಲಿ ಯಾವುದೇ ಕೃತಿಗಾಗಿ ಕೃತಿ ಸ್ವಾಮ್ಯದ ಅವಧಿಯು ಕಡಿಮೆಯಾಗಿದೆಯೋ ಹೇಗೆ—ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಅದನ್ನು 11ನೇ ಪ್ರಕರಣದ ಮೇರೆಗೆ ರಚಿಸಲಾದ ಕೃತಿ ಸ್ವಾಮ್ಯ ಮಂಡಲಿಗೆ ಒಪ್ಪಿಸತಕ್ಕದ್ದು; ಆ ಬಗ್ಗೆ ಮಂಡಲಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

**7. ಅಪ್ರಕಟಿತ ಕೃತಿಯ ರಚನೆಯನ್ನು ಗಣನೀಯ ಅವಧಿಯವರೆಗೆ ವಿಸ್ತರಿಸಿರುವಲ್ಲಿ ಕರ್ತೃವಿನ ರಾಷ್ಟ್ರೀಯತೆ:—** ಅಪ್ರಕಟಿತ ಕೃತಿಯ ಸಂದರ್ಭದಲ್ಲಿ ಆ ಕೃತಿಯ ರಚನೆಯನ್ನು ಗಣನೀಯ ಅವಧಿಯವರೆಗೆ ವಿಸ್ತರಿಸಿರುವಲ್ಲಿ, ಆ ಕೃತಿಯ ಕರ್ತೃವನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ಅವಧಿಯ ಯಾವುದೇ ಮುಖ್ಯ ಭಾಗದಲ್ಲಿ ಅವನು ಯಾವ ದೇಶದ ನಾಗರಿಕನಾಗಿದ್ದನೋ ಅಥವಾ ಎಲ್ಲಿ ಅಧಿವಾಸಿಯಾಗಿದ್ದನೋ ಆ ದೇಶದ ನಾಗರಿಕನೆಂದು ಅಥವಾ ಅಧಿವಾಸಿಯೆಂಬುದಾಗಿ ಭಾವಿಸತಕ್ಕದ್ದು.

**8. ನಿಗಮಗಳ ಅಧಿವಾಸ:—**ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಗಮಿತ ನಿಕಾಯವನ್ನು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅದು ನಿಗಮಿತವಾಗಿದ್ದರೆ ಭಾರತದಲ್ಲಿ ಅಧಿವಾಸಿಯಾಗಿರುವುದಾಗಿ ಭಾವಿಸತಕ್ಕದ್ದು.

## ಅಧ್ಯಾಯ— II

## ಕೃತಿಸ್ವಾಮ್ಯ ಕಚೇರಿ ಮತ್ತು ಕೃತಿಸ್ವಾಮ್ಯ ಮಂಡಲಿ

**9. ಕೃತಿಸ್ವಾಮ್ಯ ಕಚೇರಿ:—**(1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಕೃತಿಸ್ವಾಮ್ಯ ಕಚೇರಿಯೆಂದು ಕರೆಯಲಾಗುವ ಒಂದು ಕಚೇರಿಯನ್ನು ಸ್ಥಾಪಿಸತಕ್ಕದ್ದು.

(2) ಕೃತಿಸ್ವಾಮ್ಯ ಕಚೇರಿಯು ಕೃತಿಸ್ವಾಮ್ಯ ರಿಜಿಸ್ಟ್ರಾರನ ನೇರ ನಿಯಂತ್ರಣದಲ್ಲಿ ಇರತಕ್ಕದ್ದು, ಅವನು ಕೇಂದ್ರ ಸರ್ಕಾರದ ಅಧೀಕ್ಷಣೆ ಮತ್ತು ನಿರ್ದೇಶನದ ಮೇರೆಗೆ ಕೆಲಸ ಮಾಡತಕ್ಕದ್ದು.

(3) ಕೃತಿ ಸ್ವಾಮ್ಯ ಕಚೇರಿಗೆ ಒಂದು ಮೊಹರು ಇರತಕ್ಕದ್ದು.

**10. ಕೃತಿಸ್ವಾಮ್ಯಗಳ ರಿಜಿಸ್ಟ್ರಾರ್ ಮತ್ತು ಡೆಪ್ಯುಟಿ ರಿಜಿಸ್ಟ್ರಾರರುಗಳು:—**(1) ಕೇಂದ್ರ ಸರ್ಕಾರವು ಕೃತಿ ಸ್ವಾಮ್ಯಗಳ ರಿಜಿಸ್ಟ್ರಾರರನ್ನು ನೇಮಕ ಮಾಡತಕ್ಕದ್ದು ಮತ್ತು ಒಬ್ಬರು ಅಥವಾ ಹೆಚ್ಚಿನ ಕೃತಿಸ್ವಾಮ್ಯಗಳ ಡೆಪ್ಯುಟಿ ರಿಜಿಸ್ಟ್ರಾರರನ್ನು ನೇಮಕ ಮಾಡಬಹುದು.

(2) ಕೃತಿಸ್ವಾಮ್ಯಗಳ ಡೆಪ್ಯುಟಿ ರಿಜಿಸ್ಟ್ರಾರನು, ರಿಜಿಸ್ಟ್ರಾರನು ಕಾಲಕಾಲಕ್ಕೆ ತನಗೆ ವಹಿಸಬಹುದಾದ ಈ ಅಧಿನಿಯಮದ ಮೇರೆಗಿನ ರಿಜಿಸ್ಟ್ರಾರನ ಅಂಥ ಪ್ರಕಾರ್ಯಗಳನ್ನು ಕೃತಿಸ್ವಾಮ್ಯಗಳ ರಿಜಿಸ್ಟ್ರಾರನ ಅಧೀಕ್ಷಣೆ ಮತ್ತು ನಿರ್ದೇಶನದ ಮೇರೆಗೆ ನಿರ್ವಹಿಸತಕ್ಕದ್ದು; ಮತ್ತು ಈ ಅಧಿನಿಯಮದಲ್ಲಿ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಿಗೆ ಮಾಡಿದ ಯಾವುದೇ ಉಲ್ಲೇಖವು, ಹಾಗೆ ಅಂಥ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ಕೃತಿಸ್ವಾಮ್ಯಗಳ ಡೆಪ್ಯುಟಿ ರಿಜಿಸ್ಟ್ರಾರನಿಗೆ ಮಾಡಿದ ಉಲ್ಲೇಖವನ್ನು ಒಳಗೊಳ್ಳತಕ್ಕದ್ದು.

**11. ಕೃತಿಸ್ವಾಮ್ಯ ಮಂಡಲಿ:—**(1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಆದಷ್ಟು ಬೇಗನೆ, ಕೇಂದ್ರ ಸರ್ಕಾರವು ಕೃತಿಸ್ವಾಮ್ಯ ಮಂಡಲಿ ಎಂದು ಕರೆಯಲಾಗುವ ಒಂದು ಮಂಡಲಿಯನ್ನು ರಚಿಸತಕ್ಕದ್ದು. ಅದು ಒಬ್ಬ ಅಧ್ಯಕ್ಷನನ್ನು ಮತ್ತು ಇಬ್ಬರಿಗಿಂತ ಕಡಿಮೆಯಿಲ್ಲದ ಅಥವಾ ಎಂಟಕ್ಕಿಂತ ಹೆಚ್ಚು ಇಲ್ಲದ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು.

(2) ಕೃತಿಸ್ವಾಮ್ಯ ಮಂಡಲಿಯ ಅಧ್ಯಕ್ಷ ಮತ್ತು ಇತರ ಸದಸ್ಯರು ನಿಯಮಿಸಬಹುದಾದಂಥ ಅವಧಿಯವರೆಗೆ ಮತ್ತು ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪದಧಾರಣ ಮಾಡತಕ್ಕದ್ದು.

(3) ಕೃತಿಸ್ವಾಮ್ಯ ಮಂಡಲಿಯ ಅಧ್ಯಕ್ಷನು ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕ ಗೊಳ್ಳಲು ಅರ್ಹರಾಗಿರುವ ವ್ಯಕ್ತಿಯಾಗಿರತಕ್ಕದು.

(4) ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು ಕೃತಿಸ್ವಾಮ್ಯ ಮಂಡಲಿಯ ಕಾರ್ಯದರ್ಶಿಯಾಗಿರತಕ್ಕದು ಮತ್ತು ಅವನು ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದು.

**12. ಕೃತಿ ಸ್ವಾಮ್ಯ ಮಂಡಲಿಯ ಅಧಿಕಾರಗಳು ಮತ್ತು ಪ್ರಕ್ರಿಯೆ :**—(1)ಕೃತಿ ಸ್ವಾಮ್ಯ ಮಂಡಳಿಯು ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಅದರ ಉಪವೇಶನಗಳ ಸ್ಥಳಗಳನ್ನು ಮತ್ತು ವೇಳೆಗಳನ್ನು ನಿಗದಿಪಡಿಸುವುದನ್ನು ಒಳಗೊಂಡು, ತನ್ನ ಪ್ರಕ್ರಿಯೆಯನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕದು:

ಪರಂತು, ಕೃತಿಸ್ವಾಮ್ಯ ಮಂಡಲಿಯು, ವ್ಯವಹರಣೆಯನ್ನು ಹೂಡುವ ಕಾಲದಲ್ಲಿ ವ್ಯವಹರಣೆಯನ್ನು ಹೂಡುವ ವ್ಯಕ್ತಿಯು ವಾಸ್ತವವಾಗಿ ಮತ್ತು ಸ್ವಇಚ್ಛೆಯಿಂದ ವಾಸಿಸುವ ಅಥವಾ ವ್ಯವಹಾರವನ್ನು ನಡೆಸುವ ಅಥವಾ ಗಳಿಕೆಗಾಗಿ ಖುದ್ದಾಗಿ ಕೆಲಸ ಮಾಡುವಂಥ ವಲಯದೊಳಗೆ ಈ ಅಧಿನಿಯಮದ ಮೇರೆಗೆ ತನ್ನ ಮುಂದೆ ಹೂಡಲಾದ ಯಾವುದೇ ವ್ಯವಹರಣೆಯನ್ನು ಸಾಮಾನ್ಯವಾಗಿ ಸುನಾವಣೆ ಮಾಡತಕ್ಕದು.

ವಿವರಣೆ:— ಈ ಉಪಪ್ರಕರಣದಲ್ಲಿ "ವಲಯ", ಎಂದರೆ ರಾಜ್ಯ ಪುನರ್ ವಿಂಗಡಣಾ ಅಧಿನಿಯಮ, 1956 (1956ರ 37)ರ 15ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಲಯ.

(2) ಕೃತಿ ಸ್ವಾಮ್ಯ ಮಂಡಲಿಯು, ಅದರ ಅಧ್ಯಕ್ಷನು ಸದಸ್ಯರೊಳಗಿಂದ ರಚಿಸಿದ ನ್ಯಾಯಪೀಠಗಳ ಮೂಲಕ ಅದರ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಬಹುದು; ಪ್ರತಿಯೊಂದು ನ್ಯಾಯ ಪೀಠವು ಮೂವರಿಗಿಂತ ಕಡಿಮೆಯಿಲ್ಲದ ಸದಸ್ಯರಿಂದ ಕೂಡಿರತಕ್ಕದು.

(3) ಈ ಅಧಿನಿಯಮದ ಮೇರೆಗೆ ತೀರ್ಮಾನಕ್ಕಾಗಿ ಅದರ ಮುಂದೆ ಬರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕೃತಿಸ್ವಾಮ್ಯ ಮಂಡಲಿಯ ಅಥವಾ ಅದರ ಯಾವುದೇ ನ್ಯಾಯಪೀಠದ ಸದಸ್ಯರೊಳಗೆ ಭಿನ್ನಾಭಿಪ್ರಾಯವಿದ್ದರೆ, ಬಹುಮತದ ಅಭಿಪ್ರಾಯವು ಪ್ರಭಾವ ಉಳ್ಳದ್ದಾಗಿರತಕ್ಕದು :

ಪರಂತು, ಅಂಥ ಬಹುಮತವು ಇಲ್ಲದಿರುವಲ್ಲಿ,—

(i) ವಿಷಯವನ್ನು ಸುನಾವಣೆ ಮಾಡಿದ ಸದಸ್ಯರಲ್ಲಿ ಅಧ್ಯಕ್ಷನೂ ಒಬ್ಬನಾಗಿದ್ದರೆ, ಅಧ್ಯಕ್ಷನ ಅಭಿಪ್ರಾಯವು ಪ್ರಭಾವ ಉಳ್ಳದ್ದಾಗಿರತಕ್ಕದು;

(ii) ವಿಷಯವನ್ನು ಸುನಾವಣೆ ಮಾಡಿದ ಸದಸ್ಯರಲ್ಲಿ ಅಧ್ಯಕ್ಷನು ಒಬ್ಬನಾಗಿರದಿದ್ದರೆ, ಅವನ ಅಭಿಪ್ರಾಯಕ್ಕಾಗಿ ವಿಷಯವನ್ನು ಅವನಿಗೆ ಒಪ್ಪಿಸತಕ್ಕದು ಮತ್ತು ಆ ಅಭಿಪ್ರಾಯವು ಪ್ರಭಾವ ಉಳ್ಳದ್ದಾಗಿರತಕ್ಕದು.

(4) ಕೃತಿಸ್ವಾಮ್ಯ ಮಂಡಲಿಯು 74ನೇ ಪ್ರಕರಣದ ಮೇರೆಗೆ ಅದಕ್ಕೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಲು ತನ್ನ ಸದಸ್ಯರುಗಳಲ್ಲಿ ಯಾರನ್ನಾದರೂ ಅಧಿಕೃತಗೊಳಿಸಬಹುದು ಮತ್ತು ಹಾಗೆ ಅಧಿಕೃತಗೊಂಡ ಸದಸ್ಯನು ಆ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಯಾವುದೇ ಆದೇಶ ಅಥವಾ ಮಾಡಿದ ಕಾರ್ಯವನ್ನು ಸಂದರ್ಭಾನುಸಾರ ಮಂಡಲಿಯ ಆದೇಶ ಅಥವಾ ಕಾರ್ಯವೆಂದು ಭಾವಿಸತಕ್ಕದು.

(5) ಕೃತಿಸ್ವಾಮ್ಯ ಮಂಡಲಿಯ ಯಾವನೇ ಸದಸ್ಯನು ಅವನು ವೈಯಕ್ತಿಕ ಹಿತಾಸಕ್ತಿ ಹೊಂದಿರುವಂಥ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಲಿಯ ಮುಂದಿರುವ ಯಾವುದೇ ವ್ಯವಹರಣೆಯಲ್ಲಿ ಭಾಗವಹಿಸತಕ್ಕದಲ್ಲ.

(6) ಈ ಅಧಿನಿಯಮದ ಮೇರೆಗೆ ಕೃತಿ ಸ್ವಾಮ್ಯ ಮಂಡಲಿಯು ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ವ್ಯವಹರಣೆಯನ್ನು, ಮಂಡಲಿಯಲ್ಲಿನ ಯಾವುದೇ ಖಾಲಿ ಸ್ಥಾನ ಅಥವಾ ಅದರ ರಚನೆಯಲ್ಲಿ ನ್ಯೂನತೆ ಇರುವ ಕಾರಣಮಾತ್ರದಿಂದಲೇ ಪ್ರಶ್ನಿಸತಕ್ಕದಲ್ಲ.

(7) ಕೃತಿಸ್ವಾಮ್ಯ ಮಂಡಲಿಯನ್ನು ದಂಡಪ್ರಕ್ರಿಯಾ ಸಂಹಿತೆ, 1973(1974ರ 2)ರ 345 ಮತ್ತು 346ನೇ ಪ್ರಕರಣಗಳ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದು, ಮತ್ತು ಮಂಡಲಿಯ ಮುಂದೆ ಇರುವ, ಎಲ್ಲಾ ವ್ಯವಹರಣೆಗಳನ್ನು, ಭಾರತ ದಂಡ ಸಂಹಿತೆ (1860ರ 45)ಯ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕದು.

## ಅಧ್ಯಾಯ—III

## ಕೃತಿಸ್ವಾಮ್ಯ

13. ಕೃತಿಸ್ವಾಮ್ಯ ಅಸ್ತಿತ್ವದಲ್ಲಿರುವಂಥ ಕೃತಿಗಳು:—(1) ಈ ಪ್ರಕರಣದ ಉಪಬಂಧಗಳಿಗೆ ಮತ್ತು ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಈ ಕೆಳಕಂಡ ಕೃತಿಗಳ ವರ್ಗಗಳಲ್ಲಿ ಕೃತಿ ಸ್ವಾಮ್ಯವು ಭಾರತದಾದ್ಯಂತ ಅಸ್ತಿತ್ವದಲ್ಲಿರತಕ್ಕದು, ಎಂದರೆ,—

(ಕ) ಮೂಲ ಸಾಹಿತ್ಯಕ, ನಾಟಕ, ಸಂಗೀತ ಮತ್ತು ಕಲಾತ್ಮಕ ಕೃತಿಗಳು;

(ಖ) ಚಲನಚಿತ್ರ ಫಿಲ್ಮುಗಳು; ಮತ್ತು

(ಗ) ಧ್ವನಿ ಮುದ್ರಿಕೆಗಳು.

(2) 40ನೇ ಪ್ರಕರಣ ಅಥವಾ 41ನೇ ಪ್ರಕರಣದ ಉಪಬಂಧಗಳು ಅನ್ವಯಿಸುವಂಥ ಕೃತಿಯನ್ನು ಹೊರತುಪಡಿಸಿ, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಕೃತಿಯಲ್ಲಿ,—

(i) ಪ್ರಕಟಿತ ಕೃತಿಯ ಸಂದರ್ಭದಲ್ಲಿ,ಕೃತಿಯು ಭಾರತದಲ್ಲಿ ಮೊದಲು ಪ್ರಕಟವಾಗಿದ್ದ ಹೊರತು, ಅಥವಾ ಕೃತಿಯು ಭಾರತದ ಹೊರಗೆ ಮೊದಲು ಪ್ರಕಟವಾಗಿರುವಲ್ಲಿ ಕರ್ತೃವು ಅಂಥ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕದಂದು ಕರ್ತೃವು ಮೃತಪಟ್ಟಿರುವ ಸಂದರ್ಭದಲ್ಲಿ, ಅವನು ತನ್ನ ಮರಣದ ಕಾಲದಲ್ಲಿ ಭಾರತದ ನಾಗರಿಕನಾಗಿದ್ದ ಹೊರತು;

(ii) ವಾಸ್ತುಶಿಲ್ಪ ಕಲಾಕೃತಿಯನ್ನು ಹೊರತುಪಡಿಸಿ, ಅಪ್ರಕಟಿತ ಕೃತಿಯ ಸಂದರ್ಭದಲ್ಲಿ, ಕರ್ತೃವು ಕೃತಿ ರಚನೆಯ ದಿನಾಂಕದಂದು ಭಾರತದ ನಾಗರಿಕನಾಗಿದ್ದ ಅಥವಾ ಭಾರತದಲ್ಲಿ ಅಧಿವಾಸಿಯಾಗಿದ್ದ ಹೊರತು ; ಮತ್ತು

(iii) ವಾಸ್ತುಶಿಲ್ಪ ಕಲಾಕೃತಿಯ ಸಂದರ್ಭದಲ್ಲಿ, ಆ ಕೃತಿಯು ಭಾರತದಲ್ಲಿ ಇದ್ದ ಹೊರತು

—ಕೃತಿಸ್ವಾಮ್ಯವು ಅಸ್ತಿತ್ವದಲ್ಲಿರತಕ್ಕದ್ದಲ್ಲ.

ವಿವರಣೆ.— ಸಹ ಕರ್ತೃತ್ವದ ಕೃತಿಯ ಸಂದರ್ಭದಲ್ಲಿ, ಈ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕೃತಿಸ್ವಾಮ್ಯವನ್ನು ಪ್ರದಾನ ಮಾಡುವ ಷರತ್ತುಗಳನ್ನು ಕೃತಿಯ ಎಲ್ಲ ಕರ್ತೃಗಳು ಪೂರೈಸತಕ್ಕದ್ದು.

(3) ಕೃತಿಸ್ವಾಮ್ಯವು—

(ಕ) ಫಿಲ್ಮಿನ ಮುಖ್ಯ ಭಾಗವು ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯದ ಅತಿಲಂಘನವಾಗಿದ್ದರೆ, ಯಾವುದೇ ಚಲನಚಿತ್ರ ಫಿಲ್ಮಿನಲ್ಲಿ;

(ಖ) ಧ್ವನಿಮುದ್ರಿಕೆಯನ್ನು ಮಾಡುವಲ್ಲಿ, ಅಂಥ ಕೃತಿಯಲ್ಲಿನ ಕೃತಿಸ್ವಾಮ್ಯವನ್ನು ಅತಿಲಂಘಿಸಿದ್ದರೆ, ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿಗೆ ಸಂಬಂಧಿಸಿದಂತೆ ಮಾಡಿದ ಯಾವುದೇ ಧ್ವನಿಮುದ್ರಿಕೆಯಲ್ಲಿ

—ಅಸ್ತಿತ್ವದಲ್ಲಿರತಕ್ಕದ್ದಲ್ಲ.

(4) ಚಲನಚಿತ್ರದ ಅಥವಾ ಧ್ವನಿಮುದ್ರಿಕೆಯಲ್ಲಿನ ಕೃತಿಸ್ವಾಮ್ಯವು, ಯಾವ ಕೃತಿಗೆ ಅಥವಾ ಯಾವ ಕೃತಿಯ ಮುಖ್ಯ ಭಾಗಕ್ಕೆ ಸಂಬಂಧಿಸಿದಂತೆ ಫಿಲ್ಮನ್ನು ಅಥವಾ ಸಂದರ್ಭಾನುಸಾರ ಧ್ವನಿಮುದ್ರಿಕೆಯನ್ನು ಮಾಡಲಾಗಿದೆಯೋ ಆ ಯಾವುದೇ ಕೃತಿಯಲ್ಲಿನ ಪ್ರತ್ಯೇಕ ಕೃತಿಸ್ವಾಮ್ಯಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(5) ವಾಸ್ತುಶಿಲ್ಪ ಕಲಾಕೃತಿಯ ಸಂದರ್ಭದಲ್ಲಿ, ಕೃತಿಸ್ವಾಮ್ಯವು ಕಲಾತ್ಮಕ ಸ್ವರೂಪ ಮತ್ತು ವಿನ್ಯಾಸದಲ್ಲಿ ಮಾತ್ರ ಅಸ್ತಿತ್ವದಲ್ಲಿರತಕ್ಕದ್ದು ಮತ್ತು ರಚನೆಯ ಕಾರ್ಯವಿಧಾನಗಳು ಅಥವಾ ಕ್ರಮಗಳಿಗೆ ವ್ಯಾಪ್ತವಾಗತಕ್ಕದ್ದಲ್ಲ.

14. **ಕೃತಿಸ್ವಾಮ್ಯದ ಅರ್ಥ**:—(1) ಈ ಅಧಿನಿಯಮದ ಉದ್ದೇಶಗಳಿಗಾಗಿ "ಕೃತಿಸ್ವಾಮ್ಯ" ಎಂದರೆ, ಈ ಅಧಿನಿಯಮದಿಂದಾಗಿ ಮತ್ತು ಅದರ ಉಪಬಂಧಗಳಿಗೊಳಪಟ್ಟು,—

(ಕ) ಸಾಹಿತ್ಯಕ, ನಾಟಕ, ಸಂಗೀತ, ಕೃತಿಯ ಸಂದರ್ಭದಲ್ಲಿ ಕೆಳಕಂಡ ಯಾವುದೇ ಕಾರ್ಯವನ್ನು ಮಾಡುವುದು ಮತ್ತು ಮಾಡುವುದನ್ನು ಅಧಿಕೃತಗೊಳಿಸುವುದು, ಎಂದರೆ:—

(i) ಯಾವುದೇ ಸಾರಭೂತ ರೂಪದಲ್ಲಿ ಕೃತಿಯನ್ನು ಯಥಾವತ್ತಾಗಿ ನಿರೂಪಿಸಲು;

(ii) ಕೃತಿಯನ್ನು ಪ್ರಕಟಿಸಲು;

(iii) ಕೃತಿಯನ್ನು ಸಾರ್ವಜನಿಕವಾಗಿ ಪ್ರಸ್ತುತಪಡಿಸಲು;

(iv) ಕೃತಿಯ ಯಾವುದೇ ಅನುವಾದವನ್ನು ತಯಾರಿಸಲು, ಯಥಾವತ್ತಾಗಿ ನಿರೂಪಿಸಲು, ಪ್ರಸ್ತುತಪಡಿಸಲು ಅಥವಾ ಪ್ರಕಟಿಸಲು;

(v) ಕೃತಿಗೆ ಸಂಬಂಧಿಸಿದಂತೆ ಯಾವುದೇ ಚಲನಚಿತ್ರ ಫಿಲ್ಮನ್ನು ಅಥವಾ ಧ್ವನಿಮುದ್ರಿಕೆಯನ್ನು ಮಾಡಲು;

(vi) ಕೃತಿಯನ್ನು ರೇಡಿಯೋ ಪ್ರಸರಣದ ಮೂಲಕ ಬಿತ್ತರಿಸಲು ಅಥವಾ ಧ್ವನಿವರ್ಧಕ ಅಥವಾ ಅಂಥದೇ ಇತರ ಯಾವುದೇ ಉಪಕರಣದ ಮೂಲಕ ಕೃತಿಯ ರೇಡಿಯೋ ಪ್ರಸರಣವನ್ನು ಸಾರ್ವಜನಿಕರಿಗೆ ಬಿತ್ತರಿಸಲು;

(vii) ಕೃತಿಯ ಯಾವುದೇ ಅಳವಡಿಕೆಯನ್ನು ಮಾಡಲು ;

(viii) (i) ರಿಂದ (vi)ರ ವರೆಗಿನ ಖಂಡಗಳಲ್ಲಿ ಕೃತಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಯಾವುದೇ ಕಾರ್ಯವನ್ನು ಆ ಕೃತಿಯ ಅನುವಾದ ಅಥವಾ ಅಳವಡಿಕೆಗೆ ಸಂಬಂಧಪಟ್ಟಂತೆ ಮಾಡಲು;

(ಖ) ಕಲಾತ್ಮಕ ಕೃತಿಯ ಸಂದರ್ಭದಲ್ಲಿ, ಕೆಳಕಂಡ ಯಾವುದೇ ಕಾರ್ಯವನ್ನು ಮಾಡುವುದು ಅಥವಾ ಮಾಡುವುದನ್ನು ಅಧಿಕೃತಗೊಳಿಸುವುದು, ಎಂದರೆ:—

(i) ಯಾವುದೇ ಸಾರಭೂತವಾದ ರೂಪದಲ್ಲಿ ಕೃತಿಯನ್ನು ಯಥಾವತ್ತಾಗಿ ನಿರೂಪಿಸಲು;

(ii) ಕೃತಿಯನ್ನು ಪ್ರಕಟಿಸಲು;

(iii) ಯಾವುದೇ ಚಲನಚಿತ್ರ ಫಿಲ್ಮಿನಲ್ಲಿ ಕೃತಿಯನ್ನು ಸೇರಿಸಲು ;

(iv) ಕೃತಿಯ ಯಾವುದೇ ಅಳವಡಿಕೆಯನ್ನು ಮಾಡಲು ;

(v) I ರಿಂದ IIIರ ವರೆಗಿನ ಖಂಡಗಳಲ್ಲಿ ಕೃತಿಗೆ ಸಂಬಂಧಪಟ್ಟಂತೆ ನಿರ್ದಿಷ್ಟಪಡಿಸಿದ ಯಾವುದೇ ಕಾರ್ಯವನ್ನು ಕೃತಿಯನ್ನು ಅಳವಡಿಸುವುದಕ್ಕೆ ಸಂಬಂಧಪಟ್ಟಂತೆ ಮಾಡಲು ;

(ಗ) ಚಲನಚಿತ್ರ ಫಿಲ್ಮಿನ ಸಂದರ್ಭದಲ್ಲಿ, ಕೆಳಕಂಡ ಯಾವುದೇ ಕಾರ್ಯವನ್ನು ಮಾಡುವುದು ಅಥವಾ ಮಾಡುವುದನ್ನು ಅಧಿಕೃತಗೊಳಿಸಲು, ಎಂದರೆ:—

(i) ಫಿಲ್ಮಿನ ಪ್ರತಿಯನ್ನು ಮಾಡಲು ;

(ii) ದೃಶ್ಯ ಬಿಂಬಗಳನ್ನು ಒಳಗೊಂಡಿರುವಷ್ಟರಮಟ್ಟಿಗೆ ಫಿಲ್ಮನ್ನು ಸಾರ್ವಜನಿಕವಾಗಿ ನೋಡುವಂತೆ ಮತ್ತು ಶಬ್ದಗಳನ್ನು ಒಳಗೊಂಡಿರುವಷ್ಟರಮಟ್ಟಿಗೆ ಸಾರ್ವಜನಿಕವಾಗಿ ಕೇಳುವಂತೆ ಮಾಡಲು;

(iii) ಫಿಲ್ಮಿನೊಂದಿಗೆ ಸೇರಿದ ಧ್ವನಿವಾಹಿನಿಯ ಯಾವುದೇ ಭಾಗದಲ್ಲಿ ಧ್ವನಿ ಮುದ್ರಣವನ್ನು ಕೂಡಿಸಿರುವ, ಅಂಥ ಧ್ವನಿವಾಹಿನಿಯನ್ನು ಉಪಯೋಗಿಸುವುದರ ಮೂಲಕ ಯಾವುದೇ ಧ್ವನಿಮುದ್ರಿಕೆಯನ್ನು ಮಾಡಲು ;

(iv) ರೇಡಿಯೋ ಪ್ರಸರಣದ ಮೂಲಕ ಫಿಲ್ಮನ್ನು ಬಿತ್ತರಿಸಲು ;

(ಘ) ಧ್ವನಿಮುದ್ರಿಕೆಯ ಸಂದರ್ಭದಲ್ಲಿ, ಧ್ವನಿಮುದ್ರಿಕೆಯನ್ನು ಉಪಯೋಗಿಸಿಕೊಂಡು ಕೆಳಕಂಡ ಯಾವುದೇ ಕಾರ್ಯವನ್ನು ಮಾಡುವುದು ಅಥವಾ ಮಾಡುವುದನ್ನು ಅಧಿಕೃತಗೊಳಿಸಲು, ಎಂದರೆ:—

(i) ಅದೇ ಧ್ವನಿ ಮುದ್ರಣವನ್ನು ಕೂಡಿಸಿಕೊಂಡು ಯಾವುದೇ ಇತರ ಧ್ವನಿಮುದ್ರಿಕೆಯನ್ನು ಮಾಡಲು ;

(ii) ಧ್ವನಿಮುದ್ರಿಕೆಯಲ್ಲಿ ಕೂಡಿಸಿದ ಧ್ವನಿ ಮುದ್ರಣವನ್ನು ಸಾರ್ವಜನಿಕವಾಗಿ ಕೇಳುವಂತೆ ಮಾಡಲು ;

(iii) ಧ್ವನಿಮುದ್ರಿಕೆಯಲ್ಲಿ ಕೂಡಿಸಿದ ಧ್ವನಿ ಮುದ್ರಣವನ್ನು ಪ್ರಸಾರದ ಮೂಲಕ ಬಿತ್ತರಿಸಲು

–ಈ ಅಧಿನಿಯಮದ ಕಾರಣದಿಂದಾಗಿ ಮತ್ತು ಅದರ ಉಪಬಂಧಗಳಿಗೊಳಪಟ್ಟು ಇರುವ ಅನನ್ಯ ಹಕ್ಕು.

(2) ಕೃತಿ ಅಥವಾ ಅದರ ಅನುವಾದ ಅಥವಾ ಅಳವಡಿಕೆಗೆ ಸಂಬಂಧಪಟ್ಟಂತೆ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಮಾಡಿದ (1)ನೇ ಉಪಪ್ರಕರಣದಲ್ಲಿನ ಯಾವುದೇ ಉಲ್ಲೇಖವು ಅದರ ಗಣನೀಯವಾದ ಭಾಗಕ್ಕೆ ಸಂಬಂಧಪಟ್ಟಂತೆ ಆ ಕಾರ್ಯವನ್ನು ಮಾಡುವುದಕ್ಕೆ ಮಾಡಿದ ಉಲ್ಲೇಖವನ್ನು ಒಳಗೊಳ್ಳತಕ್ಕದ್ದು.

15. **ಭಾರತ ಪೇಟೆಂಟುಗಳ ಮತ್ತು ಡಿಸೈನುಗಳ ಅಧಿನಿಯಮ, 1911ರ ಮೇರೆಗೆ ನೋಂದಾಯಿಸಿದ ಅಥವಾ ನೋಂದಾಯಿಸಲು ಅರ್ಹವಾದ ವಿನ್ಯಾಸಗಳಲ್ಲಿನ ಕೃತಿ ಸ್ವಾಮ್ಯದ ಬಗ್ಗೆ ವಿಶೇಷ ಉಪಬಂಧ:–** (1) ಡಿಸೈನುಗಳ ಅಧಿನಿಯಮ, 1911(1911ರ 2)ರ ಮೇರೆಗೆ ನೋಂದಾಯಿತವಾದಂಥ ಯಾವುದೇ ವಿನ್ಯಾಸದಲ್ಲಿ ಈ ಅಧಿನಿಯಮದ ಮೇರೆಗಿನ ಕೃತಿಸ್ವಾಮ್ಯವು ಅಸ್ತಿತ್ವದಲ್ಲಿರತಕ್ಕದ್ದಲ್ಲ.

(2) ಭಾರತ ಪೇಟೆಂಟುಗಳ ಮತ್ತು ಡಿಸೈನುಗಳ ಅಧಿನಿಯಮ, 1911 (1911ರ 2)ರ ಮೇರೆಗೆ ನೋಂದಾಯಿಸಲು ಸಮರ್ಥವಾಗಿರುವಂಥ, ಆದರೆ ಹಾಗೆ ನೋಂದಾಯಿತವಾಗಿಲ್ಲದಂಥ ಯಾವುದೇ ವಿನ್ಯಾಸದಲ್ಲಿನ ಕೃತಿ ಸ್ವಾಮ್ಯವು, ವಿನ್ಯಾಸವನ್ನು ಅನ್ವಯಿಸಿರುವಂಥ ಯಾವುದೇ ವಸ್ತುವನ್ನು ಕೃತಿಸ್ವಾಮ್ಯದ ಒಡೆಯನು ಅಥವಾ ಅವನಿಂದ ಲೈಸೆನ್ಸು ಪಡೆದ ಇತರ ಯಾವನೇ ವ್ಯಕ್ತಿಯು ಔದ್ಯಮಿಕ ಕಾರ್ಯವಿಧಾನದ ಮೂಲಕ ಐವತ್ತಕ್ಕಿಂತ ಹೆಚ್ಚು ಬಾರಿ ಯಥಾವತ್ತಾಗಿ ನಿರೂಪಿಸಿದಾಗ, ನಿಂತುಹೋಗತಕ್ಕದ್ದು.

16. **ಈ ಅಧಿನಿಯಮದಲ್ಲಿ ಉಪಬಂಧಿಸಿರುವಂತೆ ಹೊರತು ಯಾವುದೇ ಕೃತಿಸ್ವಾಮ್ಯವು ಇರತಕ್ಕದ್ದಲ್ಲ :—** ಯಾವನೇ ವ್ಯಕ್ತಿಯು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಮತ್ತು ಅದಕ್ಕೆ ಅನುಸಾರವಾಗಿ ಅಲ್ಲದೆ ಅನ್ಯಥಾ ಪ್ರಕಟಿತ ಅಥವಾ ಅಪ್ರಕಟಿತ ಯಾವುದೇ ಕೃತಿಯಲ್ಲಿ ಕೃತಿಸ್ವಾಮ್ಯ ಅಥವಾ ಯಾವುದೇ ಅಂಥ ಹಕ್ಕಿಗೆ ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆದರೆ ಈ ಪ್ರಕರಣದಲ್ಲಿರುವುದು ಯಾವುದೂ ನಂಬಿಕೆ ಅಥವಾ ವಿಶ್ವಾಸ ದ್ರೋಹವನ್ನು ನಿಗ್ರಹಿಸುವ ಯಾವುದೇ ಹಕ್ಕು ಅಥವಾ ಅಧಿಕಾರ ವ್ಯಾಪ್ತಿಯನ್ನು ರದ್ದುಗೊಳಿಸುತ್ತದೆಂದು ಅರ್ಥೈಸತಕ್ಕದ್ದಲ್ಲ.

## ಅಧ್ಯಾಯ–IV

## ಕೃತಿಸ್ವಾಮ್ಯದ ಒಡೆತನ ಮತ್ತು ಒಡೆಯನ ಹಕ್ಕುಗಳು

17. **ಕೃತಿಸ್ವಾಮ್ಯದ ಮೊದಲ ಒಡೆಯ:–**ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೃತಿಯ ಕರ್ತೃವು ಅದರಲ್ಲಿನ ಕೃತಿಸ್ವಾಮ್ಯದ ಮೊದಲ ಒಡೆಯನಾಗಿರತಕ್ಕದ್ದು:

ಪರಂತು,—

(ಕ) ವೃತ್ತಪತ್ರಿಕೆ, ಮ್ಯಾಗಝಿನ್ ಅಥವಾ ಅಂಥದೇ ನಿಯತಕಾಲಿಕದಲ್ಲಿ ಪ್ರಕಟಣೆಯ ಉದ್ದೇಶಕ್ಕಾಗಿ ಸೇವಾ ಅಥವಾ ಉಮೇದುವಾರಿಕೆಯ ಕರಾರಿನ ಮೇರೆಗೆ ವೃತ್ತಪತ್ರಿಕೆ, ಮ್ಯಾಗಝಿನ್ ಅಥವಾ ಅಂಥದೇ ನಿಯತಕಾಲಿಕದ ಮಾಲೀಕನಿಂದ ಅವನ ನಿಯೋಜನೆಯಲ್ಲಿ ಕರ್ತೃವು ರಚಿಸಿದ ಸಾಹಿತ್ಯಿಕ, ನಾಟಕ ಅಥವಾ ಕಲಾತ್ಮಕ ಕೃತಿಯ ಸಂದರ್ಭದಲ್ಲಿ, ಸದರಿ ಮಾಲೀಕನು ತದ್ವಿರುದ್ಧವಾದ ಯಾವುದೇ ಒಪ್ಪಂದವಿಲ್ಲದಿದ್ದರೆ, ಯಾವುದೇ ವೃತ್ತಪತ್ರಿಕೆ, ಮ್ಯಾಗಝಿನ್ ಅಥವಾ ಅಂಥದೇ ನಿಯತಕಾಲಿಕದಲ್ಲಿ ಕೃತಿಯ ಪ್ರಕಟಣೆಗೆ ಅಥವಾ ಹಾಗೆ ಅದನ್ನು ಪ್ರಕಟಿಸುವ ಉದ್ದೇಶಕ್ಕಾಗಿ ಕೃತಿಯ ಯಥಾವತ್ತಾದ ನಿರೂಪಣೆಗೆ ಕೃತಿಸ್ವಾಮ್ಯವು ಸಂಬಂಧಪಡುವಷ್ಟರಮಟ್ಟಿಗೆ ಕೃತಿಯಲ್ಲಿನ ಕೃತಿಸ್ವಾಮ್ಯದ ಮೊದಲ ಒಡೆಯನಾಗಿರತಕ್ಕದ್ದು, ಆದರೆ ಇತರ ಎಲ್ಲ ವಿಧದಲ್ಲಿ ಕರ್ತೃವು ಕೃತಿಯಲ್ಲಿನ ಕೃತಿಸ್ವಾಮ್ಯದ ಮೊದಲ ಒಡೆಯನಾಗಿರತಕ್ಕದ್ದು ;

(ಖ) (ಕ) ಖಂಡದ ಉಪಬಂಧಗಳಿಗೆ ಒಳಪಟ್ಟು, ಯಾವನೇ ವ್ಯಕ್ತಿಯ ಸೂಚನೆಯ ಮೇರೆಗೆ ಬೆಲೆಯುಳ್ಳ ಪ್ರತಿಫಲಕ್ಕಾಗಿ ತೆಗೆದುಕೊಂಡ ಛಾಯಾಚಿತ್ರ, ಬಿಡಿಸಿದ ವರ್ಣಚಿತ್ರ ಅಥವಾ ಭಾವಚಿತ್ರ ಅಥವಾ ಮಾಡಿದ ಕೆತ್ತನೆ ಅಥವಾ ಚಲನಚಿತ್ರ ಫಿಲ್ಮಿನ ಸಂದರ್ಭದಲ್ಲಿ ಅಂಥ ವ್ಯಕ್ತಿಯು, ತದ್ವಿರುದ್ಧವಾದ ಯಾವುದೇ ಒಪ್ಪಂದವಿಲ್ಲದಿದ್ದಲ್ಲಿ, ಅದರಲ್ಲಿನ ಕೃತಿಸ್ವಾಮ್ಯದ ಮೊದಲ ಒಡೆಯನಾಗಿರತಕ್ಕದ್ದು ;

(ಗ) (ಕ) ಅಥವಾ (ಖ) ಖಂಡವು ಅನ್ವಯಿಸದಿರುವಂಥ ಸೇವೆ ಅಥವಾ ಉಮೇದುವಾರಿಕೆಯ ಕರಾರಿನ ಮೇರೆಗೆ ಕರ್ತೃವಿನ ನಿಯೋಜನೆಯಲ್ಲಿ ರಚಿಸಿದ ಕೃತಿಯ ಸಂದರ್ಭದಲ್ಲಿ, ನಿಯೋಜಕನು ತದ್ವಿರುದ್ಧವಾಗಿ ಯಾವುದೇ ಒಪ್ಪಂದವಿಲ್ಲದಿದ್ದರೆ, ಅದರಲ್ಲಿನ ಕೃತಿಸ್ವಾಮ್ಯದ ಮೊದಲ ಒಡೆಯನಾಗಿರತಕ್ಕದ್ದು ;

(ಗಗ) ಸಾರ್ವಜನಿಕವಾಗಿ ಮಾಡಿದ ಯಾವುದೇ ಭಾಷಣ ಅಥವಾ ಉಪನ್ಯಾಸದ ಸಂದರ್ಭದಲ್ಲಿ, ಅಂಥ ಭಾಷಣ ಅಥವಾ ಉಪನ್ಯಾಸವನ್ನು ಮಾಡಿದ ವ್ಯಕ್ತಿಯು ಅಥವಾ ಅಂಥ ವ್ಯಕ್ತಿಯು ಯಾವನೇ ಇತರ ವ್ಯಕ್ತಿಯ ಪರವಾಗಿ ಅಂಥ ಭಾಷಣ ಅಥವಾ ಉಪನ್ಯಾಸವನ್ನು ಮಾಡಿದ್ದರೆ, ಅಂಥ ಇತರ ವ್ಯಕ್ತಿಯು, ಅಂಥ ಭಾಷಣ ಅಥವಾ ಉಪನ್ಯಾಸವನ್ನು ಮಾಡಿದ ವ್ಯಕ್ತಿ ಅಥವಾ ಸಂದರ್ಭಾನುಸಾರ ಅಥವಾ ಅಂಥ ಭಾಷಣ ಅಥವಾ ಉಪನ್ಯಾಸವನ್ನು ಯಾರ ಪರವಾಗಿ ಮಾಡಲಾಯಿತೋ ಆ ವ್ಯಕ್ತಿಯನ್ನು ಅಂಥ ಭಾಷಣ ಅಥವಾ ಉಪನ್ಯಾಸವನ್ನು ವ್ಯವಸ್ಥೆ ಮಾಡುವ ಅಥವಾ ಅಂಥ ಭಾಷಣ ಅಥವಾ ಉಪನ್ಯಾಸವನ್ನು ಯಾರ ಪರವಾಗಿ ಮಾಡಲಾಯಿತೋ ಅಥವಾ ಯಾರ ಆವರಣದಲ್ಲಿ ಮಾಡಲಾಯಿತೋ ಆ ಯಾವನೇ ಇತರ ವ್ಯಕ್ತಿಯು ನಿಯೋಜಿಸಿದ್ದಾಗ್ಯೂ, ಅದರಲ್ಲಿನ ಕೃತಿ ಸ್ವಾಮ್ಯದ ಮೊದಲ ಒಡೆಯನಾಗಿರತಕ್ಕದ್ದು;

(ಘ) ಸರ್ಕಾರಿ ಕೃತಿಯ ಸಂದರ್ಭದಲ್ಲಿ, ತದ್ವಿರುದ್ಧವಾದ ಯಾವುದೇ ಒಪ್ಪಂದವಿಲ್ಲದಿದ್ದರೆ, ಸರ್ಕಾರವು ಅದರಲ್ಲಿನ ಕೃತಿಸ್ವಾಮ್ಯದ ಮೊದಲ ಒಡೆಯನಾಗಿರತಕ್ಕದ್ದು;

(ಘಘ) ಯಾವುದೇ ಸರ್ಕಾರಿ ಉದ್ಯಮದ ನಿರ್ದೇಶನ ಅಥವಾ ನಿಯಂತ್ರಣದ ಮೂಲಕ ಅಥವಾ ಮೇರೆಗೆ ರಚಿಸಿದ ಅಥವಾ ಪ್ರಥಮವಾಗಿ ಪ್ರಕಟಿಸಿದ ಕೃತಿಯ ಸಂದರ್ಭದಲ್ಲಿ, ಅಂಥ ಸರ್ಕಾರಿ ಉದ್ಯಮವು ತದ್ವಿರುದ್ಧವಾಗಿ ಯಾವುದೇ ಒಪ್ಪಂದವು ಇಲ್ಲದಿರುವಲ್ಲಿ ಅದರಲ್ಲಿನ ಕೃತಿಸ್ವಾಮ್ಯದ ಮೊದಲ ಒಡೆಯನಾಗಿರತಕ್ಕದ್ದು;

ವಿವರಣೆ.— ಈ ಖಂಡ ಮತ್ತು 28ಕ ಪ್ರಕರಣದ ಉದ್ದೇಶಗಳಿಗಾಗಿ 'ಸರ್ಕಾರಿ ಉದ್ಯಮ' ಎಂದರೆ —

(i) ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಉದ್ಯಮ; ಅಥವಾ

(ii) ಕಂಪನಿಗಳ ಅಧಿನಿಯಮ, 1956 (1956ರ 1)ರಲ್ಲಿ 617ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ಸರ್ಕಾರಿ ಕಂಪನಿ; ಅಥವಾ

(iii) ಯಾವುದೇ ಕೇಂದ್ರ, ಪ್ರಾಂತ್ಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿಸಿದ ನಿಗಮಿಂತ ನಿಕಾಯ.

(ಙ) 41ನೇ ಪ್ರಕರಣದ ಉಪಬಂಧಗಳು ಅನ್ವಯಿಸುವಂಥ ಕೃತಿಯ ಸಂದರ್ಭದಲ್ಲಿ, ಸಂಬಂಧಿಸಿದ ಅಂತರ ರಾಷ್ಟ್ರೀಯ ಸಂಸ್ಥೆಯು ಅದರಲ್ಲಿನ ಕೃತಿ ಸ್ವಾಮ್ಯದ ಮೊದಲ ಒಡೆಯನಾಗಿರತಕ್ಕದ್ದು.

18. **ಕೃತಿಸ್ವಾಮ್ಯದ ಹಸ್ತಾಂತರಣ:**—(1) ಅಸ್ತಿತ್ವದಲ್ಲಿರುವ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯ ಅಥವಾ ಮುಂದಿನ ಕೃತಿಯಲ್ಲಿನ ಕೃತಿಸ್ವಾಮ್ಯದ ಭಾವೀ ಒಡೆಯನು ಯಾವನೇ ವ್ಯಕ್ತಿಗೆ, ಕೃತಿಸ್ವಾಮ್ಯವನ್ನು ಪೂರ್ಣವಾಗಿ ಅಥವಾ ಭಾಗಶಃ ಮತ್ತು ಸಾಮಾನ್ಯವಾಗಿ ಅಥವಾ ಪರಿಮಿತಿಗಳಿಗೊಳಪಟ್ಟು ಮತ್ತು ಕೃತಿ ಸ್ವಾಮ್ಯದ ಪೂರ್ಣ ಅವಧಿಗಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಹಸ್ತಾಂತರಿಸಬಹುದು :

ಪರಂತು, ಯಾವುದೇ ಮುಂದಿನ ಕೃತಿಯಲ್ಲಿನ ಕೃತಿಸ್ವಾಮ್ಯದ ಹಸ್ತಾಂತರಣದ ಸಂದರ್ಭದಲ್ಲಿ, ಹಸ್ತಾಂತರಣವು, ಕೃತಿಯು ಅಸ್ತಿತ್ವಕ್ಕೆ ಬಂದಾಗ ಮಾತ್ರ ಪರಿಣಾಮಕಾರಿಯಾಗತಕ್ಕದ್ದು.

(2) ಕೃತಿಸ್ವಾಮ್ಯದ ಹಸ್ತಾಂತರಣ ಪಡೆದವನು, ಕೃತಿ ಸ್ವಾಮ್ಯದಲ್ಲಿ ಅಡಕವಾದ ಯಾವುದೇ ಹಕ್ಕಿಗೆ ಹಕ್ಕುಳ್ಳವನಾದರೆ, ಹಾಗೆ ಹಸ್ತಾಂತರಿಸಿದ ಹಕ್ಕುಗಳ ಬಗ್ಗೆ ಹಸ್ತಾಂತರಣ ಪಡೆದವನು ಮತ್ತು ಹಸ್ತಾಂತರಣ ಮಾಡಿಲ್ಲದ ಹಕ್ಕುಗಳ ಬಗ್ಗೆ ಹಸ್ತಾಂತರಣಕಾರನನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಕೃತಿಸ್ವಾಮ್ಯದ ಒಡೆಯನೆಂದು ಪರಿಗಣಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ತದನುಸಾರವಾಗಿ ಪರಿಣಾಮಕಾರಿಯಾಗಿರತಕ್ಕದ್ದು.

(3) ಈ ಪ್ರಕರಣದಲ್ಲಿ, ಯಾವುದೇ ಮುಂದಿನ ಕೃತಿಯಲ್ಲಿನ ಕೃತಿಸ್ವಾಮ್ಯದ ಹಸ್ತಾಂತರಣದ ಬಗ್ಗೆ "ಹಸ್ತಾಂತರಣ ಪಡೆದವನು" ಎಂಬ ಪದವು ಕೃತಿಯು ಅಸ್ತಿತ್ವಕ್ಕೆ ಬರುವ ಮುಂಚೆ ಹಸ್ತಾಂತರಣ ಪಡೆದವನು ಮೃತನಾದರೆ, ಹಸ್ತಾಂತರಣ ಪಡೆದವನ ಕಾನೂನು ಸಮ್ಮತ ಪ್ರತಿನಿಧಿಗಳನ್ನು ಒಳಗೊಳ್ಳುತ್ತದೆ.

19 **ಹಸ್ತಾಂತರಣದ ವಿಧಾನ:**—(1) ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯದ ಯಾವುದೇ ಹಸ್ತಾಂತರಣವು ಅದು ಬರಹದಲ್ಲಿದ್ದು ಹಸ್ತಾಂತರಣಕಾರ ಅಥವಾ ಅವನು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಏಜೆಂಟನು ರುಜು ಮಾಡಿದ್ದ ಹೊರತು ಸಿಂಧುವಾಗಿರತಕ್ಕದ್ದಲ್ಲ.

(2) ಯಾವುದೇ ಕೃತಿಯಲ್ಲಿನ ಕೃತಿ ಸ್ವಾಮ್ಯದ ಹಸ್ತಾಂತರಣವು, ಇತರ ವಿಷಯಗಳ ಜತೆಗೆ ಹಸ್ತಾಂತರಣ ಮಾಡಲು ಉದ್ದೇಶಿಸಿದ ಹಕ್ಕುಗಳು ಮತ್ತು ಆ ಕೃತಿಯ ಗಾತ್ರವನ್ನು ಸ್ಪಷ್ಟವಾಗಿ ಸೂಚಿಸತಕ್ಕದ್ದು.

19ಕ. **ಕೃತಿಸ್ವಾಮ್ಯದ ಹಸ್ತಾಂತರಣಕ್ಕೆ ಸಂಬಂಧಿಸಿದಂತೆ ವಿವಾದಗಳು :**— ಯಾವುದೇ ಕೃತಿಸ್ವಾಮ್ಯದ ಹಸ್ತಾಂತರಣ ಅಥವಾ ಹಸ್ತಾಂತರಣದ ಯಾವುದೇ ನಿಬಂಧನೆಗಳಿಗೆ ಸಂಬಂಧಿಸಿದಂತೆ ಯಾವುದೇ ವಿವಾದವು ಉದ್ಭವಿಸಿದಲ್ಲಿ, ಕೃತಿಸ್ವಾಮ್ಯ ಮಂಡಲಿಯು, ಆ ವಿವಾದದ ಯಾರೇ ಪಕ್ಷಕಾರರಿಂದ ದೂರನ್ನು ಸ್ವೀಕರಿಸಿದ ಮೇಲೆ ಅದು ಅವಶ್ಯಕವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಕೃತಿಸ್ವಾಮ್ಯದ ಒಡೆಯನಿಗೆ ಹಸ್ತಾಂತರಣದ ನಿಬಂಧನೆಗಳು ಕಠಿಣವಾಗಿದ್ದರೆ ಅಥವಾ ಪ್ರಕಾಶಕನು ಕೃತಿಯ ಪ್ರಕಟಣೆಯನ್ನು ಅನುಚಿತವಾಗಿ ವಿಳಂಬ ಮಾಡಿದರೆ, ಆ ಕೃತಿಸ್ವಾಮ್ಯದ ಒಡೆಯನಿಗೆ ಅದರ ಹಸ್ತಾಂತರಣವನ್ನು ರದ್ದು ಮಾಡಲು ಅನುಮತಿಯನ್ನು ಕೊಡುವ ರೂಪದಲ್ಲಿ ಅಥವಾ ಆ ಒಡೆಯನಿಗೆ ಬರಬೇಕಾದ ಯಾವುದೇ ಸ್ವಾಮ್ಯ ಶುಲ್ಕವನ್ನು ವಸೂಲು ಮಾಡುವುದಕ್ಕಾಗಿ ಪ್ರಮಾಣಪತ್ರವನ್ನು ಹೊರಡಿಸುವ ರೂಪದ ಆದೇಶಗಳನ್ನು ಒಳಗೊಂಡು ಅದು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಮಾಡಬಹುದು.

20. **ಮರಣಶಾಸನಿಕ ವಿಲೇವಾರಿಯ ಮೂಲಕ ಹಸ್ತಪ್ರತಿಯಲ್ಲಿನ ಕೃತಿಸ್ವಾಮ್ಯದ ವರ್ಗಾವಣೆ:**—ಮರಣಶಾಸನ ದಾನದ ಮೇರೆಗೆ ಒಬ್ಬ ವ್ಯಕ್ತಿಯು ಸಾಹಿತ್ಯಕ, ನಾಟಕ, ಸಂಗೀತ ಕೃತಿಯ ಹಸ್ತಪ್ರತಿಗೆ ಅಥವಾ ಕಲಾತ್ಮಕ ಕೃತಿಗೆ ಹಕ್ಕುಳ್ಳವನಾಗಿರುವಲ್ಲಿ, ಮತ್ತು ಕೃತಿಯನ್ನು ಮರಣಶಾಸನಕರ್ತನ ಮರಣಕ್ಕೆ ಮುಂಚೆ ಪ್ರಕಟಣೆ ಮಾಡಿಲ್ಲದಿದ್ದಲ್ಲಿ, ಮರಣ ಶಾಸನ ದಾನವು, ಮರಣ ಶಾಸನ ಕರ್ತನ ಮರಣಶಾಸನದಲ್ಲಿ ಅಥವಾ ಅದರ ಯಾವುದೇ ಮರಣ ಶಾಸನದ ಅನುಬಂಧದಲ್ಲಿ

ತದ್ವಿರುದ್ಧವಾದ ಉದ್ದೇಶವನ್ನು ಸೂಚಿಸಿದ್ದ ಹೊರತು, ಅವನ ಮರಣಕ್ಕೆ ನಿಕಟಪೂರ್ವದಲ್ಲಿ ಮರಣಶಾಸನ ಕರ್ತನು ಕೃತಿಸ್ವಾಮ್ಯದ ಒಡೆಯನಾಗಿದ್ದುದ್ದರಷ್ಟರಮಟ್ಟಿಗೆ ಕೃತಿಯಲ್ಲಿನ ಕೃತಿಸ್ವಾಮ್ಯವು ಒಳಗೊಂಡಿರುವುದೆಂದು ಅರ್ಥೈಸತಕ್ಕದ್ದು.

ವಿವರಣೆ.—ಈ ಪ್ರಕರಣದಲ್ಲಿ "ಹಸ್ತಪ್ರತಿ" ಎಂಬ ಪದಕ್ಕೆ ಕೈಬರಹದಲ್ಲಿರಲಿ ಅಥವಾ ಇಲ್ಲದಿರಲಿ ಕೃತಿಯನ್ನು ಒಳಗೊಂಡ ಮೂಲಕ ದಸ್ತಾವೇಜು ಎಂದು ಅರ್ಥ.

21. **ಕೃತಿಸ್ವಾಮ್ಯವನ್ನು ಬಿಟ್ಟುಕೊಡಲು ಕರ್ತೃವಿನ ಹಕ್ಕು**:—(1) ಕೃತಿಯ ಕರ್ತೃವು ಕೃತಿಯಲ್ಲಿನ ಕೃತಿಸ್ವಾಮ್ಯದಲ್ಲಿ ಒಳಗೊಂಡ ಎಲ್ಲ ಅಥವಾ ಯಾವುದೇ ಹಕ್ಕನ್ನು ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಿಗೆ ನಿಯಮಿಸಿದ ನಮೂನೆಯಲ್ಲಿ ನೋಟೀಸನ್ನು ಕೊಡುವುದರ ಮೂಲಕ ಬಿಟ್ಟುಕೊಡಬಹುದು ಮತ್ತು ಆ ತರುವಾಯ ಅಂಥ ಹಕ್ಕುಗಳು (3)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ನೋಟೀಸಿನ ದಿನಾಂಕದಿಂದ ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನೋಟೀಸನ್ನು ಸ್ವೀಕರಿಸಿದ ಮೇಲೆ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು, ಸರ್ಕಾರಿ ರಾಜಪತ್ರದಲ್ಲಿ ಮತ್ತು ತಾನು ಯೋಗ್ಯವೆಂದು ಭಾವಿಸಬಹುದಾದಂಥ ಇತರ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು.

(3) ಕೃತಿಯಲ್ಲಿನ ಕೃತಿಸ್ವಾಮ್ಯದಲ್ಲಿ ಅಡಕವಾಗಿರುವ ಎಲ್ಲಾ ಅಥವಾ ಯಾವುದೇ ಹಕ್ಕನ್ನು ಬಿಟ್ಟುಕೊಡುವುದು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸಿನ ದಿನಾಂಕದಂದು ಯಾವನೇ ವ್ಯಕ್ತಿಯ ಪರವಾಗಿ ಅಸ್ತಿತ್ವದಲ್ಲಿರುವ ಯಾವುವೇ ಹಕ್ಕುಗಳಿಗೆ ಬಾಧಕವನ್ನುಂಟು ಮಾಡತಕ್ಕದಲ್ಲ.

## ಅಧ್ಯಾಯ—V

## ಕೃತಿ ಸ್ವಾಮ್ಯದ ಅವಧಿ

22. **ಪ್ರಕಟಿತ ಸಾಹಿತ್ಯಕ, ನಾಟಕ, ಸಂಗೀತ ಮತ್ತು ಕಲಾತ್ಮಕ ಕೃತಿಗಳಲ್ಲಿನ ಕೃತಿಸ್ವಾಮ್ಯದ ಅವಧಿ**:— ಇಲ್ಲಿ ಇನ್ನು ಮುಂದೆ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಕರ್ತೃವಿನ ಜೀವಿತ ಕಾಲದೊಳಗೆ ಪ್ರಕಟಿಸಿದ (ಛಾಯಾ ಚಿತ್ರವನ್ನು ಹೊರತುಪಡಿಸಿ) ಯಾವುದೇ ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಯಲ್ಲಿನ ಕೃತಿಸ್ವಾಮ್ಯವು, ಕರ್ತೃವು ಮರಣ ಹೊಂದಿದಂಥ ವರ್ಷದ ಮುಂಬರುವ ಕ್ಯಾಲೆಂಡರ್ ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದ್ದು.

ವಿವರಣೆ.—ಈ ಪ್ರಕರಣದಲ್ಲಿ ಕರ್ತೃವು ಮಾಡಿದ ಉಲ್ಲೇಖವನ್ನು, ಸಹ ಕರ್ತೃತ್ವದ ಕೃತಿಯ ಸಂದರ್ಭದಲ್ಲಿ, ಕಡೆಯಲ್ಲಿ ಮರಣ ಹೊಂದಿದ ಕರ್ತೃವಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

23. **ಅನಾಮಧೇಯ ಮತ್ತು ಲೇಖನಾಮದ ಕೃತಿಗಳಲ್ಲಿನ ಕೃತಿಸ್ವಾಮ್ಯದ ಅವಧಿ**:—ಅನಾಮಧೇಯವಾಗಿ ಅಥವಾ ಲೇಖನಾಮದಲ್ಲಿ ಪ್ರಕಟಿಸಿದಂಥ (ಛಾಯಾಚಿತ್ರವನ್ನು ಹೊರತುಪಡಿಸಿ) ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಯ ಸಂದರ್ಭದಲ್ಲಿ ಕೃತಿಸ್ವಾಮ್ಯವು, ಕೃತಿಯನ್ನು ಮೊದಲು ಪ್ರಕಟಿಸಿದಂಥ ವರ್ಷದ ಮುಂಬರುವ ಕ್ಯಾಲೆಂಡರು ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದ್ದು :

ಪರಂತು, ಸದರಿ ಅವಧಿಯ ಮುಕ್ತಾಯಕ್ಕೆ ಮುಂಚೆ ಕರ್ತೃವಿನ ಗುರುತನ್ನು ಬಹಿರಂಗ ಪಡಿಸಿದಲ್ಲಿ ಕೃತಿಸ್ವಾಮ್ಯವು, ಕರ್ತೃವು ಮರಣಹೊಂದಿದಂಥ ವರ್ಷದ ಮುಂಬರುವ ಕ್ಯಾಲೆಂಡರು ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದ್ದು.

(2) (1) ನೇ ಉಪಪ್ರಕರಣದಲ್ಲಿ, ಕರ್ತೃವಿಗೆ ಮಾಡಿದ ಉಲ್ಲೇಖಗಳನ್ನು ಸಹಕರ್ತೃತ್ವದ ಅನಾಮಧೇಯ ಕೃತಿಯ ಸಂದರ್ಭದಲ್ಲಿ,—

(ಕ) ಕರ್ತೃಗಳಲ್ಲಿ ಒಬ್ಬನ ಗುರುತನ್ನು ಬಹಿರಂಗಪಡಿಸಿರುವಲ್ಲಿ, ಆ ಕರ್ತೃವಿಗೆ ಮಾಡಿದ ಉಲ್ಲೇಖವೆಂದು;

(ಖ) ಒಬ್ಬರಿಗಿಂತ ಹೆಚ್ಚು ಕರ್ತೃಗಳ ಗುರುತನ್ನು ಬಹಿರಂಗಪಡಿಸಿರುವಲ್ಲಿ, ಅಂಥ ಕರ್ತೃಗಳ ಪೈಕಿ ಕಡೆಯಲ್ಲಿ ಮರಣ ಹೊಂದುವ ಕರ್ತೃವಿಗೆ ಮಾಡಿದ ಉಲ್ಲೇಖಗಳೆಂದು

—ಅರ್ಥೈಸತಕ್ಕದ್ದು.

(3) (1) ನೇ ಉಪಪ್ರಕರಣದಲ್ಲಿ ಕರ್ತೃವಿಗೆ ಮಾಡಿದ ಉಲ್ಲೇಖಗಳು, ಸಹಕರ್ತೃತ್ವದ ಲೇಖನಾಮದ ಕೃತಿಯ ಸಂದರ್ಭದಲ್ಲಿ,—

(ಕ) ಒಬ್ಬ ಅಥವಾ ಹೆಚ್ಚಿನ (ಆದರೆ ಎಲ್ಲರೂ ಅಲ್ಲ) ಕರ್ತೃಗಳ ಹೆಸರುಗಳು ಗುಪ್ತ ನಾಮಗಳಾಗಿರುವಲ್ಲಿ ಮತ್ತು ಅವನ ಅಥವಾ ಅವರ ಗುರುತನ್ನು ಬಹಿರಂಗಪಡಿಸಿಲ್ಲದಿರುವಲ್ಲಿ, ಯಾರ ಹೆಸರು ಲೇಖನಾಮವಲ್ಲವೋ ಆ ಹೆಸರಿನ ಕರ್ತೃವಿಗೆ ಮಾಡಿದ ಉಲ್ಲೇಖಗಳೆಂದು ಅಥವಾ ಇಬ್ಬರು ಅಥವಾ ಹೆಚ್ಚಿನ ಕರ್ತೃಗಳ ಹೆಸರುಗಳು ಲೇಖನಾಮಗಳಾಗಿಲ್ಲದಿದ್ದರೆ, ಕಡೆಯಲ್ಲಿ ಮರಣ ಹೊಂದುವಂಥ ಕರ್ತೃಗಳಿಗೆ ಮಾಡಿದ ಉಲ್ಲೇಖಗಳೆಂದು;

(ಖ) ಒಬ್ಬ ಅಥವಾ ಹೆಚ್ಚಿನ (ಆದರೆ ಎಲ್ಲರೂ ಅಲ್ಲ) ಕರ್ತೃಗಳ ಹೆಸರುಗಳು ಲೇಖನಾಮಗಳಾಗಿರುವಲ್ಲಿ ಮತ್ತು ಅವರ ಪೈಕಿ ಒಬ್ಬ ಅಥವಾ ಹೆಚ್ಚಿನವರ ಗುರುತನ್ನು ಬಹಿರಂಗಪಡಿಸಿರುವಲ್ಲಿ, ಯಾರ ಹೆಸರುಗಳು ಲೇಖನಾಮಗಳಾಗಿಲ್ಲವೋ ಆ ಕರ್ತೃಗಳ ಮತ್ತು ಯಾರ ಹೆಸರುಗಳು ಲೇಖನಾಮಗಳಾಗಿರುವುವೋ ಮತ್ತು ಬಹಿರಂಗಪಡಿಸಲಾಗಿದೆಯೋ ಆ ಕರ್ತೃಗಳ ಪೈಕಿ ಕಡೆಯಲ್ಲಿ ಮರಣ ಹೊಂದುವ ಕರ್ತೃವಿಗೆ ಮಾಡಿದ ಉಲ್ಲೇಖವೆಂದು ; ಮತ್ತು

(ಗ) ಎಲ್ಲ ಕರ್ತೃಗಳ ಹೆಸರುಗಳು ಲೇಖನಾಮಗಳಾಗಿರುವಲ್ಲಿ ಮತ್ತು ಅವರಲ್ಲಿ ಒಬ್ಬನ ಗುರುತನ್ನು ಬಹಿರಂಗಪಡಿಸಿರುವಲ್ಲಿ, ಯಾರ ಗುರುತನ್ನು ಬಹಿರಂಗಪಡಿಸಲಾಗಿದೆಯೋ ಆ ಕರ್ತೃವಿಗೆ ಮಾಡಿದ ಉಲ್ಲೇಖಗಳೆಂದು ಅಥವಾ ಅಂಥ ಇಬ್ಬರು ಅಥವಾ ಹೆಚ್ಚಿನ ಕರ್ತೃಗಳ ಗುರುತನ್ನು ಬಹಿರಂಗಪಡಿಸಿರುವಲ್ಲಿ ಅಂಥ ಕರ್ತೃಗಳ ಪೈಕಿ ಕಡೆಯಲ್ಲಿ ಮರಣ ಹೊಂದುವಂಥ ಕರ್ತೃಗಳಿಗೆ ಮಾಡಿದ ಉಲ್ಲೇಖಗಳೆಂದು

—ಅರ್ಥೈಸತಕ್ಕದು.

ವಿವರಣೆ.—ಈ ಪ್ರಕರಣದ ಉದ್ದೇಶಗಳಿಗಾಗಿ ಕರ್ತೃವಿನ ಗುರುತು, ಕರ್ತೃ ಮತ್ತು ಪ್ರಕಾಶಕರಿಬ್ಬರಿಂದಲೂ ಸಾರ್ವಜನಿಕವಾಗಿ ಬಹಿರಂಗವಾಗಿದ್ದರೆ ಆಗಲಿ ಅಥವಾ ಆ ಕರ್ತೃವು ಕೃತಿ ಸ್ವಾಮ್ಯ ಮಂಡಲಿಗೆ ಮನದಟ್ಟಾಗುವಂತೆ ಅನ್ಯಥಾ ಸ್ಥಾಪಿಸಿದ್ದರೆ ಆಗಲಿ ಬಹಿರಂಗಪಡಿಸಿರುವುದಾಗಿ ಭಾವಿಸತಕ್ಕದು.

**24. ಮರಣೋತ್ತರ ಕೃತಿಗಳಲ್ಲಿನ ಕೃತಿಸ್ವಾಮ್ಯದ ಅವಧಿ:**—(1) ಕರ್ತೃವಿನ ಮರಣದ ದಿನಾಂಕದಂದು ಕೃತಿಸ್ವಾಮ್ಯವು ಅಸ್ತಿತ್ವದಲ್ಲಿರುವಂಥ ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿ ಅಥವಾ ಕೆತ್ತನೆಯ ಸಂದರ್ಭದಲ್ಲಿ ಅಥವಾ ಕಡೆಯಲ್ಲಿ ಮರಣಹೊಂದುವ ಕರ್ತೃವಿನ ಮರಣದ ದಿನಾಂಕದಂದು ಅಥವಾ ಅದಕ್ಕೆ ನಿಕಟಪೂರ್ವದಲ್ಲಿ ಸಹ ಕರ್ತೃತ್ವದ ಯಾವುದೇ ಅಂಥ ಕೃತಿಯು, ಆದರೆ ಅದನ್ನು ಅಥವಾ ಅದರ ಯಾವುದೇ ಅಳವಡಿಕೆಯನ್ನು ಆ ದಿನಾಂಕಕ್ಕೆ ಮುಂಚೆ ಪ್ರಕಟಿಸಿಲ್ಲದಿರುವ ಸಂದರ್ಭದಲ್ಲಿ, ಕೃತಿಸ್ವಾಮ್ಯವು, ಕೃತಿಯನ್ನು ಮೊದಲು ಪ್ರಕಟಿಸಿದಂಥ ವರ್ಷದ ಮುಂಬರುವ ಕ್ಯಾಲೆಂಡರು ವರ್ಷದ ಪ್ರಾರಂಭದಿಂದ ಅಥವಾ ಕೃತಿಯ ಅಳವಡಿಕೆಯನ್ನು ಯಾವುದೇ ಮುಂಚಿನ ವರ್ಷದಲ್ಲಿ ಪ್ರಕಟಿಸಿರುವಲ್ಲಿ, ಆ ವರ್ಷದ ಮುಂಬರುವ ಕ್ಯಾಲೆಂಡರು ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿ ಅಥವಾ ಯಾವುದೇ ಅಂಥ ಕೃತಿಯ ಅಳವಡಿಕೆಯನ್ನು, ಅದನ್ನು ಸಾರ್ವಜನಿಕವಾಗಿ ಪ್ರದರ್ಶಿಸಲಾಗಿದ್ದರೆ ಅಥವಾ ಆ ಕೃತಿಗೆ ಸಂಬಂಧಿಸಿದಂತೆ ಮಾಡಿದ ಯಾವುದೇ ಧ್ವನಿಮುದ್ರಿಕೆಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಿದರೆ ಅಥವಾ ಸಾರ್ವಜನಿಕರಿಗೆ ಮಾರಾಟಕ್ಕಾಗಿ ಕೊಡಮಾಡಿದ್ದರೆ, ಅದನ್ನು ಪ್ರಕಟಿಸಲಾಗಿದೆಯೆಂದು ಭಾವಿಸತಕ್ಕದು.

**25. ಛಾಯಾಚಿತ್ರಗಳಲ್ಲಿನ ಕೃತಿಸ್ವಾಮ್ಯದ ಅವಧಿ:**—ಛಾಯಾಚಿತ್ರದ ಸಂದರ್ಭದಲ್ಲಿ, ಕೃತಿಸ್ವಾಮ್ಯವು, ಛಾಯಾಚಿತ್ರವನ್ನು ಪ್ರಕಟಿಸಿದಂಥ ವರ್ಷದ ಮುಂಬರುವ ಕ್ಯಾಲೆಂಡರು ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದು.

**26 ಚಲನಚಿತ್ರ ಫಿಲ್ಮುಗಳಲ್ಲಿನ ಕೃತಿಸ್ವಾಮ್ಯದ ಅವಧಿ:**—ಚಲನಚಿತ್ರ ಫಿಲ್ಮಿನ ಸಂದರ್ಭದಲ್ಲಿ ಕೃತಿಸ್ವಾಮ್ಯವು, ಫಿಲ್ಮನ್ನು ಪ್ರಕಟಿಸಿದಂಥ ವರ್ಷದ ಮುಂಬರುವ ಕ್ಯಾಲೆಂಡರು ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದು.

**27. ಧ್ವನಿಮುದ್ರಿಕೆಗಳಲ್ಲಿನ ಕೃತಿಸ್ವಾಮ್ಯದ ಅವಧಿ:**—ಧ್ವನಿಮುದ್ರಿಕೆಯ ಸಂದರ್ಭದಲ್ಲಿ, ಸರ್ಕಾರವು ಅದರಲ್ಲಿನ ಕೃತಿಸ್ವಾಮ್ಯದ ಮೊದಲ ಒಡೆಯನಾಗಿರುವಲ್ಲಿ, ಕೃತಿಸ್ವಾಮ್ಯವು ಧ್ವನಿಮುದ್ರಿಕೆಯನ್ನು ಪ್ರಕಟಿಸಿದಂಥ ವರ್ಷದ ಮುಂಬರುವ ಕ್ಯಾಲೆಂಡರು ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದು.

**28. ಸರ್ಕಾರಿ ಕೃತಿಗಳಲ್ಲಿನ ಕೃತಿ ಸ್ವಾಮ್ಯದ ಅವಧಿ:**—ಸರ್ಕಾರಿ ಕೃತಿಯ ಸಂದರ್ಭದಲ್ಲಿ ಸರ್ಕಾರವು ಅದರಲ್ಲಿನ ಕೃತಿಸ್ವಾಮ್ಯದ ಮೊದಲ ಒಡೆಯನಾಗಿರುವಲ್ಲಿ, ಕೃತಿಸ್ವಾಮ್ಯವು, ಕೃತಿಯನ್ನು ಮೊದಲು ಪ್ರಕಟಿಸಿದ ನಂತರ ವರ್ಷದ ಮುಂಬರುವ ಕ್ಯಾಲೆಂಡರು ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದು.

**28ಕ. ಸರ್ಕಾರಿ ಉದ್ಯಮಗಳ ಕೃತಿಗಳಲ್ಲಿನ ಕೃತಿ ಸ್ವಾಮ್ಯದ ಅವಧಿ:**—ಕೃತಿಯ ಸಂದರ್ಭದಲ್ಲಿ ಕೃತಿಸ್ವಾಮ್ಯದ ಮೊದಲ ಒಡೆಯನು ಸರ್ಕಾರಿ ಉದ್ಯಮವಾಗಿರುವಲ್ಲಿ ಕೃತಿಸ್ವಾಮ್ಯವು, ಆ ಕೃತಿಯನ್ನು ಮೊದಲು ಪ್ರಕಟಿಸಿದಂಥ ವರ್ಷದ ಮುಂಬರುವ ಕ್ಯಾಲೆಂಡರ್ ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದು.

**29. ಅಂತರರಾಷ್ಟ್ರೀಯ ಸಂಸ್ಥೆಗಳ ಕೃತಿಗಳಲ್ಲಿನ ಕೃತಿಸ್ವಾಮ್ಯದ ಅವಧಿ:**—41 ನೇ ಪ್ರಕರಣದ ಉಪಬಂಧಗಳು ಅನ್ವಯಿಸುವಂಥ ಅಂತರರಾಷ್ಟ್ರೀಯ ಸಂಸ್ಥೆಯ ಕೃತಿಯ ಸಂದರ್ಭದಲ್ಲಿ, ಕೃತಿಸ್ವಾಮ್ಯವು, ಕೃತಿಯನ್ನು ಮೊದಲು ಪ್ರಕಟಿಸಿದಂಥ ವರ್ಷದ ಮುಂಬರುವ ಕ್ಯಾಲೆಂಡರ್ ವರ್ಷದ ಪ್ರಾರಂಭದಿಂದ ಐವತ್ತು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದು.

## ಅಧ್ಯಾಯ VI

## ಲೈಸೆನ್ಸುಗಳು

**30. ಕೃತಿಸ್ವಾಮ್ಯದ ಒಡೆಯರಿಂದ ಲೈಸೆನ್ಸುಗಳು :**— ಅಸ್ತಿತ್ವದಲ್ಲಿರುವ ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನು ಅಥವಾ ಯಾವುದೇ ಮುಂದಿನ ಕೃತಿಯಲ್ಲಿನ ಕೃತಿಸ್ವಾಮ್ಯದ ಭಾವೀ ಒಡೆಯನು ಹಕ್ಕಿನಲ್ಲಿನ ಯಾವುದೇ ಹಿತಾಸಕ್ತಿಯನ್ನು ಅವನು ಅಥವಾ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಏಜೆಂಟನು ರುಜು ಮಾಡಿದ ಬರಹದಲ್ಲಿನ ಲೈಸೆನ್ಸಿನ ಮೂಲಕ ಕೊಡಬಹುದು :

ಪರಂತು, ಯಾವುದೇ ಮುಂದಿನ ಕೃತಿಯಲ್ಲಿನ ಕೃತಿಸ್ವಾಮ್ಯಕ್ಕೆ ಸಂಬಂಧಪಟ್ಟ ಲೈಸೆನ್ಸಿನ ಸಂದರ್ಭದಲ್ಲಿ, ಲೈಸೆನ್ಸು, ಕೃತಿಯು ಅಸ್ತಿತ್ವಕ್ಕೆ ಬಂದಾಗ ಮಾತ್ರ ಪರಿಣಾಮಕಾರಿಯಾಗತಕ್ಕುದು.

**ವಿವರಣೆ.**— ಈ ಪ್ರಕರಣದ ಮೇರೆಗೆ ಯಾವುದೇ ಮುಂದಿನ ಕೃತಿಯಲ್ಲಿನ ಕೃತಿಸ್ವಾಮ್ಯಕ್ಕೆ ಸಂಬಂಧಪಟ್ಟ ಲೈಸೆನ್ಸನ್ನು ಯಾರಿಗೆ ಮಂಜೂರು ಮಾಡಲಾಗಿದೆಯೋ ಆ ವ್ಯಕ್ತಿಯು, ಕೃತಿಯು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಮರಣ ಹೊಂದಿದರೆ, ಅವನ ಕಾನೂನು ಸಮ್ಮತ ಪ್ರತಿನಿಧಿಗಳು, ಲೈಸೆನ್ಸಿನಲ್ಲಿ ತದ್ವಿರುದ್ಧವಾದ ಯಾವುದೇ ಉಪಬಂಧವಿಲ್ಲದಿದ್ದರೆ, ಲೈಸೆನ್ಸಿನ ಪ್ರಯೋಜನಕ್ಕೆ ಹಕ್ಕುಳ್ಳವನಾಗಿರತಕ್ಕುದು.

**31. ಸಾರ್ವಜನಿಕರಿಂದ ತಡೆಹಿಡಿದಿಟ್ಟ ಕೃತಿಗಳಲ್ಲಿ ಕಡ್ಡಾಯ ಲೈಸೆನ್ಸು:**— (1) ಪ್ರಕಟಿಸಲಾದ ಅಥವಾ ಸಾರ್ವಜನಿಕವಾಗಿ ಪ್ರದರ್ಶಿಸಲಾದಂಥ ಯಾವುದೇ ಭಾರತೀಯ ಕೃತಿಯಲ್ಲಿನ ಕೃತಿಸ್ವಾಮ್ಯದ ಅವಧಿಯ ಯಾವುದೇ ಕಾಲದಲ್ಲಿ, ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನು—

(ಕ) ಕೃತಿಯನ್ನು ಪುನ: ಪ್ರಕಟಿಸಲು ಅಥವಾ ಪುನರ್ ಪ್ರಕಟಣೆಗೆ ಅವಕಾಶ ಮಾಡಿಕೊಡಲು ನಿರಾಕರಿಸಿರುವನೆಂದು, ಸಾರ್ವಜನಿಕ ಪ್ರದರ್ಶನಕ್ಕೆ ಅವಕಾಶ ಕೊಡಲು ನಿರಾಕರಿಸಿರುವನೆಂದು ಮತ್ತು ಅಂಥ ನಿರಾಕರಣೆಯ ಕಾರಣದಿಂದಾಗಿ ಕೃತಿಯನ್ನು ಸಾರ್ವಜನಿಕರಿಂದ ತಡೆಹಿಡಿಯಲಾಗಿದೆಯೆಂದು; ಅಥವಾ

(ಖ) ಅಂಥ ಕೃತಿಯನ್ನು ಪ್ರಸಾರದ ಮೂಲಕ ಸಾರ್ವಜನಿಕರಿಗೆ ಅಥವಾ ಧ್ವನಿಮುದ್ರಿಕೆಯ ಸಂದರ್ಭದಲ್ಲಿ, ಅಂಥ ಧ್ವನಿಮುದ್ರಿಕೆಯಲ್ಲಿ ಧ್ವನಿಮುದ್ರಿಸಿಕೊಂಡ ಕೃತಿಯನ್ನು ಫಿರ್ಯಾದುದಾರನು ಯುಕ್ತವೆಂದು ಪರ್ಯಾಲೋಚಿಸುವಂಥ ನಿಬಂಧನೆಗಳ ಮೇಲೆ ಬಿತ್ತರಿಸಲು ಅವಕಾಶ ಕೊಡಲು ನಿರಾಕರಿಸಿರುವನೆಂದು

—ಕೃತಿಸ್ವಾಮ್ಯ ಮಂಡಲಿಗೆ ದೂರನ್ನು ಕೊಟ್ಟರೆ, ಕೃತಿಸ್ವಾಮ್ಯ ಮಂಡಲಿಯು, ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ಅದು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅಂಥ ನಿರಾಕರಣೆಗಾಗಿನ ಕಾರಣಗಳು ಯುಕ್ತವಾದುವುಗಳಲ್ಲವೆಂದು ಅದಕ್ಕೆ ಮನದಟ್ಟಾದರೆ, ಅದು, ಕೃತಿಸ್ವಾಮ್ಯ ಮಂಡಲಿಯು ನಿರ್ಧರಿಸಬಹುದಾದಂಥ ನಷ್ಟ ಪರಿಹಾರವನ್ನು ಕೃತಿಸ್ವಾಮ್ಯದ ಒಡೆಯನಿಗೆ ಸಂದಾಯ ಮಾಡುವುದಕ್ಕೆ ಒಳಪಟ್ಟು ಮತ್ತು ಅಂಥ ಇತರ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಸಂದರ್ಭಾನುಸಾರ, ಕೃತಿಯನ್ನು ಪುನ: ಪ್ರಕಟಿಸಲು, ಕೃತಿಯನ್ನು ಸಾರ್ವಜನಿಕವಾಗಿ ಪ್ರದರ್ಶಿಸಲು ಅಥವಾ ಪ್ರಸಾರದ ಮೂಲಕ ಕೃತಿಯನ್ನು ಸಾರ್ವಜನಿಕರಿಗೆ ಬಿತ್ತರಿಸಲು ಫಿರ್ಯಾದುದಾರನಿಗೆ ಲೈಸೆನ್ಸನ್ನು ಕೊಡುವಂತೆ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಿಗೆ ನಿರ್ದೇಶಿಸಬಹುದು; ಮತ್ತು ಆ ತರುವಾಯ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು, ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಕೃತಿಸ್ವಾಮ್ಯ ಮಂಡಲಿಯ ನಿರ್ದೇಶನಗಳಿಗನುಸಾರವಾಗಿ, ಫಿರ್ಯಾದುದಾರನಿಗೆ ಲೈಸೆನ್ಸನ್ನು ಕೊಡತಕ್ಕುದು.

**ವಿವರಣೆ.**— ಈ ಉಪಪ್ರಕರಣದಲ್ಲಿ, "ಭಾರತೀಯ ಕೃತಿ" ಎಂಬ ಪದವು,

(i) ಭಾರತದ ನಾಗರೀಕನಾಗಿರುವಂಥ ಕರ್ತೃವಿನ ಕಲಾತ್ಮಕ ಕೃತಿ; ಮತ್ತು

(ii) ಭಾರತದಲ್ಲಿ ಮಾಡಿದ ಅಥವಾ ತಯಾರಿಸಿದ ಚಲನಚಿತ್ರ ಫಿಲ್ಮು ಅಥವಾ ಧ್ವನಿಮುದ್ರಿಕೆಯನ್ನು

—ಒಳಗೊಳ್ಳುತ್ತದೆ.

(2) (1)ನೇ ಉಪಪ್ರಕರಣದ ಮೇರೆಗೆ ಇಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ದೂರನ್ನು ನೀಡಿರುವಲ್ಲಿ, ಸಾರ್ವಜನಿಕರ ಹಿತಾಸಕ್ತಿಗಳನ್ನು ಅತ್ಯುತ್ತಮವಾಗಿ ಈಡೇರಿಸುವನೆಂದು ಕೃತಿಸ್ವಾಮ್ಯ ಮಂಡಲಿಯು ಅಭಿಪ್ರಾಯಪಡುವ ಫಿರ್ಯಾದುದಾರನಿಗೆ ಲೈಸೆನ್ಸನ್ನು ಕೊಡತಕ್ಕುದು.

**31ಕ. (1) ಅಪ್ರಕಟಿತ ಭಾರತೀಯ ಕೃತಿಗಳ ಬಗ್ಗೆ ಕಡ್ಡಾಯ ಲೈಸೆನ್ಸು:**—(1) 2ನೇ ಪ್ರಕರಣದ (ಠ) ಖಂಡದ (iii)ನೇ ಉಪಖಂಡದಲ್ಲಿ ಉಲ್ಲೇಖಿಸಿದ ಭಾರತೀಯ ಕೃತಿಯ ಸಂದರ್ಭದಲ್ಲಿ, ಕರ್ತೃವು ಮರಣಹೊಂದಿದ್ದಲ್ಲಿ ಅಥವಾ ಗೊತ್ತಿಲ್ಲದೇ ಇರುವಲ್ಲಿ ಅಥವಾ ಪತ್ತೆ ಹಚ್ಚಲಾಗದೇ ಇರುವಲ್ಲಿ, ಅಥವಾ ಅಂಥ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನು ಸಿಕ್ಕದೇ ಇರುವಲ್ಲಿ, ಯಾವನೇ ವ್ಯಕ್ತಿಯು, ಅಂಥ ಕೃತಿಯನ್ನು ಅಥವಾ ಅದರ ಭಾಷಾಂತರವನ್ನು ಯಾವುದೇ ಭಾಷೆಯಲ್ಲಿ ಪ್ರಕಟಿಸಲು ಲೈಸೆನ್ಸಿಗಾಗಿ ಕೃತಿಸ್ವಾಮ್ಯ ಮಂಡಲಿಗೆ ಅರ್ಜಿ ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವುದಕ್ಕೆ ಮೊದಲು, ಅರ್ಜಿದಾರನು, ದೇಶದ ಅಧಿಕ ಭಾಗದಲ್ಲಿ ಪ್ರಸಾರ ಹೊಂದಿರುವ ಆಂಗ್ಲಭಾಷೆಯ ದೈನಂದಿನ ವಾರ್ತಾಪತ್ರಿಕೆಯ ಒಂದು ಸಂಚಿಕೆಯಲ್ಲಿ ತನ್ನ ಪ್ರಸ್ತಾವವನ್ನು ಪ್ರಕಟಿಸತಕ್ಕುದು ಮತ್ತು ಯಾವುದೇ ಭಾಷೆಯಲ್ಲಿ ಭಾಷಾಂತರದ ಪ್ರಕಟಣೆಗಾಗಿ ಅರ್ಜಿಯನ್ನು ಸಲ್ಲಿಸಲಾಗಿರುವಲ್ಲಿ, ಆ ಭಾಷೆಯ ಯಾವುದೇ ದೈನಂದಿನ ವಾರ್ತಾಪತ್ರಿಕೆಯ ಒಂದು ಸಂಚಿಕೆಯಲ್ಲೂ ಸಹ ಅದನ್ನು ಪ್ರಕಟಿಸತಕ್ಕುದು.

(3) ಅಂಥ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕುದು ಮತ್ತು ಅದರ ಜೊತೆಗೆ (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಜಾಹೀರಾತಿನ ಪ್ರತಿ ಮತ್ತು ನಿಯಮಿಸಬಹುದಾದಂಥ ಫೀಜು ಇರತಕ್ಕುದು.

(4) ಈ ಪ್ರಕರಣದ ಮೇರೆಗೆ ಕೃತಿಸ್ವಾಮ್ಯ ಮಂಡಲಿಗೆ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಅದು ನಿಯಮಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಕೃತಿಸ್ವಾಮ್ಯಮಂಡಲಿಯು ನಿರ್ಧರಿಸಬಹುದಾದಂಥ ಸ್ವಾಮ್ಯಶುಲ್ಕದ ಸಂದಾಯಕ್ಕೆ ಒಳಪಟ್ಟು ಮತ್ತು ಅಂಥ ಇತರ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅರ್ಜಿಯಲ್ಲಿ ನಮೂದಿಸಿದ ಭಾಷೆಯಲ್ಲಿ ಆ ಕೃತಿಯನ್ನು ಅಥವಾ ಅದರ ಭಾಷಾಂತರವನ್ನು ಪ್ರಕಟಿಸಲು ಅರ್ಜಿದಾರನಿಗೆ ಲೈಸೆನ್ಸು ಮಂಜೂರು ಮಾಡಲು ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಿಗೆ ನಿರ್ದೇಶಿಸಬಹುದು ಮತ್ತು ಆ ತರುವಾಯ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು ಕೃತಿಸ್ವಾಮ್ಯ ಮಂಡಲಿಯ ನಿರ್ದೇಶನಕ್ಕೆ ಅನುಸಾರವಾಗಿ ಅರ್ಜಿದಾರನಿಗೆ ಲೈಸೆನ್ಸನ್ನು ಮಂಜೂರು ಮಾಡತಕ್ಕುದು.

(5) ಈ ಪ್ರಕರಣದ ಮೇರೆಗೆ, ಲೈಸೆನ್ಸನ್ನು ಮಂಜೂರು ಮಾಡಿರುವಲ್ಲಿ, ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು ಆದೇಶದ ಮೂಲಕ, ಕೃತಿಸ್ವಾಮ್ಯ ಮಂಡಲಿಯು ನಿರ್ಧರಿಸಿದ ಸ್ವಾಮ್ಯಶುಲ್ಕದ ಮೊಬಲಗನ್ನು ಭಾರತದ ಸಾರ್ವಜನಿಕ ಲೆಕ್ಕದಲ್ಲಿ ಅಥವಾ

ಕೃತಿಸ್ವಾಮ್ಯ ಮಂಡಲಿಯು ನಿರ್ದಿಷ್ಟಪಡಿಸಿದ ಯಾವುದೇ ಇತರ ಲೆಕ್ಕದಲ್ಲಿ ಕೃತಿಸ್ವಾಮ್ಯದ ಒಡೆಯ ಅಥವಾ ಸಂದರ್ಭಾನುಸಾರ ಅವನ ವಾರಸುದಾರರು, ನಿರ್ವಾಹಕರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು ಯಾವುದೇ ಕಾಲದಲ್ಲಿ ಅಂಥ ಸ್ವಾಮ್ಯಶುಲ್ಕವನ್ನು ಕ್ಲೇಮು ಮಾಡಲು ಸಾಧ್ಯಗೊಳಿಸುವ ಹಾಗೆ ಖಾತೆಯಲ್ಲಿ ಠೇವಣಿ ಇಡಲು ಅರ್ಜಿದಾರನಿಗೆ ನಿರ್ದೇಶಿಸಬಹುದು.

(6) ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕೃತಿಯ ಸಂದರ್ಭದಲ್ಲಿ ಕೃತಿಯ ಮೂಲ ಕರ್ತೃವು ಮರಣ ಹೊಂದಿದ್ದರೆ, ಕೇಂದ್ರ ಸರ್ಕಾರವು, ರಾಷ್ಟ್ರದ ಹಿತಾಸಕ್ತಿಯಲ್ಲಿ ಆ ಕೃತಿಯ ಪ್ರಕಟನೆಯು ಅಪೇಕ್ಷಣೀಯವೆಂದು ಅದು ಪರ್ಯಾಲೋಚಿಸಿದರೆ, ಕರ್ತೃವಿನ ವಾರಸುದಾರರು, ನಿರ್ವಾಹಕರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳನ್ನು ಅದು ನಿರ್ದಿಷ್ಟ ಪಡಿಸಬಹುದಾದಂಥ ಅವಧಿಯ ಒಳಗೆ ಅಂಥ ಕೃತಿಯನ್ನು ಪ್ರಕಟಿಸಲು ಅಗತ್ಯಪಡಿಸಬಹುದು.

(7) (6)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಯಾವುದೇ ಕೃತಿಯನು ಪ್ರಕಟಿಸದಿರುವಲ್ಲಿ, ಕೃತಿಸ್ವಾಮ್ಯಗಳ ಮಂಡಲಿಯು, ಆ ಕೃತಿಯನ್ನು ಪ್ರಕಟಿಸಲು ಅನುಮತಿಗಾಗಿ ಯಾವನೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ, ಮತ್ತು ಸಂಬಂಧಪಟ್ಟ ಪಕ್ಷಕಾರರನ್ನು ಸುನಾವಣಿ ಮಾಡಿದ ತರುವಾಯ ಕೃತಿಸ್ವಾಮ್ಯ ಮಂಡಲಿಯು ಅಂಥ ಪ್ರಕಟಣೆಗೆ, ಅಂಥ ಪ್ರಕರಣದ ಸನ್ನಿವೇಶಗಳಲ್ಲಿ ನಿಯಮಿಸಲಾದ ರೀತಿಯಲ್ಲಿ ನಿರ್ಧರಿಸಬಹುದಾದಂಥ ಸ್ವಾಮ್ಯ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅನುಮತಿಸಬಹುದು.

**32. ಭಾಷಾಂತರಗಳನ್ನು ಹೊರತರಲು ಮತ್ತು ಪ್ರಕಟಿಸಲು ಲೈಸೆನ್ಸು**:—(1) ಯಾವನೇ ವ್ಯಕ್ತಿಯು ಸಾಹಿತ್ಯಕ ಅಥವಾ ನಾಟಕ ಕೃತಿಯ ಭಾಷಾಂತರವನ್ನು ಯಾವುದೇ ಭಾಷೆಯಲ್ಲಿ ಕೃತಿಯ ಮೊದಲ ಪ್ರಕಟಣೆಯಿಂದ ಏಳು ವರ್ಷಗಳ ಅವಧಿಯ ತರುವಾಯ ಹೊರತರಲು ಮತ್ತು ಪ್ರಕಟಿಸಲು ಲೈಸೆನ್ಸಿಗಾಗಿ ಕೃತಿಸ್ವಾಮ್ಯ ಮಂಡಲಿಗೆ ಅರ್ಜಿ ಹಾಕಿಕೊಳ್ಳಬಹುದು.

(1ಕ) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಭಾರತೀಯ ಕೃತಿಯಲ್ಲದ ಸಾಹಿತ್ಯಕ ಅಥವಾ ನಾಟಕ ಕೃತಿಯನ್ನು ಅಂಥ ಭಾಷಾಂತರವು ಬೋಧನೆ, ವಿದ್ವತ್ತು ಅಥವಾ ಸಂಶೋಧನೆಯ ಉದ್ದೇಶಗಳಿಗಾಗಿ ಅಗತ್ಯವಿದ್ದರೆ, ಅಂಥ ಕೃತಿಯ ಮೊದಲ ಪ್ರಕಟಣೆಯಿಂದ ಮೂರು ವರ್ಷಗಳ ಅವಧಿಯ ತರುವಾಯ ಭಾರತದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಯಾವುದೇಭಾಷೆಯಲ್ಲಿ ಭಾಷಾಂತರವನ್ನು ಯಥಾವತ್ತಾದ ನಿರೂಪಣೆಯ ಮುದ್ರಿತ ಅಥವಾ ಸದೃಶ ರೂಪಗಳಲ್ಲಿ ಹೊರತರಲು ಮತ್ತು ಪ್ರಕಟಿಸಲು ಲೈಸೆನ್ಸಿಗಾಗಿ ಯಾವನೇ ವ್ಯಕ್ತಿಯು ಕೃತಿಸ್ವಾಮ್ಯ ಮಂಡಲಿಗೆ ಅರ್ಜಿಯನ್ನು ಸಲ್ಲಿಸಬಹುದು :

ಪರಂತು, ಅಂಥ ಭಾಷಾಂತರವು ಯಾವುದೇ ಅಭಿವೃದ್ಧಿ ಹೊಂದಿದ ದೇಶದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿಲ್ಲದ ಭಾಷೆಯಲ್ಲಿ ಇರುವಲ್ಲಿ, ಅಂಥ ಅರ್ಜಿಯನ್ನು ಅಂಥ ಪ್ರಕಟಣೆಯಾದಂದಿನಿಂದ ಒಂದು ವರ್ಷದ ಅವಧಿಯ ತರುವಾಯ ಸಲ್ಲಿಸಬಹುದು.

(2) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮಾಡಿಕೊಳ್ಳತಕ್ಕುದು ಮತ್ತು ಕೃತಿಯ ಭಾಷಾಂತರದ ಪ್ರತಿಯ ಉದ್ದೇಶಿತ ಚಿಲ್ಲರೆ ಬೆಲೆಯನ್ನು ತಿಳಿಸತಕ್ಕುದು.

(3) ಈ ಪ್ರಕರಣದ ಮೇರೆಗೆ ಲೈಸೆನ್ಸಿಗಾಗಿ ಪ್ರತಿಯೊಬ್ಬ ಅರ್ಜಿದಾರನು ತನ್ನ ಅರ್ಜಿಯೊಡನೆ, ನಿಯಮಿಸಬಹುದಾದಂಥ ಫೀಜನ್ನು ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಲ್ಲಿ ಠೇವಣಿ ಇಡತಕ್ಕುದು.

(4) ಈ ಪ್ರಕರಣದ ಮೇರೆಗೆ ಕೃತಿಸ್ವಾಮ್ಯ ಮಂಡಲಿಗೆ ಅರ್ಜಿಯನ್ನು ಹಾಕಿಕೊಂಡಿರುವಲ್ಲಿ, ಅದು, ನಿಯಮಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ:—

(i) ಅರ್ಜಿಯಲ್ಲಿ ನಮೂದಿಸಿದ ಭಾಷೆಯಲ್ಲಿ—

ಆ ಕೃತಿಯಲ್ಲಿನ ಕೃತಿ ಸ್ವಾಮ್ಯದ ಒಡೆಯನಿಗೆ ಅರ್ಜಿದಾರನು, ಸಾರ್ವಜನಿಕರಿಗೆ ಮಾರಾಟ ಮಾಡಿದ ಕೃತಿಯ ಭಾಷಾಂತರದ ಪ್ರತಿಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಪ್ರಕರಣದ ಸಂದರ್ಭಗಳಲ್ಲಿ, ಕೃತಿಸ್ವಾಮ್ಯ ಮಂಡಲಿಯು ನಿಯಮಿಸಬಹುದಾದ ರೀತಿಯಲ್ಲಿ ನಿರ್ಧರಿಸಬಹುದಾದಂಥ ದರದಲ್ಲಿ ಲೆಕ್ಕ ಹಾಕಿದ ಸ್ವಾಮ್ಯ ಶುಲ್ಕಗಳನ್ನು ಸಂದಾಯ ಮಾಡತಕ್ಕುದೆಂಬ ಷರತ್ತಿಗೆ ಒಳಪಟ್ಟು; ಮತ್ತು

(ii) ಅಂಥ ಲೈಸನ್ಸನ್ನು (1ಕ) ಉಪಪ್ರಕರಣದ ಮೇರೆಗಿನ ಅರ್ಜಿಯ ಮೇಲೆ ಮಂಜೂರು ಮಾಡಿರುವಲ್ಲಿ ಆ ಲೈಸೆನ್ಸನ್ನು, ಕೃತಿಯ ಭಾಷಾಂತರದ ಪ್ರತಿಗಳನ್ನು ಭಾರತದಹೊರಗೆ ರಫ್ತು ಮಾಡುವುದಕ್ಕೆ ವ್ಯಾಪ್ತವಾಗತಕ್ಕುದಲ್ಲ ಮತ್ತು ಅಂಥ ಭಾಷಾಂತರದ ಪ್ರತಿಯೊಂದು ಪ್ರತಿಯು ಭಾರತದಲ್ಲಿ ಮಾತ್ರ ವಿತರಣೆಗಾಗಿ ಲಭ್ಯವಿದೆ ಎಂದು ಅಂಥ ಭಾಷಾಂತರ ಭಾಷೆಯಲ್ಲಿನ ನೋಟೀಸನ್ನು ಒಳಗೊಂಡಿರತಕ್ಕುದು ಎಂಬ ಷರತ್ತಿಗೂ ಸಹ ಒಳಪಟ್ಟು

—ಕೃತಿಯ ಭಾಷಾಂತರವನ್ನು ಹೊರತರಲು ಮತ್ತು ಪ್ರಕಟಿಸಲು ಅನನ್ಯವಾದ ಲೈಸೆನ್ಸು ಅಲ್ಲದ ಲೈಸನ್ಸನ್ನು ಅರ್ಜಿದಾರನಿಗೆ ಕೊಡಬಹುದು :

ಪರಂತು, (ii)ನೇ ಖಂಡದಲ್ಲಿ ಇರುವುದು ಯಾವುದೂ, ಇಂಗ್ಲೀಷ್, ಫ್ರೆಂಚ್ ಅಥವಾ ಸ್ಪ್ಯಾನಿಷ್ ಭಾಷೆಗಳನ್ನು ಹೊರತುಪಡಿಸಿ ಅಂಥ ಭಾಷಾಂತರ ಪ್ರತಿಗಳನ್ನು ಯಾವುದೇ ದೇಶಕ್ಕೆ ಸರ್ಕಾರವು ಅಥವಾ ಸರ್ಕಾರದ ಅಧೀನದಲ್ಲಿರುವ ಯಾವುದೇ ಪ್ರಾಧಿಕಾರವು ರಫ್ತು ಮಾಡುವುದಕ್ಕೆ—

(1) ಅಂಥ ಪ್ರತಿಗಳನ್ನು ಭಾರತದ ಹೊರಗೆ ವಾಸ ಮಾಡುತ್ತಿರುವ ಭಾರತದ ನಾಗರೀಕರಿಗೆ ಅಥವಾ ಭಾರತದ ಹೊರಗಿನ ಅಂಥ ನಾಗರೀಕರ ಯಾವುದೇ ಸಂಘಕ್ಕೆ ಕಳುಹಿಸಿದ್ದರೆ ; ಅಥವಾ

(2) ಅಂಥ ಪ್ರತಿಗಳನ್ನು ಬೋಧನೆ, ವಿದ್ವತ್ತು ಅಥವಾ ಸಂಶೋಧನೆಯ ಉದ್ದೇಶಗಳಿಗಾಗಿ ಬಳಸುವಂತಿದ್ದರೆ ಮತ್ತು ಯಾವುದೇ ವಾಣಿಜ್ಯ ಉದ್ದೇಶಕ್ಕಾಗಿ ಅಲ್ಲದೆ ಉಪಯೋಗಿಸಲು ಉದ್ದೇಶಿಸಲಾಗಿದ್ದರೆ; ಮತ್ತು

(3) ಎರಡೂ ಸಂದರ್ಭಗಳಲ್ಲಿ, ಅಂಥ ರಫ್ತಿಗಾಗಿ ಆ ದೇಶದ ಸರ್ಕಾರವು ಅನುಮತಿಯನ್ನು ಕೊಡಲಾಗಿದ್ದರೆ —ಅನ್ವಯವಾಗತಕ್ಕುದಲ್ಲ:

ಮತ್ತು ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ಲೈಸೆನ್ಸನ್ನು,—

(ಕ) ಅರ್ಜಿಯಲ್ಲಿ ನಮೂದಿಸಿದ ಭಾಷೆಯಲ್ಲಿ ಕೃತಿಯ ಭಾಷಾಂತರವನ್ನು ಕೃತಿಯಲ್ಲಿನ ಕೃತಿಸ್ವಾಮ್ಯದ ಅಥವಾ ಅವನಿಂದ ಅಧಿಕೃತಗೊಂಡ ಯಾವನೇ ವ್ಯಕ್ತಿಯು ಕೃತಿಯ ಮೊದಲನೇ ಪ್ರಕಟಣೆಯು, ಸಂದರ್ಭಾನುಸಾರ ಏಳು ವರ್ಷಗಳು ಅಥವಾ ಮೂರು ವರ್ಷಗಳು ಅಥವಾ ಒಂದು ವರ್ಷದೊಳಗೆ ಪ್ರಕಟಿಸಿಲ್ಲದಿದ್ದ ಅಥವಾ ಭಾಷಾಂತರವನ್ನು ಹಾಗೆ ಪ್ರಕಟಿಸಿದ್ದು ಅದರ ಪ್ರತಿಗಳು ಮುಗಿದು ಹೋಗಿದ್ದ ಹೊರತು ;

(ಖ) ಅಂಥ ಭಾಷಾಂತರವನ್ನು ಹೊರತರಲು ಮತ್ತು ಪ್ರಕಟಿಸಲು ಕೃತಿಸ್ವಾಮ್ಯದ ಒಡೆಯನನ್ನು ಅವನು ಕೋರಿ ಕೊಂಡಿದ್ದನೆಂದು ಮತ್ತು ಅಧಿಕೃತಗೊಳಿಸುವಿಕೆಯನ್ನು ನಿರಾಕರಿಸಲಾಗಿದೆಯೆಂದು ಅಥವಾ ಕೃತಿಸ್ವಾಮ್ಯದ ಒಡೆಯನನ್ನು ಅವನು ತನ್ನ ಯುಕ್ತ ಶ್ರದ್ಧೆಯನ್ನು ವಹಿಸಿದ ತರುವಾಯ ಕಂಡುಹಿಡಿಯಲು ಅಸಮರ್ಥನಾಗಿರುವನೆಂದು ಕೃತಿಸ್ವಾಮ್ಯ ಮಂಡಲಿಗೆ ಮನದಟ್ಟಾಗುವಂತೆ ಅರ್ಜಿದಾರನು ರುಜುವಾತು ಪಡಿಸಿದ ಹೊರತು;

(ಗ) ಅರ್ಜಿದಾರನು ಕೃತಿಸ್ವಾಮ್ಯ ಒಡೆಯನನ್ನು ಕಂಡುಹಿಡಿಯಲು ಅಸಮರ್ಥನಾಗಿರುವಲ್ಲಿ, ಅಂಥ ಅರ್ಜಿಯನ್ನು ಮಾಡಿಕೊಳ್ಳುವುದಕ್ಕೆ ಮುಂಚೆ ಎರಡು ತಿಂಗಳಿಗೆ ಕಡಿಮೆಯಿಲ್ಲದಂತೆ, ಆ ಕೃತಿಯಿಂದ ಕಂಡುಬರುವ ಹೆಸರಿನ ಪ್ರಕಾಶಕನಿಗೆ ನೋಂದಾಯಿತ ಅಂಚೆಯ ಮೂಲಕ ಅಂಥ ಅಧಿಕೃತಗೊಳಿಸುವಿಕೆಗಾಗಿನ ಮತ್ತು (1)ನೇ ಉಪಪ್ರಕರಣದ ಮೇರೆಗಿನ ಲೈಸನ್ಸಿಗಾಗಿನ ಅರ್ಜಿಯ ಸಂಬಂಧದಲ್ಲಿ ಅವನ ಕೋರಿಕೆಯ ಪ್ರತಿಯನ್ನು ಅವನು ಕಳುಹಿಸಿದ್ದ ಹೊರತು;

(ಗಗ) (1ಕ) ಉಪಪ್ರಕರಣದ ಮೇರೆಗಿನ ಅರ್ಜಿಯ ಸಂದರ್ಭದಲ್ಲಿ (ಅದರ ಪರಂತುಕದ ಮೇರೆಗಿನ ಅರ್ಜಿಯಾಗಿಲ್ಲದ) ಆರು ತಿಂಗಳುಗಳ ಅವಧಿಯು ಅಥವಾ ಆ ಉಪಪ್ರಕರಣದ ಪರಂತುಕದ ಮೇರೆಗಿನ ಅರ್ಜಿಯ ಸಂದರ್ಭದಲ್ಲಿ ಈ ಪರಂತುಕದ (ಖ) ಖಂಡದ ಮೇರೆಗಿನ ಕೋರಿಕೆಯನ್ನು ಮಾಡಿದ ದಿನಾಂಕದಿಂದ ಅಥವಾ ಈ ಪರಂತುಕದ (ಗ) ಖಂಡದ ಮೇರೆಗೆ ಕೋರಿಕೆಯ ಪ್ರತಿಯನ್ನು ಕಳುಹಿಸಲಾಗಿರುವಲ್ಲಿ ಅಂಥ ಪ್ರತಿಯನ್ನು ಕಳುಹಿಸಿದ ದಿನಾಂಕದಿಂದ ಒಂಭತ್ತು ತಿಂಗಳುಗಳು ಗತಿಸಿದ್ದ ಹೊರತು ಮತ್ತು ಆ ಅರ್ಜಿಯಲ್ಲಿ ನಮೂದಿಸಿದ ಭಾಷೆಯಲ್ಲಿ ಆ ಕೃತಿಯ ಭಾಷಾಂತರವನ್ನು ಆ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನು ಅಥವಾ ಅವನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು ಸಂದರ್ಭಾನುಸಾರ ಆರು ತಿಂಗಳುಗಳು ಅಥವಾ ಒಂಭತ್ತು ತಿಂಗಳುಗಳ ಸದರಿ ಅವಧಿಯ ಒಳಗೆ ಪ್ರಕಟಿಸಿಲ್ಲದಿದ್ದ ಹೊರತು;

(ಗಗಗ) (1ಕ) ಉಪಪ್ರಕರಣದ ಮೇರೆಗೆ ಸಲ್ಲಿಸಿದ ಯಾವುದೇ ಅರ್ಜಿಯ ಸಂದರ್ಭದಲ್ಲಿ,—

(i) ಭಾಷಾಂತರಿಸಲು ಉದ್ದೇಶಿಸಲಾದ ಕೃತಿಯ ಕರ್ತೃವಿನ ಹೆಸರು ಮತ್ತು ಆ ನಿರ್ದಿಷ್ಟ ಆವೃತ್ತಿಯ ಶೀರ್ಷಿಕೆಯನ್ನು ಭಾಷಾಂತರದ ಎಲ್ಲಾ ಪ್ರತಿಗಳ ಮೇಲೆ ಮುದ್ರಿಸಿದ್ದ ಹೊರತು;

(ii) ಆ ಕೃತಿಯು ಸಚಿತ್ರ ವಿವರಣೆಗಳನ್ನು ಮುಖ್ಯವಾಗಿ ಒಳಗೊಂಡಿದ್ದರೆ 32ಕ. ಪ್ರಕರಣದ ಉಪಬಂಧಗಳನ್ನು ಸಹಾ ಪಾಲಿಸಿದ್ದ ಹೊರತು;

(ಘ) ಅರ್ಜಿದಾರನು ಕೃತಿಯ ಸರಿಯಾದ ಭಾಷಾಂತರವನ್ನು ಹೊರತರಲು ಮತ್ತು ಪ್ರಕಟಿಸಲು ಸಕ್ಷಮನಾಗಿರುವನೆಂದು ಮತ್ತು ಈ ಪ್ರಕರಣದ ಮೇರೆಗೆ ಕೃತಿಸ್ವಾಮ್ಯದ ಒಡೆಯನಿಗೆ ಸಂದಾಯ ಮಾಡಬೇಕಾದ ಸ್ವಾಮ್ಯ ಶುಲ್ಕಗಳನ್ನು ಅವನಿಗೆ ಸಂದಾಯ ಮಾಡಲು ಸಾಧನ ಮೂಲವನ್ನು ಹೊಂದಿದ್ದಾನೆಂದು ಕೃತಿಸ್ವಾಮ್ಯ ಮಂಡಲಿಗೆ ಮನದಟ್ಟಾಗಿದ್ದ ಹೊರತು;

(ಙ) ಕರ್ತೃವು ಕೃತಿಯ ಪ್ರತಿಗಳನ್ನು ಪ್ರಸಾರದಿಂದ ಹಿಂತೆಗೆದುಕೊಂಡಿಲ್ಲದಿದ್ದ ಹೊರತು ; ಮತ್ತು

(ಚ) ಕಾರ್ಯಸಾಧ್ಯವಿರುವಲ್ಲೆಲ್ಲ, ಕೃತಿಯಲ್ಲಿನ ಕೃತಿಸ್ವಾಮ್ಯ ಒಡೆಯನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟಿದ್ದ ಹೊರತು

—ಕೊಡತಕ್ಕದಲ್ಲ.

(5)ಯಾವುದೇ ಪ್ರಸಾರಣ ಪ್ರಾಧಿಕಾರವು ಕೃತಿ ಸ್ವಾಮ್ಯ ಮಂಡಲಿಗೆ—

(ಕ) (1ಕ) ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕೃತಿ ಮತ್ತು ಯಥಾವತ್ತಾದ ನಿರೂಪಣೆಯ ಮುದ್ರಿತ ಅಥವಾ ಸದೃಶ ರೂಪಗಳಲ್ಲಿ ಪ್ರಕಟಿಸಿದ ಕೃತಿ; ಅಥವಾ

(ಖ) ವ್ಯವಸ್ಥಿತ ಶೈಕ್ಷಣಿಕ ಚಟುವಟಿಕೆಗಳ ಉದ್ದೇಶಕ್ಕಾಗಿ ಮಾತ್ರವೇ ತಯಾರಿಸಿದ ಮತ್ತು ಪ್ರಕಟಿಸಿದ ಶ್ರವಣ ವೀಕ್ಷಣ ಜೋಡಣೆಗಳಲ್ಲಿ ಅಳವಡಿಸಿದ ಯಾವುದೇ ಪಾಠ

—ಇವುಗಳ ಭಾಷಾಂತರವನ್ನು ಬೋಧನೆಯ ಉದ್ದೇಶಗಳಿಗಾಗಿ ಅಥವಾ ಯಾವುದೇ ವಿಶಿಷ್ಟ ಕ್ಷೇತ್ರದಲ್ಲಿನ ತಜ್ಞರಿಗೆ ವಿಶೇಷ, ತಾಂತ್ರಿಕ ಅಥವಾ ವೈಜ್ಞಾನಿಕ ಸಂಶೋಧನೆಯ ಫಲಿತಾಂಶಗಳನ್ನು ಪ್ರಸಾರ ಮಾಡುವುದಕ್ಕಾಗಿ, ಅಂಥ ಭಾಷಾಂತರದ ಪ್ರಸಾರಕ್ಕಾಗಿ ತಯಾರಿಸಲು ಮತ್ತು ಪ್ರಕಟಿಸಲು ಲೈಸೆನ್ಸಿಗಾಗಿ ಅರ್ಜಿಯನ್ನು ಸಲ್ಲಿಸಬಹುದು.

(6) (2) ರಿಂದ (4)ರವರೆಗಿನ ಉಪಪ್ರಕರಣಗಳ ಉಪಬಂಧಗಳು ಅಗತ್ಯ ಮಾರ್ಪಾಟುಗಳೊಂದಿಗೆ (1ಕ) ಪ್ರಕರಣದ ಮೇರೆಗಿನ ಅರ್ಜಿಗೆ ಅವು ಸಂಬಂಧಪಟ್ಟಿರುವಷ್ಟರ ಮಟ್ಟಿಗೆ (5)ನೇ ಉಪಪ್ರಕರಣದ ಮೇರೆಗಿನ ಲೈಸೆನ್ಸಿನ ಮಂಜೂರಾತಿಗೆ ಅನ್ವಯವಾಗತಕ್ಕದು ಮತ್ತು ಅಂಥ ಲೈಸೆನ್ಸನ್ನು ಸಹ —

(ಕ) ಕಾನೂನು ಸಮ್ಮತವಾಗಿ ಅರ್ಜಿಸಿದ ಕೃತಿಯ ಭಾಷಾಂತರವನ್ನು ಮಾಡಿದ್ದ ಹೊರತು ;

(ಖ) ಶಬ್ದ ಮತ್ತು ದೃಶ್ಯ ಧ್ವನಿ ಮುದ್ರಿಕೆಗಳ ಮಾಧ್ಯಮದ ಮೂಲಕ ಆ ಪ್ರಸಾರಣವನ್ನು ಮಾಡಿದ್ದ ಹೊರತು ;

(ಗ) ಅಂಥ ಧ್ವನಿಮುದ್ರಿಕೆಯನ್ನು ಕಾನೂನು ಸಮ್ಮತವಾಗಿ ಮತ್ತು ಅರ್ಜಿದಾರ ಅಥವಾ ಯಾವುದೇ ಇತರ ಪ್ರಸಾರಣಾ ಏಜೆನ್ಸಿಯು ಭಾರತದಲ್ಲಿ ಪ್ರಸಾರಣ ಮಾಡುವ ಉದ್ದೇಶಕ್ಕಾಗಿ ಅನನ್ಯವಾಗಿ ಮಾಡಿದ್ದ ಹೊರತು :

(ಘ) ಭಾಷಾಂತರ ಮತ್ತು ಅಂಥ ಭಾಷಾಂತರದ ಪ್ರಸಾರಣವನ್ನು ಯಾವುದೇ ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸಿಲ್ಲದ ಹೊರತು

— ಮಂಜೂರು ಮಾಡತಕ್ಕದಲ್ಲ.

ವಿವರಣೆ.—ಈ ಪ್ರಕರಣಗಳ ಉದ್ದೇಶಗಳಿಗಾಗಿ,—

ಕ) ''ಅಭಿವೃದ್ಧಿ ಹೊಂದಿದ ದೇಶ'' ಎಂದರೆ ಅಭಿವೃದ್ಧಿ ಹೊಂದುತ್ತಿರುವ ದೇಶವಲ್ಲದಂಥ ದೇಶ ;

(ಖ) "ಅಭಿವೃದ್ಧಿ ಹೊಂದುತ್ತಿರುವ ದೇಶ" ಎಂದರೆ ಸಂಯುಕ್ತ ರಾಷ್ಟ್ರಗಳ ಸಂಘದ ಸಾಮಾನ್ಯ ಸಭೆಯು ಆಚರಣೆಗೆ ಅನುಸಾರವಾಗಿ ತತ್ಕಾಲದಲ್ಲಿ ಹಾಗೆಂದು ಪರಿಗಣಿತವಾದಂಥ ದೇಶ ;

(ಗ) "ಸಂಶೋಧನೆಯು ಉದ್ದೇಶಗಳು",—ಇದರಲ್ಲಿ ಔದ್ಯಮಿಕ ಸಂಶೋಧನೆಯು ಉದ್ದೇಶಗಳು ಅಥವಾ ನಿಗಮಿತ ನಿಕಾಯಗಳು (ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ನಿಗಮಿತ ನಿಕಾಯಗಳಾಗಿರದ) ಅಥವಾ ವಾಣಿಜ್ಯ ಉದ್ದೇಶಗಳಿಗಾಗಿನ ಇತರ ಸಂಸ್ಥೆಗಳು ಅಥವಾ ವ್ಯಕ್ತಿಗಳ ನಿಕಾಯದ ಸಂಶೋಧನೆಯು ಉದ್ದೇಶಗಳನ್ನು ಒಳಗೊಳ್ಳುವುದಿಲ್ಲ ;

(ಘ) "ಬೋಧನೆ, ಸಂಶೋಧನೆ ಅಥವಾ ವಿದ್ವತ್ತಿನ ಉದ್ದೇಶಗಳು" —

(i) ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಮತ್ತು ಟ್ಯುಟೋರಿಯಲ್ ಸಂಸ್ಥೆಗಳನ್ನು ಒಳಗೊಂಡ ಶೈಕ್ಷಣಿಕ ಸಂಸ್ಥೆಗಳಲ್ಲಿನ ಎಲ್ಲಾ ಮಟ್ಟಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ಉದ್ದೇಶಗಳು ; ಮತ್ತು

(ii) ಇತರ ಎಲ್ಲಾ ರೀತಿಗಳ ಸಂಘಟಿತ ಶೈಕ್ಷಣಿಕ ಚಟುವಟಿಕೆಯ ಉದ್ದೇಶಗಳು

—ಇವುಗಳನ್ನು ಒಳಗೊಳ್ಳುತ್ತವೆ.

**32ಕ. ಕೆಲವು ಉದ್ದೇಶಗಳಿಗಾಗಿ ಕೃತಿಗಳನ್ನು ಯಥಾವತ್ತಾಗಿ ನಿರೂಪಿಸಲು ಮತ್ತು ಪ್ರಕಟಿಸಲು ಲೈಸೆನ್ಸ್:—**

(1) ಸಾಹಿತ್ಯಕ, ವೈಜ್ಞಾನಿಕ ಅಥವಾ ಕಲಾತ್ಮಕ ಕೃತಿಯ ಆವೃತ್ತಿಯ ಮೊದಲ ಪ್ರಕಟಣೆಯ ದಿನಾಂಕದಿಂದ ಸಂಬಂಧಪಟ್ಟ ಅವಧಿಯು ಮುಕ್ತಾಯವಾದ ತರುವಾಯ, ಯಥಾವತ್ತಾದ ನಿರೂಪಣೆಯ ಬಗೆಗಿನ ಹಕ್ಕಿನ ಒಡೆಯನು ಅಥವಾ ಈ ಬಗೆ ಅವನಿಂದ ಅಧಿಕೃತನಾದ ಯಾವನೇ ವ್ಯಕ್ತಿಯು, ಸದೃಶ ಕಲೆಗಳಿಗಾಗಿ ಭಾರತದಲ್ಲಿ ಸಾಮಾನ್ಯವಾಗಿ ವಿಧಿಸಲಾದ ಬೆಲೆಗೆ ಯುಕ್ತವಾಗಿ ಸಂಬಂಧಪಟ್ಟ ಬೆಲೆಯಲ್ಲಿ ಸಾರ್ವಜನಿಕರಿಗೆ ಅಥವಾ ವ್ಯವಸ್ಥಿತ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ, —

(ಕ) ಅಂಥ ಆವೃತ್ತಿಯ ಪ್ರತಿಗಳನ್ನು ಭಾರತದಲ್ಲಿ ಲಭ್ಯಗೊಳಿಸಿಲ್ಲದಿರುವಲ್ಲಿ; ಅಥವಾ

(ಖ) ಅಂಥ ಪ್ರತಿಗಳನ್ನು ಆರು ತಿಂಗಳುಗಳ ಅವಧಿಯವರೆಗೆ ಭಾರತದಲ್ಲಿ ಮಾರಾಟಕ್ಕಾಗಿ ಇಟ್ಟಿಲ್ಲದಿರುವಲ್ಲಿ, —ಯಾವನೇ ವ್ಯಕ್ತಿಯು ಅಂಥ ಕೃತಿಯನ್ನು, ಅಂಥ ಆವೃತ್ತಿಯು ಮಾರಾಟವಾಗುತ್ತಿರುವ ಬೆಲೆಯಲ್ಲಿ ಅಥವಾ ವ್ಯವಸ್ಥಿತ ಶೈಕ್ಷಣಿಕ ಚಟುವಟಿಕೆಗಳ ಉದ್ದೇಶಗಳಿಗಾಗಿ ಕಡಿಮೆ ಬೆಲೆಯಲ್ಲಿ, ಮುದ್ರಿತ ಅಥವಾ ಯಥಾವತ್ತಾದ ನಿರೂಪಣೆಯ ಸದೃಶ ರೂಪಗಳಲ್ಲಿ ಯಥಾವತ್ತಾಗಿ ನಿರೂಪಿಸಲು ಮತ್ತು ಪ್ರಕಟಿಸಲು, ಲೈಸೆನ್ಸಿಗಾಗಿ ಕೃತಿಸ್ವಾಮ್ಯ ಮಂಡಲಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) ಅಂಥ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅದರಲ್ಲಿ ಯಥಾವತ್ತಾಗಿ ನಿರೂಪಿಸಬೇಕಾಗಿರುವ ಕೃತಿಯ ಪ್ರತಿಯ ಉದ್ದೇಶಿತ ಚಿಲ್ಲರೆ ಬೆಲೆಯನ್ನು ನಿರೂಪಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಲೈಸೆನ್ಸ್‌ಗಾಗಿ ಪ್ರತಿಯೊಬ್ಬ ಅರ್ಜಿದಾರನು, ಅವನ ಅರ್ಜಿಯ ಜತೆಗೆ ನಿಯಮಿಸಬಹುದಾದಂಥ ಫೀಜನ್ನು ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಲ್ಲಿ ಇಡತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಕೃತಿಸ್ವಾಮ್ಯ ಮಂಡಲಿಗೆ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಅದು ನಿಯಮಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಅರ್ಜಿಯಲ್ಲಿ ನಮೂದಿಸಿದ ಕೃತಿಯನ್ನು ಹೊರತರಲು ಮತ್ತು ಅದರ ಯಥಾವತ್ತಾದ ನಿರೂಪಣೆಯನ್ನು ಪ್ರಕಟಿಸಲು ಅನನ್ಯವಾದ ಲೈಸೆನ್ಸ್ ಅಲ್ಲದ ಲೈಸೆನ್ಸನ್ನು, —

(i) ಕೃತಿಯಲ್ಲಿ ಕೃತಿಸ್ವಾಮ್ಯದ ಒಡೆಯನಿಗೆ, ಸಾರ್ವಜನಿಕರಿಗೆ ಮಾರಾಟ ಮಾಡಿದ ಕೃತಿಯ ಯಥಾವತ್ತಾದ ನಿರೂಪಣೆಯ ಪ್ರತಿಗಳಿಗೆ ಸಂಬಂಧಿಸಿದಂತೆ ಸ್ವಾಮ್ಯ ಶುಲ್ಕಗಳನ್ನು ಪ್ರತಿಯೊಂದು ಪ್ರಕರಣದ ಸಂದರ್ಭಗಳಲ್ಲಿ ನಿಯಮಿಸಿದ ರೀತಿಯಲ್ಲಿ ಕೃತಿಸ್ವಾಮ್ಯ ಮಂಡಲಿಯು ನಿರ್ಧರಿಸಬಹುದಾದ ದರದಲ್ಲಿ ಲೆಕ್ಕಹಾಕಿ ಅರ್ಜಿದಾರನು ಸಂದಾಯ ಮಾಡತಕ್ಕದೆಂಬ;

(ii) ಈ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸ್ ಆ ಕೃತಿಯ ಯಥಾವತ್ತಾದ ನಿರೂಪಣೆಯ ಪ್ರತಿಗಳು ಭಾರತದ ಹೊರಗಿನ ರಫ್ತಿಗೆ ವ್ಯಾಪ್ತವಾಗತಕ್ಕದ್ದಲ್ಲ ಮತ್ತು ಅಂಥ ಯಥಾವತ್ತಾದ ನಿರೂಪಣೆಯ ಪ್ರತಿಯೊಂದು ಪ್ರತಿಯೂ, ಆ ಪ್ರತಿಯು ಭಾರತದಲ್ಲಿ ಮಾತ್ರ ವಿತರಣೆಗಾಗಿ ಲಭ್ಯವಿದೆ ಎಂಬ ನೋಟೀಸನ್ನು ಒಳಗೊಂಡಿರತಕ್ಕದೆಂಬ;

—ಷರತ್ತುಗಳಿಗೆ ಒಳಪಟ್ಟು ಅರ್ಜಿದಾರನಿಗೆ ಮಂಜೂರು ಮಾಡಬಹುದು :

ಪರಂತು,—

(ಕ) ಅರ್ಜಿದಾರನು, ಅಂಥ ಕೃತಿಯನ್ನು ಯಥಾವತ್ತಾಗಿ ರೂಪಿಸಲು ಮತ್ತು ಪ್ರಕಟಿಸಲು ಅವನು ಆ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನು ಕೋರಿದ್ದನೆಂದು ಮತ್ತು ಅವನು ತನ್ನನ್ನು ಅಧಿಕೃತಗೊಳಿಸಲು ನಿರಾಕರಿಸಿದನೆಂದು ಅಥವಾ ಅವನು ಯುಕ್ತ ಶ್ರದ್ಧೆಯನ್ನು ವಹಿಸಿದ ತರುವಾಯ ಅಂಥ ಒಡೆಯನನ್ನು ಕಂಡುಹಿಡಿಯಲು ಅವನು ಅಸಮರ್ಥನಾಗಿದ್ದಾನೆ ಎಂದು ಕೃತಿಸ್ವಾಮ್ಯ ಮಂಡಲಿಗೆ ಮನವರಿಕೆಯಾಗುವಂತೆ ರುಜುವಾತುಪಡಿಸಿದ ಹೊರತು;

(ಖ) ಕೃತಿಸ್ವಾಮ್ಯದ ಒಡೆಯನನ್ನು ಕಂಡುಹಿಡಿಯಲು ಅರ್ಜಿದಾರನು ಅಸಮರ್ಥನಾಗಿರುವಲ್ಲಿ, ಅವನು ಆ ಕೃತಿಯಿಂದ ಕಂಡು ಬರುವ ಹೆಸರಿನ ಪ್ರಕಾಶಕನಿಗೆ, ಲೈಸೆನ್ಸ್‌ಗಾಗಿ ಅರ್ಜಿಯನ್ನು ಸಲ್ಲಿಸುವುದಕ್ಕೆ ಮುಂಚೆ ಮೂರು ತಿಂಗಳಿಗೆ ಕಡಿಮೆ ಇಲ್ಲದೆ, ನೋಂದಾಯಿತ ವಿಮಾನ ಅಂಚೆಯ ಮೂಲಕ ಅವನ ಕೋರಿಕೆ ಪ್ರತಿಯನ್ನು ಕಳುಹಿಸಿದ್ದ ಹೊರತು ;

(ಗ) ಕೃತಿಸ್ವಾಮ್ಯ ಮಂಡಲಿಗೆ ಆ ಅರ್ಜಿದಾರನು ಆ ಕೃತಿಯ ಕರಾರುವಕ್ಕಾದ ಯಥಾವತ್ತಾದ ನಿರೂಪಣೆಯನು ಯಥಾವತ್ತಾಗಿ ನಿರೂಪಿಸಲು ಮತ್ತು ಪ್ರಕಟಿಸಲು ಅರ್ಜಿದಾರನು ಸಕ್ರಿಯನಾಗಿದ್ದಾನೆ ಮತ್ತು ಈ ಪ್ರಕರಣದ ಮೇರೆಗೆ ಕೃತಿಸ್ವಾಮ್ಯದ ಒಡೆಯನಿಗೆ ಸಂದಾಯ ಮಾಡಬೇಕಾದ ಸ್ವಾಮ್ಯ ಶುಲ್ಕಗಳನ್ನು ಸಂದಾಯ ಮಾಡಲು ಸಾಧನ ಮೂಲವನ್ನು ಹೊಂದಿದ್ದಾನೆ ಎಂದು ಮನವರಿಕೆ ಆದ ಹೊರತು :

(ಘ) ಅರ್ಜಿದಾರನು ಅಂಥದೇ ಅಥವಾ ಅದೇ ರೀತಿಯ ವಿಷಯಗಳ ಮೇಲೆ ಅಂಥದೇ ಗುಣಮಟ್ಟದ ಕೃತಿಗಳಿಗಾಗಿ ಭಾರತದಲ್ಲಿ ಸಾಮಾನ್ಯವಾಗಿ ವಿಧಿಸಿದ ಬೆಲೆಗೆ ಯುಕ್ತವಾಗಿ ಸಂಬಂಧಪಡುವ ಬೆಲೆಯಾಗಿರುವ, ಕೃತಿಸ್ವಾಮ್ಯ ಮಂಡಲಿಯು ನಿಗದಿಪಡಿಸಬಹುದಾದಂತಹ ಬೆಲೆಯಲ್ಲಿ ಆ ಕೃತಿಯನ್ನು ಯಥಾವತ್ತಾಗಿ ನಿರೂಪಿಸಲು ಮತ್ತು ಪ್ರಕಟಿಸಲು ಅರ್ಜಿದಾರನು ಜವಾಬ್ದಾರಿಯನ್ನು ಹೊತ್ತ ಹೊರತು ;

(ಙ) (ಕ) ಖಂಡದ ಮೇರೆಗೆ ಮಾಡಿಕೊಂಡ ಕೋರಿಕೆಯ ದಿನಾಂಕದಿಂದ ಅಥವಾ (ಖ) ಖಂಡದ ಮೇರೆಗೆ ಕೋರಿಕೆಯ ಪ್ರತಿಯನ್ನು ಕಳುಹಿಸಿಕೊಟ್ಟಿರುವಲ್ಲಿ ಆ ಪ್ರತಿಯನ್ನು ಕಳುಹಿಸಿದ ದಿನಾಂಕದಿಂದ, ಪ್ರಕೃತಿ ವಿಜ್ಞಾನ, ಭೌತ ವಿಜ್ಞಾನ, ಗಣಿತ ಅಥವಾ ಯಂತ್ರ ವಿಜ್ಞಾನದ ಯಾವುದೇ ಕೃತಿಯ ಯಥಾವತ್ತಾದ ನಿರೂಪಣೆ ಮತ್ತು ಪ್ರಕಟಣೆಗಾಗಿನ ಅರ್ಜಿಯ ಸಂಬಂಧದಲ್ಲಿ ಆರು ತಿಂಗಳುಗಳ ಅವಧಿ ಅಥವಾ ಯಾವುದೇ ಇತರ ಕೃತಿಯ ಯಥಾವತ್ತಾದ ನಿರೂಪಣೆ ಮತ್ತು ಪ್ರಕಟಣೆಗಾಗಿನ ಅರ್ಜಿಯ ಸಂದರ್ಭದಲ್ಲಿ ಮೂರು ತಿಂಗಳುಗಳ ಅವಧಿಯು ಗತಿಸಿದ್ದ ಹೊರತು ಮತ್ತು ಆ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನು ಅಥವಾ ಅವನಿಂದ ಅಧಿಕೃತನಾದ ಯಾವನೇ ವ್ಯಕ್ತಿಯು ಸಂದರ್ಭಾನುಸಾರ ಸದರಿ ಆರು ತಿಂಗಳುಗಳು ಅಥವಾ ಮೂರು ತಿಂಗಳುಗಳ ಅವಧಿಯ ಒಳಗೆ ಆ ಕೃತಿಯ ಯಥಾವತ್ತಾದ ನಿರೂಪಣೆಯನ್ನು ಪ್ರಕಟಿಸಿಲ್ಲದೇ ಇದ್ದ ಹೊರತು ;

(ಚ) ಯಥಾವತ್ತಾಗಿ ನಿರೂಪಿಸಲು ಉದ್ದೇಶಿಸಿದ ಕೃತಿಯ ಕರ್ತೃವಿನ ಹೆಸರು ಮತ್ತು ಅದರ ನಿರ್ದಿಷ್ಟ ಆವೃತ್ತಿಯ ಶೀರ್ಷಿಕೆಯನ್ನು ಆ ಯಥಾವತ್ತಾದ ನಿರೂಪಣೆಯ ಎಲ್ಲಾ ಪ್ರತಿಗಳ ಮೇಲೆ ಮುದ್ರಿಸಿದ್ದ ಹೊರತು ;

(ಛ) ಕರ್ತೃವು ಆ ಕೃತಿಯ ಪ್ರತಿಗಳನ್ನು ಪ್ರಸಾರದಿಂದ ಹಿಂತೆಗೆದುಕೊಂಡಿಲ್ಲದ ಹೊರತು ; ಮತ್ತು

(ಜ) ಆ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನಿಗೆ ಕಾರ್ಯಸಾಧ್ಯವಿರುವಾಗಲೆಲ್ಲಾ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟಿದ್ದ ಹೊರತು

—ಅಂಥ ಯಾವುದೇ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ.

(5) ಈ ಪ್ರಕರಣದ ಮೇರೆಗೆ ಕೃತಿಯ ಭಾಷಾಂತರವನ್ನು ಯಥಾವತ್ತಾಗಿ ನಿರೂಪಿಸಲು ಮತ್ತು ಪ್ರಕಟಿಸಲು ಯಾವುದೇ ಲೈಸೆನ್ಸನ್ನು, ಭಾಷಾಂತರದ ಹಕ್ಕಿನ ಒಡೆಯನು ಅಥವಾ ಅವನಿಂದ ಅಧಿಕೃತನಾದ ಯಾವನೇ ವ್ಯಕ್ತಿಯು ಅಂಥ ಭಾಷಾಂತರವನ್ನು ಪ್ರಕಟಿಸಿದ್ದ ಹೊರತು ಮತ್ತು ಆ ಭಾಷಾಂತರವು ಭಾರತದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಭಾಷೆಯಲ್ಲಿರದ ಹೊರತು ಮಂಜೂರು ಮಾಡತಕ್ಕದ್ದಲ್ಲ.

(6) ಈ ಪ್ರಕರಣದ ಉಪಬಂಧಗಳು ವ್ಯವಸ್ಥಿತ ಶೈಕ್ಷಣಿಕ ಚಟುವಟಿಕೆಗಳ ಉದ್ದೇಶಕ್ಕಾಗಿ ಮಾತ್ರವೇ ತಯಾರಿಸಿದ ಮತ್ತು ಪ್ರಕಟಿಸಿದ ಶ್ರವಣ ವೀಕ್ಷಣ ಜೋಡಣೆಗಳಲ್ಲಿ ಅಳವಡಿಸಿದ ಯಾವುದೇ ಪಾಠ ಯಥಾವತ್ತಾದ ನಿರೂಪಣೆಗೆ ಮತ್ತು ಪ್ರಕಟಣೆಗೆ ಅಥವಾ ಭಾರತದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಭಾಷೆಗೆ ಭಾಷಾಂತರಿಸುವುದಕ್ಕೂ ಸಹ ಅನ್ವಯವಾಗತಕ್ಕುದು.

ವಿವರಣೆ:—ಈ ಪ್ರಕರಣದ ಉದ್ದೇಶಗಳಿಗಾಗಿ ಯಾವುದೇ ಕೃತಿಗೆ ಸಂಬಂಧಪಟ್ಟಂತೆ "ಸಂಬಂಧಪಟ್ಟ ಅವಧಿ" ಎಂದರೆ—

(ಕ) ಕಾಲ್ಪನಿಕ ಸಾಹಿತ್ಯ, ಕಾವ್ಯ, ನಾಟಕ, ಸಂಗೀತ ಅಥವಾ ಕಲೆಯ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಕೃತಿಯ ಯಥಾವತ್ತಾದ ನಿರೂಪಣೆ ಮತ್ತು ಪ್ರಕಟಣೆಗಾಗಿನ ಅರ್ಜಿಯಾಗಿರುವಲ್ಲಿ ಆ ಕೃತಿಯ ಮೊದಲ ಪ್ರಕಟಣೆಯ ದಿನಾಂಕದಿಂದ ಏಳು ವರ್ಷಗಳ ಅವಧಿ;

(ಖ) ಪ್ರಾಕೃತಿಕ ವಿಜ್ಞಾನ, ಭೌತ ವಿಜ್ಞಾನ, ಗಣಿತ ಅಥವಾ ಯಂತ್ರ ವಿಜ್ಞಾನದ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಕೃತಿಯ ಯಥಾವತ್ತಾದ ನಿರೂಪಣೆ ಮತ್ತು ಪ್ರಕಟಣೆಗಾಗಿನ ಅರ್ಜಿಯಾಗಿರುವಲ್ಲಿ ಆ ಕೃತಿಯ ಮೊದಲ ಪ್ರಕಟಣೆಯ ದಿನಾಂಕದಿಂದ ಮೂರು ವರ್ಷಗಳ ಅವಧಿ;

(ಗ) ಇತರ ಯಾವುದೇ ಸಂದರ್ಭದಲ್ಲಿ ಆ ಕೃತಿಯ ಮೊದಲ ಪ್ರಕಟಣೆಯ ದಿನಾಂಕದಿಂದ ಐದು ವರ್ಷಗಳ ಅವಧಿ.

32ಖ. **ಈ ಅಧ್ಯಾಯದ ಮೇರೆಗೆ ಕೊಟ್ಟ ಲೈಸೆನ್ಸ್‌ಗಳನ್ನು ಕೊನೆಗೊಳಿಸುವುದು** :—(1) 32ನೇ ಪ್ರಕರಣದ (1ಕ) ಉಪಪ್ರಕರಣದ ಮೇರೆಗೆ ಯಾವುದೇ ಭಾಷೆಯಲ್ಲಿನ ಕೃತಿಯ (ಇಲ್ಲಿ ಇನ್ನು ಮುಂದೆ ಈ ಉಪಪ್ರಕರಣದಲ್ಲಿ ಲೈಸೆನ್ಸ್ ಪಡೆದ ಕೃತಿ ಎಂದು ಉಲ್ಲೇಖಿಸಿದೆ) ಭಾಷಾಂತರವನ್ನು ಹೊರತರಲು ಮತ್ತು ಪ್ರಕಟಿಸಲು ಲೈಸೆನ್ಸ್‌ನ್ನು ಮಂಜೂರು ಮಾಡಿದ ತರುವಾಯ ಯಾವುದೇ ಕಾಲದಲ್ಲಿ, ಆ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯ ಅಥವಾ ಅವನಿಂದ ಅಧಿಕೃತನಾದ ಯಾವನೇ ವ್ಯಕ್ತಿಯು ಅದೇ ಭಾಷೆಯಲ್ಲಿ ಮತ್ತು ಸಾರಭೂತವಾಗಿ ಅದೇ ಒಳಾಂಶವಿರುವಂಥ ಕೃತಿಯ ಭಾಷಾಂತರವನ್ನು, ಭಾರತದಲ್ಲಿ ಅಂಥದೇ ಅಥವಾ ಸದೃಶ ವಿಷಯದ ಮೇಲೆ ಅದೇ ಮಟ್ಟದ ಕೃತಿಗಳ ಭಾಷಾಂತರಕ್ಕಾಗಿ ಸಾಮಾನ್ಯವಾಗಿ ವಿಧಿಸಿದ ಬೆಲೆಗೆ ಯುಕ್ತವಾಗಿ ಸಂಬಂಧಪಟ್ಟ ಬೆಲೆಯಲ್ಲಿ ಪ್ರಕಟಿಸಿದರೆ, ಹಾಗೆ ಮಂಜೂರು ಮಾಡಿದ ಲೈಸೆನ್ಸ್‌ನ್ನು ಕೊನೆಗೊಳಿಸತಕ್ಕದು:

ಪರಂತು, ಅಂಥ ಯಾವುದೇ ಕೊನೆಗೊಳಿಸುವಿಕೆಯು ಹಿಂದೆ ಹೇಳಿದ ಭಾಷಾಂತರದ ಪ್ರಕಟಣೆಯನ್ನು ತಿಳಿಸಿ, ಭಾಷಾಂತರದ ಹಕ್ಕಿನ ಒಡೆಯನು ಅಂಥ ಲೈಸೆನ್ಸ್‌ನ್ನು ಧಾರಣ ಮಾಡಿರುವ ವ್ಯಕ್ತಿಗೆ ನಿಯಮಿಸಿದ ರೀತಿಯಲ್ಲಿ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯು ಮುಕ್ತಾಯವಾಗುವವರೆಗೆ ಪರಿಣಾಮಕಾರಿಯಾಗತಕ್ಕದ್ದಲ್ಲ:

ಮತ್ತೂ ಪರಂತು, ಆ ಲೈಸೆನ್ಸಿನ ಕೊನೆಗೊಳಿಸುವಿಕೆಯು ಪರಿಣಾಮಕಾರಿಯಾಗುವುದಕ್ಕೆ ಮುಂಚೆ ಅಂಥ ಲೈಸೆನ್ಸ್‌ನ್ನು ಧಾರಣ ಮಾಡಿರುವ ವ್ಯಕ್ತಿಯು ಹೊರತಂದ ಮತ್ತು ಪ್ರಕಟಿಸಿದ ಲೈಸೆನ್ಸ್ ಪಡೆದ ಕೃತಿಯ ಪ್ರತಿಗಳನ್ನು, ಈಗಾಗಲೇ ಹೊರತಂದ ಮತ್ತು ಪ್ರಕಟಿಸಿದ ಪ್ರತಿಗಳು ಮುಗಿದು ಹೋಗುವವರೆಗೆ ಮಾರಾಟ ಮಾಡುವುದು ಅಥವಾ ವಿತರಣೆ ಮಾಡುವುದು ಮುಂದುವರೆಯಬಹುದು.

(2) (32ಕ) ಪ್ರಕರಣದ ಮೇರೆಗೆ ಯಾವುದೇ ಕೃತಿಯ ಯಥಾವತ್ತಾದ ನಿರೂಪಣೆ ಅಥವಾ ಭಾಷಾಂತರವನ್ನು ಹೊರತರಲು ಅಥವಾ ಪ್ರಕಟಿಸಲು ಲೈಸೆನ್ಸ್‌ನ್ನು ಮಂಜೂರು ಮಾಡಿದ ತರುವಾಯ ಯಾವುದೇ ಕಾಲದಲ್ಲಿ ಯಥಾವತ್ತಾದ ನಿರೂಪಣೆಯ ಹಕ್ಕಿನ ಒಡೆಯ ಅಥವಾ ಅವನಿಂದ ಅಧಿಕೃತನಾದ ಯಾವನೇ ವ್ಯಕ್ತಿಯು ಸಂದರ್ಭಾನುಸಾರ ಅಂಥ ಕೃತಿಯ ಪ್ರತಿಗಳನ್ನು ಅಥವಾ ಅದೇ ಭಾಷೆಯಲ್ಲಿನ ಮತ್ತು ಸಾರಭೂತವಾಗಿ ಅದೇ ಒಳಾಂಶವಿರುವ ಅದರ ಭಾಷಾಂತರದ ಪ್ರತಿಗಳನ್ನು ಭಾರತದಲ್ಲಿ ಅಂಥದೇ ಅಥವಾ ಸದೃಶ ವಿಷಯದ ಮೇಲೆ ಅದೇ ಗುಣಮಟ್ಟದ ಕೃತಿಗಳಿಗಾಗಿ ಸಾಮಾನ್ಯವಾಗಿ ವಿಧಿಸಿದ ಬೆಲೆಗೆ

ಯುಕ್ತವಾಗಿ ಸಂಬಂಧಪಟ್ಟ ಬೆಲೆಯಲ್ಲಿ ಮಾರಾಟ ಮಾಡಿದರೆ ಅಥವಾ ವಿತರಣೆ ಮಾಡಿದರೆ, ಹಾಗೆ ಮಂಜೂರು ಮಾಡಿದ ಲೈಸೆನ್ಸನ್ನು ಕೊನೆಗೊಳಿಸತಕ್ಕುದು :

ಪರಂತು, ಅಂಥ ಕೊನೆಗೊಳಿಸುವಿಕೆಯು, ಹಿಂದೆ ಹೇಳಿದ ಕೃತಿಯ ಆವೃತ್ತಿಗಳ ಪ್ರತಿಗಳ ಮಾರಾಟ ಅಥವಾ ವಿತರಣೆಯನ್ನು ತಿಳಿಸಿ ಯಥಾವತ್ತಾಗಿ ನಿರೂಪಿಸುವ ಹಕ್ಕಿನ ಒಡೆಯನು ಆ ಲೈಸೆನ್ಸನ್ನು ಧಾರಣ ಮಾಡಿರುವ ವ್ಯಕ್ತಿಗೆ ನಿಯಮಿಸಿದ ರೀತಿಯಲ್ಲಿ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯು ಮುಕ್ತಾಯವಾಗುವವರೆಗೆ ಪರಿಣಾಮಕಾರಿಯಾಗತಕ್ಕುದಲ್ಲ :

ಮತ್ತೂ ಪರಂತು, ಅಂಥ ಕೊನೆಗೊಳಿಸುವಿಕೆಯು ಪರಿಣಾಮಕಾರಿಯಾಗುವುದಕ್ಕೆ ಮುಂಚೆ ಲೈಸೆನ್ಸ್ ಪಡೆದವನು ಈಗಾಗಲೇ ಯಥಾವತ್ತಾಗಿ ನಿರೂಪಿಸಿದ ಯಾವುವೇ ಪ್ರತಿಗಳನ್ನು ಈಗಾಗಲೇ ಹೊರತಂದ ಪ್ರತಿಗಳು ಮುಗಿದುಹೋಗುವವರೆಗೆ ಮಾರಾಟ ಮಾಡುವುದನ್ನು ಅಥವಾ ವಿತರಣೆ ಮಾಡುವುದನ್ನು ಮುಂದುವರೆಸಬಹುದು.

## ಅಧ್ಯಾಯ-VII

### ಪ್ರಸ್ತುತ ಪಡಿಸುವ ಹಕ್ಕುಗಳ ಸಂಘಗಳು

**33.** ಪ್ರಸ್ತುತ ಪಡಿಸುವ ಹಕ್ಕುಗಳ ಸಂಘವು ಫೀಜುಗಳ, ಚಾರ್ಜುಗಳ ಮತ್ತು ಸ್ವಾಮ್ಯಶುಲ್ಕಗಳ ವಿವರಪತ್ರವನ್ನು ದಾಖಲು ಮಾಡತಕ್ಕುದು:—(1) ಪ್ರತಿಯೊಂದು ಪ್ರಸ್ತುತಪಡಿಸುವ ಹಕ್ಕುಗಳ ಸಂಘವು ನಿಯಮಿಸಿದ ಕಾಲದಲ್ಲಿ ಮತ್ತು ನಿಯಮಿಸಿದ ರೀತಿಯಲ್ಲಿ, ಅದು ಅಂಥ ಲೈಸೆನ್ಸ್‌ಗಳನ್ನು ಕೊಡಲು ಅಧಿಕಾರ ಹೊಂದಿರುವಂಥ ಕೃತಿಗಳಿಗೆ ಸಂಬಂಧಿಸಿದಂತೆ, ಸಾರ್ವಜನಿಕವಾಗಿ ಪ್ರಸ್ತುತಪಡಿಸುವುದಕ್ಕಾಗಿ ಲೈಸೆನ್ಸ್‌ಗಳನ್ನು ಕೊಡುವುದಕ್ಕೆ ಅದು ಸಂಗ್ರಹಿಸಲು ಉದ್ದೇಶಿಸಿರುವಂಥ ಎಲ್ಲ ಫೀಜು, ಚಾರ್ಜು, ಅಥವಾ ಸ್ವಾಮ್ಯ ಶುಲ್ಕಗಳ ವಿವರ ಪತ್ರಗಳನ್ನು ತಯಾರಿಸತಕ್ಕುದು, ಪ್ರಕಟಿಸತಕ್ಕುದು ಮತ್ತು ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಲ್ಲಿ ಅವುಗಳನ್ನು ದಾಖಲು ಮಾಡತಕ್ಕುದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಯಾವುದೇ ಕೃತಿಗೆ ಸಂಬಂಧಪಟ್ಟಂತೆ ಆ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿವರಪತ್ರಗಳನ್ನು ತಯಾರಿಸಲು, ಪ್ರಕಟಿಸಲು ಅಥವಾ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಲ್ಲಿ ದಾಖಲು ಮಾಡಲು ಯಾವುದೇ ಅಂಥ ಸಂಘವು ತಪ್ಪಿದರೆ, ಆ ಕೃತಿಯನ್ನು ಪ್ರಸ್ತುತಪಡಿಸುವ ಹಕ್ಕುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಸಿವಿಲ್ ಅಥವಾ ಕ್ರಿಮಿನಲ್ ಸ್ವರೂಪದ ಯಾವುದೇ ಪರಿಹಾರೋಪಾಯವನ್ನು ಜಾರಿಗೊಳಿಸಲು ಯಾವುದೇ ಕ್ರಮ ಅಥವಾ ವ್ಯವಹರಣೆಯನ್ನು, ಕೃತಿಸ್ವಾಮ್ಯಗಳ ರಿಜಿಸ್ಟ್ರಾರನ ಸಮ್ಮತಿ ಪಡೆದ ಹೊರತು, ಪ್ರಾರಂಭಿಸತಕ್ಕುದಲ್ಲ.

**34.** ಪ್ರಕಟಿತ ವಿವರಪತ್ರಗಳಿಗೆ ಸಂಬಂಧಪಟ್ಟಂತೆ ಆಕ್ಷೇಪಣೆಗಳು:—33ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವಿವರ ಪತ್ರದಲ್ಲಿ ಒಳಗೊಂಡ ಯಾವುದೇ ಫೀಜು, ಚಾರ್ಜು ಅಥವಾ ಸ್ವಾಮ್ಯ ಶುಲ್ಕಗಳ ಅಥವಾ ಇತರ ವಿವರಗಳ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಹೊಂದಿರುವ ಯಾವನೇ ವ್ಯಕ್ತಿಯು, ಅಂಥ ಕೃತಿಸ್ವಾಮ್ಯ ಕಛೇರಿಯಲ್ಲಿ ಅಂಥ ಆಕ್ಷೇಪಣೆಗಳನ್ನು ಬರಹದಲ್ಲಿ ಯಾವುದೇ ಕಾಲದಲ್ಲಿ ದಾಖಲ್ಮಾಡಬಹುದು.

**35.** ಆಕ್ಷೇಪಣೆಗಳ ಬಗ್ಗೆ ನಿರ್ಧಾರಣೆ :—(1) 34ನೇ ಪ್ರಕರಣದ ಮೇರೆಗೆ ಕೃತಿಸ್ವಾಮ್ಯ ಕಛೇರಿಯಲ್ಲಿ ದಾಖಲು ಮಾಡಿದ ಪ್ರತಿಯೊಂದು ಆಕ್ಷೇಪಣೆಯನ್ನು ಸಾಧ್ಯವಾದಷ್ಟು ಬೇಗನೆ, ಕೃತಿಸ್ವಾಮ್ಯ ಮಂಡಲಿಗೆ ಒಪ್ಪಿಸತಕ್ಕುದು ಮತ್ತು ಕೃತಿಸ್ವಾಮ್ಯ ಮಂಡಲಿಯು, ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವ ರೀತಿಯಲ್ಲಿ ಅಂಥ ಆಕ್ಷೇಪಣೆಯನ್ನು ತೀರ್ಮಾನಿಸತಕ್ಕುದು.

(2) ಕೃತಿಸ್ವಾಮ್ಯ ಮಂಡಲಿಯು, ಅಂಥ ಪ್ರತಿಯೊಂದು ಆಕ್ಷೇಪಣೆಗೆ ಸಂಬಂಧಿಸಿದಂತೆ ಪ್ರಸ್ತುತಪಡಿಸುವ ಹಕ್ಕುಗಳ ಸಂಘಕ್ಕೆ ಅದರ ಬಗ್ಗೆ ನೋಟೀಸನ್ನು ಕೊಡತಕ್ಕುದು.

(3) ಕೃತಿಸ್ವಾಮ್ಯ ಮಂಡಲಿಯು, ಅಂಥ ಸಂಘಕ್ಕೆ ಮತ್ತು ಆಕ್ಷೇಪಣೆಯನ್ನು ದಾಖಲು ಮಾಡಿದ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ನಿಯಮಿಸಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ ತಾನು ಯೋಗ್ಯವೆಂದು ಯೋಚಿಸುವಂಥ ಬದಲಾವಣೆಗಳನ್ನು ಆ ವಿವರ ಪತ್ರದಲ್ಲಿ ಮಾಡತಕ್ಕುದು ಮತ್ತು ತಾನು ಮಾಡಿದ ಬದಲಾವಣೆಗಳನ್ನು ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಿಗೆ ರವಾನಿಸತಕ್ಕುದು, ಅವನು, ಆ ತರುವಾಯ ಅಂಥ ಬದಲಾವಣೆಗಳನ್ನು ಸ್ವೀಕರಿಸಿದ ನಂತರ ಸಾಧ್ಯವಾದಷ್ಟು ಬೇಗನೆ, ಅವುಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕುದು ಮತ್ತು ಅದರ ಒಂದು ಪ್ರತಿಯನ್ನು ಸಂಬಂಧಿಸಿದ ಪ್ರಸ್ತುತಪಡಿಸುವ ಹಕ್ಕುಗಳ ಸಂಘಕ್ಕೆ ಮತ್ತು ಆಕ್ಷೇಪಣೆಯನ್ನು ದಾಖಲು ಮಾಡಿದ ವ್ಯಕ್ತಿಗೆ ಒದಗಿಸತಕ್ಕುದು.

(4) ಕೃತಿಸ್ವಾಮ್ಯ ಮಂಡಲಿಯು ಬದಲಾಯಿಸಿದ ಫೀಜು, ಚಾರ್ಜು ಅಥವಾ ಸ್ವಾಮ್ಯ ಶುಲ್ಕಗಳು, ಅಂಥ ಫೀಜು, ಚಾರ್ಜು ಅಥವಾ ಸ್ವಾಮ್ಯ ಶುಲ್ಕಗಳಿಗೆ ಸಂಬಂಧಪಡುವಂಥ ಕೃತಿಗಳನ್ನು ಸಾರ್ವಜನಿಕವಾಗಿ ಪ್ರಸ್ತುತಪಡಿಸುವುದಕ್ಕಾಗಿ ಲೈಸೆನ್ಸ್‌ಗಳನ್ನು ಅದು ಕೊಡುವುದಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ಪ್ರಸ್ತುತಪಡಿಸುವ ಹಕ್ಕುಗಳ ಸಂಘವು, ಅನುಕ್ರಮವಾಗಿ ಕಾನೂನುಸಮ್ಮತವಾಗಿ ದಾವೆ ಹೂಡಬಹುದಾದ ಅಥವಾ ಸಂಗ್ರಹಿಸಬಹುದಾದಂಥ ಫೀಜು, ಚಾರ್ಜು ಅಥವಾ ಸ್ವಾಮ್ಯ ಶುಲ್ಕಗಳಾಗಿರತಕ್ಕುದು.

(5) ಯಾವುದೇ ಪ್ರಸ್ತುತಪಡಿಸುವ ಹಕ್ಕುಗಳ ಸಂಘವು, 33ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಆ ಸಂಘವು ಪ್ರಕಟಿಸಿದ ವಿವರ ಪತ್ರದಲ್ಲಿ ಅಥವಾ ಈ ಪ್ರಕರಣದ ಮೇರೆಗೆ ಕೃತಿಸ್ವಾಮ್ಯ ಮಂಡಲಿಯು ಅಂಥ ವಿವರಪತ್ರವನ್ನು ಬದಲಾಯಿಸಿದಲ್ಲಿ, ಹಾಗೆ ಬದಲಾಯಿಸಿದ ವಿವರಪತ್ರದಲ್ಲಿ ಆ ಕೃತಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಫೀಜು, ಚಾರ್ಜು ಅಥವಾ ಸ್ವಾಮ್ಯಶುಲ್ಕಗಳನ್ನು ಅಂಥ ಸಂಘಕ್ಕೆ ಕೊಡ ಮಾಡಿರುವ ಅಥವಾ ಸಂದಾಯ ಮಾಡಿರುವ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ಕೃತಿಯಲ್ಲಿ ಪ್ರಸ್ತುತಪಡಿಸುವ ಹಕ್ಕುಗಳ ಅತಿಲಂಘನೆಗಾಗಿ, ಯಾವುದೇ ಕ್ರಮ ಕೈಗೊಳ್ಳುವ ಹಕ್ಕನ್ನು ಅಥವಾ ಯಾವುದೇ ಸಿವಿಲ್ ಅಥವಾ ಇತರ ಪರಿಹಾರೋಪಾಯವನ್ನು ಜಾರಿಗೊಳಿಸುವ ಯಾವುದೇ ಹಕ್ಕನ್ನು ಹೊಂದಿರತಕ್ಕುದಲ್ಲ.

(6) 33ನೇ ಪ್ರಕರಣದ ಮೇರೆಗೆ ಪ್ರಕಟಿಸಿದ ವಿವರ ಪತ್ರದಲ್ಲಿ ಒಳಗೊಂಡ ಯಾವುದೇ ಕೃತಿಗೆ ಸಂಬಂಧಿಸಿದಂತೆ, ಫೀಜು, ಚಾರ್ಜು ಅಥವಾ ಸ್ವಾಮ್ಯ ಶುಲ್ಕಗಳ ಬಗ್ಗೆ ಕೃತಿ ಸ್ವಾಮ್ಯ ಕಚೇರಿಯಲ್ಲಿ ಯಾವನೇ ವ್ಯಕ್ತಿಯು ಆಕ್ಷೇಪಣೆಯನ್ನು ದಾಖಲು ಮಾಡಿರುವಲ್ಲಿ, ಆ ವ್ಯಕ್ತಿ ಅಥವಾ ಇತರ ಯಾವನೇ ವ್ಯಕ್ತಿಯು ಅಂಥ ಫೀಜು, ಚಾರ್ಜು ಅಥವಾ ಸಾಮ್ಯ ಶುಲ್ಕಗಳನ್ನು ಕೃತಿಸಾಮ್ಯ ಕಛೇರಿಯಲ್ಲಿ ಠೇವಣಿ ಇಟ್ಟ ಮೇಲೆ, ಸಂದರ್ಭಾನುಸಾರ ಕೃತಿ ಸ್ವಾಮ್ಯ ಮಂಡಲಿ ಅಥವಾ ಉಚ್ಚ ನ್ಯಾಯಾಲಯವು ಅಂಥ ಆಕ್ಷೇಪಣೆಯ ಬಗ್ಗೆ ಅಂತಿಮವಾಗಿ ತೀರ್ಮಾನಿಸುವವರೆಗೆ, ಆ ಕೃತಿಯನ್ನು ಅದರಲ್ಲಿನ ಕೃತಿ ಸ್ವಾಮ್ಯವನ್ನು ಅತಿಲಂಘಿಸದೆ ಪ್ರದರ್ಶಿಸಬಹುದು.

(7) (6)ನೇ ಉಪಪ್ರಕರಣದ ಮೇರೆಗೆ ಕೃತಿಸ್ವಾಮ್ಯ ಕಚೇರಿಯಲ್ಲಿ ಠೇವಣಿ ಇಟ್ಟ ಫೀಜು, ಚಾರ್ಜು ಅಥವಾ ಸ್ವಾಮ್ಯ ಶುಲ್ಕಗಳನ್ನು ಹಿಂದೆ ಹೇಳಿದ ಆಕ್ಷೇಪಣೆಯ ಮೇಲಿನ ಅಂತಿಮ ತೀರ್ಮಾನಕ್ಕನುಸಾರವಾಗಿ ಸಂಬಂಧಪಟ್ಟ ಪ್ರಸ್ತುತ ಪಡಿಸುವ ಹಕ್ಕುಗಳ ಸಂಘಕ್ಕೆ ಅಥವಾ ಠೇವಣಿಯನ್ನು ಮಾಡಿದ ವ್ಯಕ್ತಿಗೆ ಅಥವಾ ಭಾಗಶಃ ಅಂಥ ಸಂಘಕ್ಕೆ ಮತ್ತು ಭಾಗಶಃ ಅಂಥ ವ್ಯಕ್ತಿಗೆ ಸಂದಾಯ ಮಾಡತಕ್ಕದು.

**36. ಅಸ್ತಿತ್ವದಲ್ಲಿರುವ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ:**—ಈ ಅಧ್ಯಾಯದಲ್ಲಿ ಇರುವುದು ಯಾವುದೂ—

(ಕ) ಪ್ರಸ್ತುತಪಡಿಸುವ ಹಕ್ಕುಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಒದಗಿ ಬಂದ ಅಥವಾ ವಹಿಸಿದ ಯಾವುದೇ ಕೃತಿಯಲ್ಲಿನ ಯಾವುವೇ ಹಕ್ಕುಗಳು ಅಥವಾ ಹೊಣೆಗಾರಿಕೆಗಳಿಗೆ ;

(ಖ) ಅಂಥ ಪ್ರಾರಂಭದಲ್ಲಿ ಇತ್ಯರ್ಥದಲ್ಲಿರುವ ಅಂಥ ಹಕ್ಕುಗಳು ಅಥವಾ ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ಯಾವುದೇ ಕಾನೂನು ವ್ಯವಹರಣೆಗಳಿಗೆ

— ಬಾಧಕವನ್ನುಂಟು ಮಾಡುತ್ತದೆಂದು ಭಾವಿಸತಕ್ಕದ್ದಲ್ಲ.

## ಅಧ್ಯಾಯ—VIII

### ಪ್ರಸಾರಣ ಪ್ರಾಧಿಕಾರಗಳ ಹಕ್ಕುಗಳು

37. (1) **ಮರು ಪ್ರಸಾರಣ ಹಕ್ಕು:**—ಸರ್ಕಾರ ಅಥವಾ ಇತರ ಯಾವುದೇ ಪ್ರಸಾರಣ ಪ್ರಾಧಿಕಾರವು ಯಾವುದೇ ಕಾರ್ಯಕ್ರಮವನ್ನು ಪ್ರಸಾರ ಮಾಡಿರುವಲ್ಲಿ, ಅಂಥ ಕಾರ್ಯಕ್ರಮದಲ್ಲಿ "ಮರು ಪ್ರಸಾರಣ ಹಕ್ಕು" ಎಂದು ಕರೆಯಲಾಗುವ ವಿಶೇಷ ಹಕ್ಕು ಅಸ್ತಿತ್ವದಲ್ಲಿರತಕ್ಕದು.

(2) ಸಂದರ್ಭಾನುಸಾರ ಸರ್ಕಾರ ಅಥವಾ ಇತರ ಪ್ರಸಾರಕ ಪ್ರಾಧಿಕಾರವು ಮರು ಪ್ರಸಾರಣಾ ಹಕ್ಕಿನ ಒಡೆಯನಾಗಿರತಕ್ಕದು ಮತ್ತು ಆ ಕಾರ್ಯಕ್ರಮವನ್ನು ಮೊದಲು ಪ್ರಸಾರ ಮಾಡಿದಂಥ ವರ್ಷದ ಮುಂಬರುವ ಕ್ಯಾಲೆಂಡರ್ ವರ್ಷದ ಪ್ರಾರಂಭದಿಂದ ಇಪ್ಪತ್ತೈದು ವರ್ಷಗಳವರೆಗೆ ಅಸ್ತಿತ್ವದಲ್ಲಿರತಕ್ಕದು.

(3) ಯಾವುದೇ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ, ಮರು ಪ್ರಸಾರಣ ಹಕ್ಕಿನ ಮುಂದುವರಿಕೆಯ ಅವಧಿಯಲ್ಲಿ,—

(ಕ) ಹಕ್ಕಿನ ಒಡೆಯನಿಂದ ಲೈಸೆನ್ಸ್ ಪಡೆಯದೆ—

(i) ಪ್ರಶ್ನಿತ ಕಾರ್ಯಕ್ರಮ ಅಥವಾ ಅದರ ಯಾವುದೇ ಗಣನೀಯ ಭಾಗವನ್ನು ಮರುಪ್ರಸಾರಣ ಮಾಡುವ; ಅಥವಾ

(ii) ಪ್ರಶ್ನಿತ ಕಾರ್ಯಕ್ರಮವನ್ನು ಅಥವಾ ಅದರ ಯಾವುದೇ ಗಣನೀಯ ಭಾಗವನ್ನು ಸಾರ್ವಜನಿಕರಿಗೆ ಕೇಳಿಸುವಂತೆ ಮಾಡುವ; ಅಥವಾ

(ಖ) ಪ್ರಶ್ನಿತ ಕಾರ್ಯಕ್ರಮವನ್ನು ಅಥವಾ ಅದರ ಯಾವುದೇ ಗಣನೀಯ ಭಾಗವನ್ನು ಧ್ವನಿಮುದ್ರಿಸಿ ಧ್ವನಿಮುದ್ರಿಕೆಯನ್ನು ಮಾಡುವ ಉದ್ದೇಶಕ್ಕಾಗಿ ಪ್ರಸಾರವನ್ನು ಉಪಯೋಗಿಸಿಕೊಳ್ಳಲು ಹಕ್ಕುಳ್ಳ ಒಡೆಯನಿಂದ ಲೈಸೆನ್ಸ್ ಪಡೆಯದೆ ಅಂಥ ಯಾವುದೇ ಧ್ವನಿಮುದ್ರಿಕೆಯನ್ನು ಮಾಡುವ

—ಯಾವನೇ ವ್ಯಕ್ತಿಯು ಆ ಮರುಪ್ರಸಾರಣ ಹಕ್ಕನ್ನು ಅತಿಲಂಘಿಸುವುದಾಗಿ ಭಾವಿಸತಕ್ಕದು.

38. **ಈ ಅಧಿನಿಯಮದ ಇತರ ಉಪಬಂಧಗಳು ಮರುಪ್ರಸಾರಣ ಹಕ್ಕುಗಳಿಗೆ ಅನ್ವಯವಾಗತಕ್ಕದು:**—18, 19, 30, 53, 55, 58, 64, 65 ಮತ್ತು 66ನೇ ಪ್ರಕರಣಗಳು ಯಾವುದೇ ಅವಶ್ಯ ಅಳವಡಿಕೆಗಳು ಮತ್ತು ಮಾರ್ಪಾಟುಗಳೊಡನೆ, ಕೃತಿಯಲ್ಲಿನ ಕೃತಿಸ್ವಾಮ್ಯಕ್ಕೆ ಸಂಬಂಧಪಟ್ಟಂತೆ ಅವು ಅನ್ವಯಿಸುವ ಹಾಗೆ ಯಾವುದೇ ಕಾರ್ಯಕ್ರಮದಲ್ಲಿನ ಮರು ಪ್ರಸಾರಣ ಹಕ್ಕಿಗೆ ಸಂಬಂಧಪಟ್ಟಂತೆ ಅನ್ವಯಿಸತಕ್ಕದು :

ಪರಂತು, ಯಾವ ಕಾರ್ಯಕ್ರಮದಲ್ಲಿ ಮರು ಪ್ರಸಾರಣ ಹಕ್ಕು ಅಸ್ತಿತ್ವದಲ್ಲಿರುವುದೋ ಆ ಕಾರ್ಯಕ್ರಮವನ್ನು ಅಥವಾ ಅಂಥ ಕಾರ್ಯಕ್ರಮದ ಯಾವುದೇ ಗಣನೀಯ ಭಾಗವನ್ನು ಧ್ವನಿ ಮುದ್ರಿಸಿಕೊಂಡು ಧ್ವನಿಮುದ್ರಿಕೆ ಮಾಡುವ ಉದ್ದೇಶಕ್ಕಾಗಿ ಪ್ರಸಾರವನ್ನು ಉಪಯೋಗಿಸಿಕೊಳ್ಳುವ ಲೈಸೆನ್ಸ್, ಯಾವ ವ್ಯಕ್ತಿಗೆ ಅಂಥ ಲೈಸೆನ್ಸನ್ನು ಕೊಡಲಾಗಿದೆಯೋ ಆ ವ್ಯಕ್ತಿಯು, ಅಂಥ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನಿಂದ ಅಂಥ ಕಾರ್ಯಕ್ರಮದಲ್ಲಿ ಕೂಡಿರುವ ಕೃತಿಯನ್ನು ಧ್ವನಿಮುದ್ರಿಸಿಕೊಂಡು ಧ್ವನಿಮುದ್ರಿಕೆಗಳನ್ನು ಮಾಡಲು ಲೈಸೆನ್ಸನ್ನು ಸಹ ಪಡೆದಿದ್ದ ಹೊರತು, ಪರಿಣಾಮಕಾರಿಯಾಗತಕ್ಕದ್ದಲ್ಲ.

39. **ಇತರ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ :**—ಸಂದೇಹಗಳ ನಿವಾರಣೆಗಾಗಿ, ಈ ಅಧ್ಯಾಯದ ಮೇರೆಗೆ ಪ್ರಸಾರಣ ಪ್ರಾಧಿಕಾರಕ್ಕೆ ಪ್ರದತ್ತವಾದ ಮರು ಪ್ರಸಾರಣ ಹಕ್ಕು—

(ಕ) ಆ ಪ್ರಾಧಿಕಾರವು ಪ್ರಸಾರ ಮಾಡಿದಂಥ ಯಾವುದೇ ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿಯಲ್ಲಿನ; ಅಥವಾ

(ಖ) ಅಂಥ ಯಾವುದೇ ಕೃತಿಯನ್ನು ಧ್ವನಿಮುದ್ರಿಸುವ ಯಾವುದೇ ಧ್ವನಿಮುದ್ರಿಕೆಯಲ್ಲಿನ

—ಕೃತಿ ಸ್ವಾಮ್ಯಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ—IX

### ಅಂತರರಾಷ್ಟ್ರೀಯ ಕೃತಿಸ್ವಾಮ್ಯ

**40.** ವಿದೇಶಿ ಕೃತಿಗಳಿಗೆ ಕೃತಿಸ್ವಾಮ್ಯವನ್ನು ವಿಸ್ತರಿಸುವ ಅಧಿಕಾರ:—ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧವು—

(ಕ) ಆದೇಶವು ಸಂಬಂಧಪಡುವಂಥ ಭಾರತದ ಹೊರಗಿನ ಯಾವುದೇ ರಾಜ್ಯ ಕ್ಷೇತ್ರದಲ್ಲಿ ಮೊದಲು ಪ್ರಕಟವಾದ ಕೃತಿಗಳಿಗೆ, ಅವು ಭಾರತದಲ್ಲಿ ಮೊದಲು ಪ್ರಕಟವಾಗಿದ್ದಿದ್ದರೆ ಹೇಗೊ ಹಾಗೆ, ಅದೇ ರೀತಿಯಲ್ಲಿ ;

(ಖ) ಯಾವ ಅಪ್ರಕಟಿತ ಕೃತಿಗಳ ಅಥವಾ ಅವುಗಳ ಯಾವುದೇ ವರ್ಗದ ಕರ್ತೃಗಳು ಆ ಕೃತಿಯನ್ನು ರಚಿಸುವ ಕಾಲದಲ್ಲಿ, ಆದೇಶವು ಸಂಬಂಧಪಡುವಂಥ ವಿದೇಶದ ಪ್ರಜೆಗಳು ಅಥವಾ ನಾಗರೀಕರಾಗಿದ್ದರೊ ಆ ಯಾವುದೇ ಅಪ್ರಕಟಿತ ಕೃತಿಗಳು ಅಥವಾ ಅವುಗಳ ಯಾವುದೇ ವರ್ಗಕ್ಕೆ ಆ ಕರ್ತೃಗಳು ಭಾರತದ ನಾಗರೀಕರಾಗಿದ್ದರೆ ಹೇಗೊ ಹಾಗೆ ಅದೇ ರೀತಿಯಲ್ಲಿ

(ಗ) ಆದೇಶವು ಸಂಬಂಧಪಡುವಂಥ ಭಾರತದ ಹೊರಗಿನ ಯಾವುದೇ ರಾಜ್ಯ ಕ್ಷೇತ್ರದ ಅಧಿವಾಸದ ಸಂಬಂಧದಲ್ಲಿ; ಅಂಥ ಅಧಿವಾಸವು ಭಾರತದಲ್ಲಿದ್ದಿದ್ದರೆ ಹೇಗೊ ಹಾಗೆ, ಅದೇ ರೀತಿಯಲ್ಲಿ;

(ಘ) ಯಾವ ಕೃತಿಯ ಕರ್ತೃವು ಅದರ ಮೊದಲ ಪ್ರಕಟಣೆಯ ದಿನಾಂಕದಂದು ಅಥವಾ ಕರ್ತೃವು ಆ ದಿನಾಂಕ ದಂದು ಮರಣ ಹೊಂದಿದ್ದ ಸಂದರ್ಭದಲ್ಲಿ, ಅವನ ಮರಣ ಕಾಲದಲ್ಲಿ ಆದೇಶವು ಸಂಬಂಧಪಡುವಂಥ ವಿದೇಶದ ಪ್ರಜೆ ಅಥವಾ ನಾಗರೀಕನಾಗಿದ್ದನೋ ಆ ಯಾವುದೇ ಕೃತಿಗೆ, ಆ ದಿನಾಂಕ ಅಥವಾ ಕಾಲದಲ್ಲಿ ಕರ್ತೃವು ಭಾರತದ ನಾಗರೀಕನಾಗಿದ್ದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಅನ್ವಯವಾಗತಕ್ಕುದೆಂದು ನಿರ್ದೇಶಿಸಬಹುದು;

ಮತ್ತು ಆ ತರುವಾಯ ಈ ಅಧ್ಯಾಯದ ಮತ್ತು ಆದೇಶದ ಉಪಬಂಧಗಳಿಗೊಳಪಟ್ಟು ಈ ಅಧಿನಿಯಮವು ಅನ್ವಯಿಸತಕ್ಕುದು:

(i) ಪರಂತು, ಯಾವುದೇ ವಿದೇಶಕ್ಕೆ ಸಂಬಂಧಿಸಿದಂತೆ (ಭಾರತವು ಕೌಲನ್ನು ಮಾಡಿಕೊಂಡಿರುವಂಥ ಅಥವಾ ಭಾರತವು ಸಹ ಒಂದು ಪಕ್ಷವಾಗಿರುವಂಥ, ಕೃತಿಸ್ವಾಮ್ಯಕ್ಕೆ ಸಂಬಂಧಪಟ್ಟ ಒಡಂಬಡಿಕೆಗೆ ಪಕ್ಷವಾಗಿರುವಂಥ ದೇಶವನ್ನು ಹೊರತುಪಡಿಸಿ) ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಕೃತಿಸ್ವಾಮ್ಯಕ್ಕೆ ಹಕ್ಕುಳ್ಳ ಕೃತಿಗಳಿಗೆ ಆ ದೇಶದಲ್ಲಿ ಸಂರಕ್ಷಣೆಯನ್ನು ಅಗತ್ಯಪಡಿಸಲು ಕೇಂದ್ರಸರ್ಕಾರಕ್ಕೆ ವಿಹಿತವೆಂದು ಕಂಡುಬರುವಂಥ ಉಪಬಂಧಗಳು ಯಾವುವಾದರೂ ಇದ್ದರೆ, ಅವುಗಳನ್ನು ಆ ವಿದೇಶವು ರಚಿಸಿದೆ ಅಥವಾ ರಚಿಸಲು ವಚನಬಂಧ ಮಾಡಿಕೊಂಡಿದೆಯೆಂಬ ಬಗ್ಗೆ ಮನಗಂಡಿರತಕ್ಕದ್ದು;

(ii) ಆ ದೇಶವು, ಈ ಅಧಿನಿಯಮದ ಉಪಬಂಧಗಳು, ಆ ದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕೃತಿಗಳ ವರ್ಗಗಳಿಗೆ ಅಥವಾ ಅಂಥ ಪ್ರಕರಣಗಳ ವರ್ಗಗಳಿಗೆ ಸಾಮಾನ್ಯವಾಗಿಯೇ ಆಗಲಿ ಅಥವಾ ಸಂಬಂಧಪಟ್ಟಂತೆ ಆಗಲಿ ಅನ್ವಯ ವಾಗತಕ್ಕುದೆಂದು ಉಪಬಂಧಿಸಬಹುದು;

(iii) ಆ ದೇಶವು ಭಾರತದಲ್ಲಿ ಕೃತಿಸ್ವಾಮ್ಯದ ಅವಧಿಯು, ಆದೇಶವು ಸಂಬಂಧಪಡುವಂಥ ದೇಶದ ಕಾನೂನಿನ ಮೂಲಕ ಪ್ರದತ್ತವಾದುದನ್ನು ಮೀರತಕ್ಕುದಲ್ಲವೆಂದು ಉಪಬಂಧಿಸಬಹುದು ;

(iv) ಆ ದೇಶವು, ಈ ಅಧಿನಿಯಮದ ಮೂಲಕ ಪ್ರದತ್ತವಾದ ಹಕ್ಕುಗಳ ಅನುಭೋಗವು ಆದೇಶದ ಮೂಲಕ ನಿಯಮಿಸಬಹುದಾದಂಥ ಷರತ್ತುಗಳು ಮತ್ತು ಔಪಚಾರಿಕತೆಗಳು ಯಾವುವಾದರೂ ಇದ್ದರೆ, ಅವುಗಳನ್ನು ನೆರವೇರಿಸುವುದಕ್ಕೆ ಒಳಪಟ್ಟಿರತಕ್ಕುದೆಂದು ಉಪಬಂಧಿಸಬಹುದು;

(v) ಕೃತಿಸ್ವಾಮ್ಯದ ಒಡೆತನದ ಬಗ್ಗೆ ಈ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸುವಲ್ಲಿ, ಆ ದೇಶವು, ವಿದೇಶದ ಕಾನೂನನ್ನು ಗಮನದಲ್ಲಿ ಇಟ್ಟುಕೊಂಡು ಅವಶ್ಯವೆಂದು ಕಂಡುಬರುವಂಥ ಅಪವಾದಗಳನ್ನು ಮತ್ತು ಮಾರ್ಪಾಡುಗಳನ್ನು ಮಾಡಬಹುದು;

(vi) ಆ ದೇಶವು, ಈ ಅಧಿನಿಯಮ ಅಥವಾ ಅದರ ಯಾವುದೇ ಭಾಗವು, ಆದೇಶದ ಪ್ರಾರಂಭಕ್ಕೆ ಮುಂಚೆ ರಚಿತವಾದ ಕೃತಿಗಳಿಗೆ ಅನ್ವಯಿಸತಕ್ಕುದಲ್ಲವೆಂದು ಅಥವಾ ಈ ಅಧಿನಿಯಮವು ಅಥವಾ ಅದರ ಯಾವುದೇ ಭಾಗವು, ಆದೇಶದ ಪ್ರಾರಂಭಕ್ಕೆ ಮುಂಚೆ, ಮೊದಲು ಪ್ರಕಟವಾದ ಕೃತಿಗಳಿಗೆ ಅನ್ವಯಿಸತಕ್ಕುದಲ್ಲವೆಂದು ಉಪಬಂಧಿಸಬಹುದು.

**41.** ಕೆಲವು ಅಂತರರಾಷ್ಟ್ರೀಯ ಸಂಸ್ಥೆಗಳ ಕೃತಿಗಳ ಬಗ್ಗೆ ಉಪಬಂಧಗಳು:— (1) (ಕ) ಈ ಪ್ರಕರಣವು ಅನ್ವಯಿಸುವಂಥ ಯಾವುದೇ ಸಂಸ್ಥೆಯ ನಿರ್ದೇಶನ ಅಥವಾ ನಿಯಂತ್ರಣದ ಮೂಲಕ ಅಥವಾ ಮೇರೆಗೆ ಯಾವುದೇ ಕೃತಿಯನ್ನು ರಚಿಸಿರುವಲ್ಲಿ ಅಥವಾ ಮೊದಲು ಪ್ರಕಟಿಸಿರುವಲ್ಲಿ, ಮತ್ತು

(ಖ) ಈ ಪ್ರಕರಣವನ್ನು ಹೊರತುಪಡಿಸಿ, ಸಂದರ್ಭಾನುಸಾರ ಅದನ್ನು ರಚಿಸುವ ಕಾಲದಲ್ಲಿ ಅಥವಾ ಅದರ ಮೊದಲ ಪ್ರಕಟಣೆಯ ಕಾಲದಲ್ಲಿ ಭಾರತದಲ್ಲಿ, ಆ ಕೃತಿಯಲ್ಲಿ ಯಾವುದೇ ಕೃತಿಸ್ವಾಮ್ಯವು ಇಲ್ಲದಿರುವಲ್ಲಿ, ಮತ್ತು

(ಗ) (i) ಆ ಕೃತಿಯಲ್ಲಿ ಕೃತಿಸ್ವಾಮ್ಯ, ಯಾವುದಾದರೂ ಇದ್ದರೆ, ಅದು ಕರ್ತೃವಿಗೆ ನಿಹಿತವಾಗಿರದಂಥ ಒಪ್ಪಂದವಾಗಿದ್ದು, ಕರ್ತೃವಿನೊಡನೆ ಆ ಬಗ್ಗೆ ಮಾಡಿಕೊಂಡ ಒಪ್ಪಂದದ ಅನುಸರಣೆಯಲ್ಲಿ ಹಿಂದೆ ಹೇಳಿದಂತೆ ಕೃತಿಯನ್ನು ಪ್ರಕಟಿಸಿರುವಲ್ಲಿ, ಅಥವಾ

(ii) 17ನೇ ಪ್ರಕರಣದ ಮೇರೆಗೆ ಕೃತಿಯಲ್ಲಿನ ಯಾವುದೇ ಕೃತಿಸ್ವಾಮ್ಯವು ಸಂಸ್ಥೆಗೆ ಸೇರಿದ್ದಾಗಿದ್ದಲ್ಲಿ

—ಈ ಪ್ರಕರಣದಿಂದಾಗಿ, ಭಾರತದಾದ್ಯಂತ ಕೃತಿಯಲ್ಲಿನ ಕೃತಿಸ್ವಾಮ್ಯವು ಇರತಕ್ಕುದು.

(2) ಸಂಬಂಧಿತ ಕಾಲದಲ್ಲಿ ನಿಗಮಿತ ನಿಕಾಯದ ಕಾನೂನು ಸಾಮರ್ಥ್ಯವನ್ನು ಹೊಂದಿಲ್ಲದಂಥ, ಈ ಪ್ರಕರಣವು ಅನ್ವಯಿಸುವಂಥ ಯಾವುದೇ ಸಂಸ್ಥೆಯು, ಕೃತಿ ಸ್ವಾಮ್ಯವನ್ನು ಧಾರಣ ಮಾಡುವ, ಅದರೊಡನೆ ವ್ಯವಹರಿಸುವ ಮತ್ತು

ಅದನ್ನು ಜಾರಿಯಲ್ಲಿ ತರುವ ಉದ್ದೇಶಕ್ಕಾಗಿ ಮತ್ತು ಕೃತಿಸ್ವಾಮ್ಯಕ್ಕೆ ಸಂಬಂಧಪಟ್ಟ ಎಲ್ಲ ಕಾನೂನು ವ್ಯವಹರಣೆಗಳಿಗೆ ಸಂಬಂಧಿಸಿದಂತೆ, ನಿಗಮಿತ ನಿಕಾಯದ ಕಾನೂನು ಸಾಮರ್ಥ್ಯವನ್ನು ಹೊಂದಿರತಕ್ಕದು ಮತ್ತು ಎಲ್ಲ ಸಂಬಂಧಿತ ಕಾಲದಲ್ಲಿ ಹೊಂದಿದ್ದಿತ್ತೆಂದು ಭಾವಿಸತಕ್ಕದು.

(3) ಈ ಪ್ರಕರಣವು ಅನ್ವಯಿಸುವಂಥ ಸಂಸ್ಥೆಗಳು, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಒಂದು ಅಥವಾ ಹೆಚ್ಚು ಸಾರ್ವಭೌಮ ದೇಶಗಳು ಅಥವಾ ಅದರ ಅಥವಾ ಅವುಗಳ ಸರ್ಕಾರ ಅಥವಾ ಸರ್ಕಾರಗಳು ಸದಸ್ಯರಾಗಿರುವ, ಈ ಪ್ರಕರಣವು ಅನ್ವಯವಾಗತಕ್ಕದು ವಿಹಿತವಾದಂಥ ಸಂಸ್ಥೆಗಳೆಂದು ಘೋಷಿಸಬಹುದಾದಂಥ ಸಂಸ್ಥೆಗಳಾಗಿರತಕ್ಕದು.

**42. ಭಾರತದಲ್ಲಿ ಮೊದಲು ಪ್ರಕಟಿಸಿದ ವಿದೇಶಿ ಕರ್ತೃಗಳ ಕೃತಿಗಳಲ್ಲಿ ಹಕ್ಕುಗಳನ್ನು ನಿರ್ಬಂಧಿಸುವ ಅಧಿಕಾರ:–** ವಿದೇಶವು, ಭಾರತದ ಕರ್ತೃಗಳ ಕೃತಿಗಳಿಗೆ ಸಾಕಷ್ಟು ಸಂರಕ್ಷಣೆಯನ್ನು ಕೊಡುವುದಿಲ್ಲ ಅಥವಾ ಕೊಡಲು ವಚನಬಂಧ ಮಾಡಿಕೊಂಡಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಕಂಡು ಬಂದರೆ ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಭಾರತದಲ್ಲಿ ಮೊದಲು ಪ್ರಕಟವಾದ ಕೃತಿಗಳ ಮೇಲೆ ಕೃತಿಸ್ವಾಮ್ಯವನ್ನು ಪ್ರದಾನಮಾಡುವಂಥ ಈ ಅಧಿನಿಯಮದ ಉಪಬಂಧಗಳು, ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ ಪ್ರಕಟವಾದ ಯಾವ ಕೃತಿಗಳ ಕರ್ತೃಗಳು ಅಂಥ ವಿದೇಶದ ಪ್ರಜೆಗಳು ಅಥವಾ ನಾಗರೀಕರಾಗಿರುವರೋ ಮತ್ತು ಭಾರತದ ಅಧಿವಾಸಿಗಳಲ್ಲವೋ ಆ ಕರ್ತೃಗಳ ಕೃತಿಗಳಿಗೆ ಅನ್ವಯವಾಗತಕ್ಕದಲ್ಲವೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ ಆ ಉಪಬಂಧಗಳು ಅಂಥ ಕೃತಿಗಳಿಗೆ ಅನ್ವಯವಾಗತಕ್ಕದಲ್ಲವೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ ಆ ಉಪಬಂಧಗಳು ಅಂಥ ಕೃತಿಗಳಿಗೆ ಅನ್ವಯವಾಗತಕ್ಕದಲ್ಲ.

**43. ಈ ಅಧ್ಯಾಯದ ಮೇರೆಗಿನ ಆದೇಶಗಳನ್ನು ಸಂಸತ್ತಿನ ಮುಂದೆ ಇಡತಕ್ಕದು:—** ಈ ಅಧ್ಯಾಯದ ಮೇರೆಗೆ ಕೇಂದ್ರ ಸರ್ಕಾರವು ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನದ ಅಥವಾ ನಿಕಟೋತ್ತರದ ಅಧಿವೇಶನದಲ್ಲಿ ಸಂಸತ್ತು ಮಾಡಬಹುದಾದಂಥ ಮಾರ್ಪಾಟುಗಳಿಗೆ ಒಳಪಟ್ಟಿರತಕ್ಕದು.

## ಅಧ್ಯಾಯ–X

## ಕೃತಿ ಸ್ವಾಮ್ಯದ ನೋಂದಣಿ

**44. ಕೃತಿಸ್ವಾಮ್ಯಗಳ ರಿಜಿಸ್ಟರ್:–** ಕೃತಿಸ್ವಾಮ್ಯಗಳ ರಿಜಿಸ್ಟರೆಂದು ಕರೆಯಲಾಗುವ ರಿಜಿಸ್ಟರನ್ನು ಕೃತಿ ಸ್ವಾಮ್ಯ ಕಚೇರಿಯಲ್ಲಿ ನಿಯಮಿತ ನಮೂನೆಯಲ್ಲಿಡತಕ್ಕದು. ಅದರಲ್ಲಿ ಕೃತಿಗಳ ಹೆಸರುಗಳನ್ನು ಅಥವಾ ಶೀರ್ಷಿಕೆಗಳನ್ನು ಮತ್ತು ಕರ್ತೃಗಳ, ಪ್ರಕಾಶಕರ ಮತ್ತು ಕೃತಿಸ್ವಾಮ್ಯದ ಒಡೆಯರ ಹೆಸರುಗಳನ್ನು ಮತ್ತು ವಿಳಾಸಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ನಮೂದಿಸಬಹುದು.

**45. ಕೃತಿಸ್ವಾಮ್ಯಗಳ ರಿಜಿಸ್ಟರಿನಲ್ಲಿ ನಮೂದನೆಗಳು:–**(1) ಯಾವುವೇ ಕೃತಿಯಲ್ಲಿನ ಕೃತಿಸ್ವಾಮ್ಯದಲ್ಲಿ ಹಿತಾಸಕ್ತಿಯುಳ್ಳ ಕರ್ತೃ ಅಥವಾ ಪ್ರಕಾಶಕ ಅಥವಾ ಒಡೆಯ ಅಥವಾ ಇತರ ವ್ಯಕ್ತಿಯು ಕೃತಿಸ್ವಾಮ್ಯಗಳ ರಿಜಿಸ್ಟರಿನಲ್ಲಿ ಕೃತಿಯ ವಿವರಗಳನ್ನು ನಮೂದು ಮಾಡುವುದಕ್ಕಾಗಿ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನಿಗೆ ನಿಯಮಿಸಿದ ಫೀಜಿನೊಡನೆ ನಿಯಮಿಸಿದ ನಮೂನೆಯಲ್ಲಿ ಅರ್ಜಿ ಹಾಕಿಕೊಳ್ಳಬಹುದು :

ಪರಂತು, ಯಾವುವೇ ಸರಕುಗಳಿಗೆ ಸಂಬಂಧಪಟ್ಟಂತೆ ಉಪಯೋಗಿಸಿದ ಅಥವಾ ಉಪಯೋಗಿಸಲು ಸಾಧ್ಯವಿರುವಂಥ ಕಲಾತ್ಮಕ ಕೃತಿಗೆ ಸಂಬಂಧಿಸಿದಂತೆ ಅರ್ಜಿಯು, ಆ ಬಗ್ಗೆ ನಿರೂಪಣೆಯನ್ನು ಒಳಗೊಂಡಿರತಕ್ಕದು ಮತ್ತು ವ್ಯಾಪಾರ ಮತ್ತು ವಾಣಿಜ್ಯ ಸರಕು ಗುರುತುಗಳ ಅಧಿನಿಯಮ,(1968 ರ43)ದ 4ನೇ ಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಾಪಾರ ಗುರುತುಗಳ ರಿಜಿಸ್ಟ್ರಾರನಿಂದ ಅಂಥ ಕಲಾತ್ಮಕ ಕೃತಿಗೆ ತದ್‌ರೂಪವಾದ, ಅದಕ್ಕೆ ಮೋಸ ಹೋಗುವಷ್ಟು ಸಾಮ್ಯವಿರುವ ಯಾವುದೇ ವ್ಯಾಪಾರ ಗುರುತನ್ನು ಆ ಅಧಿನಿಯಮದ ಮೇರೆಗೆ ಅರ್ಜಿದಾರನ ಹೆಸರಿನಲ್ಲಿ ಅಥವಾ ಅವನನ್ನು ಹೊರತುಪಡಿಸಿ ಯಾವನೇ ವ್ಯಕ್ತಿಯು ಅಂಥ ನೋಂದಣಿಗಾಗಿ ಯಾವುದೇ ಅರ್ಜಿಯನ್ನು ಮಾಡಿಲ್ಲವೆಂದು ಪಡೆದ ಪ್ರಮಾಣಪತ್ರವನ್ನು ಒಳಗೊಂಡಿರತಕ್ಕದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಕೃತಿಗೆ ಸಂಬಂಧಿಸಿದಂತೆ, ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು, ತಾನು ಯೋಗ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಕೃತಿ ಸ್ವಾಮ್ಯಗಳ ರಿಜಿಸ್ಟರಿನಲ್ಲಿ ಕೃತಿಯ ವಿವರಗಳನ್ನು ನಮೂದಿಸಬಹುದು.

**46. ಸೂಚಿಗಳು:–** ಕೃತಿಸ್ವಾಮ್ಯ ಕಚೇರಿಯಲ್ಲಿ ನಿಯಮಿಸಬಹುದಾದಂಥ ಕೃತಿಸ್ವಾಮ್ಯಗಳ ರಿಜಿಸ್ಟರಿನ ಸೂಚಿಗಳನ್ನು ಸಹ ಇಡತಕ್ಕದು.

**47. ರಿಜಿಸ್ಟರಿನ ನಮೂನೆ ಮತ್ತು ಪರಿಶೀಲನೆ:—** ಈ ಅಧಿನಿಯಮದ ಮೇರೆಗೆ ಇಡಲಾದ ಕೃತಿಸ್ವಾಮ್ಯದ ರಿಜಿಸ್ಟರು ಮತ್ತು ಅದರ ಸೂಚಿಗಳು ಎಲ್ಲ ಯುಕ್ತ ಕಾಲಗಳಲ್ಲಿ ಪರಿಶೀಲನೆಗಾಗಿ ಮುಕ್ತವಾಗಿರತಕ್ಕದು ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಯಾವನೇ ವ್ಯಕ್ತಿಯು ಅಂಥ ರಿಜಿಸ್ಟರು ಅಥವಾ ಸೂಚಿಗಳ ಪ್ರತಿಗಳನ್ನು ತೆಗೆದುಕೊಳ್ಳಲು ಅಥವಾ ಅವುಗಳಿಂದ ಉದ್ಧೃತಗಳನ್ನು ಮಾಡಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದು.

**48. ಕೃತಿಸ್ವಾಮ್ಯಗಳ ರಿಜಿಸ್ಟರು ಅದರಲ್ಲಿ ನಮೂದಿಸಿರುವ ವಿವರಗಳ ಮೊದಲು ನೋಟದ ಸಾಕ್ಷವಾಗಿರತಕ್ಕದ್ದು:—** ಕೃತಿಸ್ವಾಮ್ಯಗಳ ರಿಜಿಸ್ಟರು ಅದರಲ್ಲಿ ನಮೂದಿಸಿದ ವಿವರಗಳ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು ಮತ್ತು ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು ಪ್ರಮಾಣೀಕರಿಸಿದ ಮತ್ತು ಕೃತಿಸ್ವಾಮ್ಯದ ಕಚೇರಿಯ ಮೊಹರಿನಿಂದ ಮೊಹರು ಮಾಡಿದ ಅದರಲ್ಲಿನ ಯಾವುದೇ ನಮೂದುಗಳ ಪ್ರತಿಗಳೆಂದು ತಾತ್ಪರ್ಯವಾಗುವ ದಸ್ತಾವೇಜುಗಳು ಅಥವಾ ಅವುಗಳಿಂದ ಮಾಡಿಕೊಂಡ ಉದ್ಧೃತಿಗಳನ್ನು ಮೂಲವನ್ನು ಹಾಜರುಪಡಿಸುವ ಹೆಚ್ಚಿನ ರುಜುವಾತಿಲ್ಲದೆ ಎಲ್ಲ ನ್ಯಾಯಾಲಯಗಳಲ್ಲಿ ಸಾಕ್ಷ್ಯವಾಗಿ ಪುರಸ್ಕರಿಸತಕ್ಕದ್ದು.

**49. ಕೃತಿಸ್ವಾಮ್ಯಗಳ ರಿಜಿಸ್ಟರಿನಲ್ಲಿನ ನಮೂದುಗಳನ್ನು ಸರಿಪಡಿಸುವುದು:—**ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು, ನಿಯಮಿಸಿದ ಪ್ರಕರಣಗಳಲ್ಲಿ ಮತ್ತು ನಿಯಮಿಸಿದ ಷರತ್ತುಗಳಿಗೆ ಒಳಪಟ್ಟು, ಕೃತಿಸ್ವಾಮ್ಯದ ರಿಜಿಸ್ಟರನ್ನು—

(ಕ) ಯಾವುದೇ ಹೆಸರು, ವಿಳಾಸ, ಅಥವಾ ವಿವರಗಳ ಯಾವುದೇ ತಪ್ಪನ್ನು ಸರಿಪಡಿಸುವುದರ ಮೂಲಕ; ಅಥವಾ

(ಖ) ಆಕಸ್ಮಿಕ ಕೈ ತಪ್ಪು ಅಥವಾ ಲೋಪದ ಮೂಲಕ ಅದರಲ್ಲಿ

—ಆಗಿರಬಹುದಾದಂಥ ಇತರ ಯಾವುದೇ ತಪ್ಪನ್ನು ಸರಿಪಡಿಸುವ ಮೂಲಕ ತಿದ್ದುಪಡಿ ಮಾಡಬಹುದು ಅಥವಾ ಬದಲಾಯಿಸಬಹುದು.

**50. ಕೃತಿಸ್ವಾಮ್ಯ ಮಂಡಲಿಯು ರಿಜಿಸ್ಟರನ್ನು ಸರಿಪಡಿಸುವುದು:—**ಕೃತಿಸ್ವಾಮ್ಯ ಮಂಡಲಿಯು, ಕೃತಿಸ್ವಾಮ್ಯಗಳ ರಿಜಿಸ್ಟ್ರಾರನ ಅಥವಾ ಬಾಧಿತನಾದ ಯಾವನೇ ವ್ಯಕ್ತಿಯ ಅರ್ಜಿಯ ಮೇಲೆ—

(ಕ) ರಿಜಿಸ್ಟರಿನಲ್ಲಿ ಮಾಡಲು ತಪ್ಪಾಗಿ ಬಿಟ್ಟಿರುವ ಯಾವುದೇ ನಮೂದನ್ನು ಮಾಡುವುದರ ಮೂಲಕ, ಅಥವಾ

(ಖ) ರಿಜಿಸ್ಟರಿನಲ್ಲಿ ತಪ್ಪಾಗಿ ಮಾಡಿದ ಅಥವಾ ಅದರಲ್ಲಿ ಉಳಿದಿರುವ ಯಾವುದೇ ನಮೂದನ್ನು ತೆಗೆದು ಹಾಕುವುದರ ಮೂಲಕ, ಅಥವಾ

(ಗ) ರಿಜಿಸ್ಟರಿನಲ್ಲಿನ ಯಾವುದೇ ತಪ್ಪು ಅಥವಾ ದೋಷವನ್ನು ಸರಿಪಡಿಸುವುದರ ಮೂಲಕ :

—ಕೃತಿಸ್ವಾಮ್ಯಗಳ ರಿಜಿಸ್ಟರನ್ನು ಸರಿಪಡಿಸಲು ಆದೇಶಿಸತಕ್ಕದ್ದು.

**50ಕ. ಕೃತಿಸ್ವಾಮ್ಯಗಳ ರಿಜಿಸ್ಟರಿನಲ್ಲಿನ ನಮೂದನೆಗಳು ಇತ್ಯಾದಿಗಳನ್ನು ಪ್ರಕಟಿಸತಕ್ಕದ್ದು:—**ಕೃತಿಸ್ವಾಮ್ಯಗಳ ರಿಜಿಸ್ಟರಿನಲ್ಲಿ ಮಾಡಿದ ಪ್ರತಿಯೊಂದು ನಮೂದನೆಯನ್ನು ಅಥವಾ 45ನೇ ಪ್ರಕರಣದ ಮೇರೆಗೆ ನಮೂದಿಸಿದ ಯಾವುದೇ ಕೃತಿಯ ವಿವರಗಳನ್ನು 49ನೇ ಪ್ರಕರಣದ ಮೇರೆಗೆ ಅಂಥ ರಿಜಿಸ್ಟರಿನಲ್ಲಿ ಮಾಡಿದ ಪ್ರತಿಯೊಂದು ನಮೂದನೆಯ ಸರಿಪಡಿಕೆಯನ್ನು ಮತ್ತು 50ನೇ ಪ್ರಕರಣದ ಮೇರೆಗೆ ಆದೇಶಿಸಿದ ಪ್ರತಿಯೊಂದು ಸರಿಪಡಿಸುವಿಕೆಯನ್ನು ಸರ್ಕಾರಿ ರಾಜಪತ್ರದಲ್ಲಿ ಅಥವಾ ಅವನು ಸೂಕ್ತವೆಂದು ಭಾವಿಸಬಹುದಾದಂತಹ ಇತರ ರೀತಿಯಲ್ಲಿ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು ಪ್ರಕಟಿಸತಕ್ಕದ್ದು.

## ಅಧ್ಯಾಯ—XI

## ಕೃತಿಸ್ವಾಮ್ಯದ ಅತಿಲಂಘನೆ

**51. ಕೃತಿಸ್ವಾಮ್ಯದ ಅತಿಲಂಘನೆ ಯಾವಾಗ:—**(1) (ಕ) ಈ ಅಧಿನಿಯಮದ ಮೇರೆಗೆ ಕೃತಿಸ್ವಾಮ್ಯದ ಒಡೆಯ ಅಥವಾ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು ಕೊಟ್ಟ ಲೈಸನ್ಸಿಲ್ಲದೆ ಅಥವಾ ಹಾಗೆ ಕೊಟ್ಟ ಲೈಸನ್ಸಿನ ಷರತ್ತುಗಳನ್ನು ಅಥವಾ ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರವು ವಿಧಿಸಿದ ಯಾವುದೇ ಷರತ್ತನ್ನು ಉಲ್ಲಂಘಿಸಿ ಯಾವನೇ ವ್ಯಕ್ತಿಯು—

(i) ಯಾವುದನ್ನು ಮಾಡಲು ಕೃತಿಸ್ವಾಮ್ಯದ ಒಡೆಯನಿಗೆ ಈ ಅಧಿನಿಯಮದ ಮೂಲಕ ಅನನ್ಯ ಹಕ್ಕನ್ನು ಪ್ರದಾನ ಮಾಡಲಾಗಿದೆಯೋ, ಅದರ ಬಗ್ಗೆ ಏನನ್ನಾದರೂ ಮಾಡಿದರೆ, ಅಥವಾ

(ii) ಸಾರ್ವಜನಿಕವಾಗಿ ಕೃತಿಯನ್ನು ಪ್ರದರ್ಶಿಸುವುದು ಕೃತಿಸ್ವಾಮ್ಯದ ಅತಿಲಂಘನೆ ಆಗುವುದೆಂದು ಅವನಿಗೆ ತಿಳಿದಿರದಿದ್ದ ಮತ್ತು ನಂಬಲು ಯುಕ್ತ ಕಾರಣವಿಲ್ಲದಿದ್ದ ಹೊರತು, ಅಂಥ ಪ್ರದರ್ಶನದಿಂದ ಕೃತಿಯಲ್ಲಿನ ಕೃತಿಸ್ವಾಮ್ಯದ ಅತಿಲಂಘನೆಯಾಗಿರುವಲ್ಲಿ, ಅಂಥ ಪ್ರದರ್ಶನಕ್ಕೆ ಯಾವುದೇ ಸ್ಥಳವನ್ನು ಲಾಭಕ್ಕಾಗಿ ಉಪಯೋಗಿಸಲು ಅನುಮತಿಸಿದರೆ, ಅಥವಾ

(ಖ) ಯಾವನೇ ವ್ಯಕ್ತಿಯು, ಕೃತಿಯ ಯಾವುದೇ ಅತಿಲಂಘನಾ ಪ್ರತಿಗಳನ್ನು—

(i) ಮಾರಾಟ ಅಥವಾ ಬಾಡಿಗೆಗಾಗಿ ಮಾಡಿದರೆ ಅಥವಾ ಮಾರಾಟ ಮಾಡಿದರೆ ಅಥವಾ ಬಾಡಿಗೆಗೆ ಕೊಟ್ಟರೆ ಅಥವಾ ವ್ಯಾಪಾರದ ಮೂಲಕ ಪ್ರದರ್ಶಿಸಿದರೆ ಅಥವಾ ಮಾರಾಟ ಅಥವಾ ಬಾಡಿಗೆಗಾಗಿ ಕೊಡಮಾಡಿದರೆ, ಅಥವಾ

(ii) ವ್ಯಾಪಾರದ ಉದ್ದೇಶಕ್ಕಾಗಿ ಅಥವಾ ಕೃತಿಸ್ವಾಮ್ಯದ ಒಡೆಯನಿಗೆ ಪ್ರತಿಕೂಲವಾಗಿ ಬಾಧಕವಾಗುವಷ್ಟರ ಮಟ್ಟಿಗೆ ವಿತರಣೆ ಮಾಡಿದರೆ, ಅಥವಾ

(iii) ವ್ಯಾಪಾರದ ಮೂಲಕ ಸಾರ್ವಜನಿಕವಾಗಿ ಪ್ರದರ್ಶಿಸಿದರೆ, ಅಥವಾ

(iv) ಭಾರತದೊಳಕ್ಕೆ ಆಮದು ಮಾಡಿಕೊಂಡರೆ

—ಕೃತಿಯಲ್ಲಿನ ಕೃತಿಸ್ವಾಮ್ಯವನ್ನು ಅತಿಲಂಘಿಸಿರುವುದಾಗಿ ಭಾವಿಸತಕ್ಕದ್ದು :

ಪರಂತು, (IV)ನೇ ಉಪಖಂಡದಲ್ಲಿರುವುದು ಯಾವುದೂ, ಅದುದು ಮಾಡಿಕೊಳ್ಳುವವನ ಖಾಸಗಿ ಅಥವಾ ಬಳಕೆಯ ಉಪಯೋಗಕ್ಕಾಗಿ ಚಲನಚಿತ್ರ ಫಿಲ್ಮ್ ಅಥವಾ ಧ್ವನಿ ಮುದ್ರಿಕೆಯನ್ನು ಹೊರತಂಪಡಿಸಿ ಯಾವುದೇ ಕೃತಿಯು ಎರಡು ಪ್ರತಿಗಳ ಆಮದಿಗೆ ಅನ್ವಯವಾಗುತಕ್ಕುದಲ್ಲ.

**ವಿವರಣೆ.**—ಈ ಪ್ರಕರಣದ ಉದ್ದೇಶಗಳಿಗಾಗಿ ಚಲನಚಿತ್ರ ಫಿಲ್ಮ್‌ನ ರೂಪದಲ್ಲಿನ ಸಾಹಿತ್ಯಕ,ನಾಟಕ, ಸಂಗೀತಾತ್ಮಕ ಅಥವಾ ಕಲಾತ್ಮಕ ಕೃತಿಯ ಯಥಾವತ್ತಾದ ನಿರೂಪಣೆಯನ್ನು "ಅತಿಲಂಘನಾ ಪ್ರತಿ" ಯಾಗಿರುವುದಾಗಿ ಭಾವಿಸತಕ್ಕುದು.

52. ಕೆಲವು ಕಾರ್ಯಗಳು ಕೃತಿಸ್ವಾಮ್ಯದ ಅತಿಲಂಘನೆಯಾಗಿರತಕ್ಕುದಲ್ಲ:—(1) ಈ ಕೆಳಕಂಡ ಕಾರ್ಯಗಳು ಕೃತಿಸ್ವಾಮ್ಯದ ಅತಿಲಂಘನೆಯಾಗಿರತಕ್ಕುದಲ್ಲ, ಎಂದರೆ :—

(ಕ) (i) ಸಂಶೋಧನೆ ಅಥವಾ ಖಾಸಗಿ ಅಧ್ಯಯನ :—

(ii) ಆ ಕೃತಿಯದ್ದಾಗಿರಲಿ ಅಥವಾ ಯಾವುದೇ ಕೃತಿಯದ್ದಾಗಿರಲಿ, ಅದರ ವಿಮರ್ಶೆ, ಅಥವಾ ಪುನರವಲೋಕನ

—ಉದ್ದೇಶಗಳಿಗಾಗಿ ಸಾಹಿತ್ಯಕ, ನಾಟಕ,ಸಂಗೀತ ಅಥವಾ ಕಲಾತ್ಮಕ ಕೃತಿಯೊಂದಿಗಿನ ನ್ಯಾಯಯುತ ವ್ಯವಹಾರ;

(ಖ) (i) ವೃತ್ತಪತ್ರಿಕೆ, ಮ್ಯಾಗಜೀನ್ ಅಥವಾ ಅಂಥದೇ ನಿಯತಕಾಲಿಕದಲ್ಲಿ, ಅಥವಾ

(ii) ಪ್ರಸಾರಣದ ಮೂಲಕ ಅಥವಾ ಚಲನಚಿತ್ರ ಫಿಲ್ಮಿನಲ್ಲಿ ಅಥವಾ ಛಾಯಾಚಿತ್ರಗಳ ಸಾಧನದ ಮೂಲಕ ಪ್ರಸಕ್ತ ಘಟನೆಗಳನ್ನು ವರದಿ ಮಾಡುವ ಉದ್ದೇಶಕ್ಕಾಗಿ ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಯೊಂದಿಗಿನ ನ್ಯಾಯಯುತ ವ್ಯವಹಾರ;

**ವಿವರಣೆ.**— ಸಾರ್ವಜನಿಕವಾಗಿ ಮಾಡಿದ ಭಾಷಣಗಳು ಅಥವಾ ಉಪನ್ಯಾಸಗಳ ಸಂಕಲನದ ಪ್ರಕಟಣೆಯು ಈ ಖಂಡದ ಅರ್ಥವ್ಯಾಪ್ತಿಯಲ್ಲಿ ಅಂಥ ಕೃತಿಯ ಬಗ್ಗೆ ನ್ಯಾಯಯುತ ವ್ಯವಹಾರವಲ್ಲ.

(ಗ) ನ್ಯಾಯಿಕ ವ್ಯವಹರಣೆಯ ಉದ್ದೇಶಕ್ಕಾಗಿ ಅಥವಾ ನ್ಯಾಯಿಕ ವ್ಯವಹರಣೆಯ ವರದಿಯ ಉದ್ದೇಶಕ್ಕಾಗಿ ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಗಳ ಯಥಾವತ್ತಾದ ನಿರೂಪಣೆ; ಅಥವಾ

(ಘ) ವಿಧಾನಮಂಡಲ ಸಚಿವಾಲಯವು ಅಥವಾ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ, ವಿಧಾನಮಂಡಲದ ಯಾವುದೇ ಸದನದ ಸಚಿವಾಲಯವು, ಆ ವಿಧಾನ ಮಂಡಲದ ಸದಸ್ಯರ ಉಪಯೋಗಕ್ಕಾಗಿ ಪ್ರತ್ಯೇಕವಾಗಿ ತಯಾರಿಸಿದ ಯಾವುದೇ ಕೃತಿಯಲ್ಲಿನ ಸಾಹಿತ್ಯಕ, ನಾಟಕ,ಸಂಗೀತ ಅಥವಾ ಕಲಾತ್ಮಕ ಕೃತಿಯ ಯಥವತ್ತಾದ ನಿರೂಪಣೆ ಅಥವಾ ಪ್ರಕಟಣೆ:

(ಙ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗನುಸಾರವಾಗಿ ಮಾಡಿದ ಅಥವಾ ಒದಗಿಸಿದ ಪ್ರಮಾಣೀಕೃತ ಪ್ರತಿಯಲ್ಲಿನ ಯಾವುದೇ ಸಾಹಿತ್ಯಕ, ನಾಟಕ, ಅಥವಾ ಸಂಗೀತ ಕೃತಿಯ ಯಥವತ್ತಾದ ನಿರೂಪಣೆ;

(ಚ) ಪ್ರಕಟಿತ ಸಾಹಿತ್ಯಕ, ಅಥವಾ ನಾಟಕಕೃತಿಯಿಂದ ಯಾವುದೇ ಯುಕ್ತ ಉದ್ಧೃತವನ್ನು ಸಾರ್ವಜನಿಕವಾಗಿ ಓದುವುದು ಅಥವಾ ಪಠಿಸುವುದು;

(ಛ) ಕೃತಿಸ್ವಾಮ್ಯವು, ಅಸ್ತಿತ್ವದಲ್ಲಿರುವಂಥ ಪ್ರಕಟಿತ ಸಾಹಿತ್ಯಕ ಅಥವಾ ನಾಟಕ ಕೃತಿಗಳು, ಅವುಗಳನ್ನು ಶೈಕ್ಷಣಿಕ ಸಂಸ್ಥೆಗಳ ಉಪಯೋಗಕ್ಕಾಗಿ ಪ್ರಕಟಿಸದೆ ಇದ್ದು ಅವುಗಳಿಂದ ಚಿಕ್ಕ ವಾಕ್ಯವೃಂದಗಳನ್ನು, ಶೈಕ್ಷಣಿಕ ಸಂಸ್ಥೆಗಳ ಉಪಯೋಗಕ್ಕಾಗಿ ಪ್ರಾಮಾಣಿಕವಾಗಿ ಉದ್ದೇಶಿಸಿದ ಮತ್ತು ಹಾಗೆಂದು ಶೀರ್ಷಿಕೆಯಲ್ಲಿ ಮತ್ತು ಪ್ರಕಾಶಕ ಅಥವಾ ಅವನ ಪರವಾಗಿ ಹೊರಡಿಸಿದ ಯಾವುದೇ ಜಾಹೀರಾತಿನಲ್ಲಿ ವಿವರಿಸಿದ ಕೃತಿಸ್ವಾಮ್ಯೇತರ ವಿಷಯವನ್ನು ಮುಖ್ಯವಾಗಿ ಒಳಗೊಂಡ ಸಂಗ್ರಹದಲ್ಲಿ ಪ್ರಕಟಿಸುವುದು:

ಪರಂತು, ಐದು ವರ್ಷಗಳ ಯಾವುದೇ ಅವಧಿಯಲ್ಲಿ ಅದೇ ಪ್ರಕಾಶಕನು ಅದೇ ಕರ್ತೃವಿನ ಕೃತಿಗಳಿಂದ ಅಂಥ ಎರಡಕ್ಕಿಂತ ಅಂಥ ಹೆಚ್ಚು ವಾಕ್ಯ ವೃಂದಗಳನ್ನು ಪ್ರಕಟಿಸತಕ್ಕುದಲ್ಲ.

ವಿವರಣೆ.—ಸಹ ಕರ್ತೃತ್ವದ ಕೃತಿಯ ಸಂದರ್ಭದಲ್ಲಿ ಕೃತಿಗಳಿಂದ ತೆಗೆದುಕೊಂಡ ವಾಕ್ಯವೃಂದಗಳಿಗೆ ಈ ಖಂಡದಲ್ಲಿ ಮಾಡಿದ ಉಲ್ಲೇಖಗಳು, ಆ ವಾಕ್ಯ ವೃಂದಗಳ ಯಾವನೇ ಒಬ್ಬ ಅಥವಾ ಹೆಚ್ಚಿನ ಕರ್ತೃಗಳಿಂದ ಅಥವಾ ಯಾವನೇ ಇತರ ವ್ಯಕ್ತಿಯ ಸಹಯೋಗದೊಡನೆ ಆ ಕರ್ತೃಗಳಲ್ಲಿ ಯಾವನೇ ಒಬ್ಬ ಅಥವಾ ಹೆಚ್ಚಿನವನಿಂದ ರಚಿತವಾದ ಕೃತಿಗಳಿಂದ ತೆಗೆದುಕೊಂಡ ವಾಕ್ಯ ವೃಂದಗಳಿಗೆ ಮಾಡಿದ ಉಲ್ಲೇಖನಗಳನ್ನು ಒಳಗೊಳ್ಳತಕ್ಕದು ;

(ಜ) (i) ಶಿಕ್ಷಣದ ಕ್ರಮದಲ್ಲಿ ಶಿಕ್ಷಕ ಅಥವಾ ವಿದ್ಯಾರ್ಥಿಯು; ಅಥವಾ

(ii) ಪರೀಕ್ಷೆಯಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳ ಭಾಗವಾಗಿ; ಅಥವಾ

(iii) ಅಂಥ ಪ್ರಶ್ನೆಗಳಿಗೆ ಉತ್ತರಿಸುವಲ್ಲಿ

—ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಯ ಯಥವತ್ತಾದ ನಿರೂಪಣೆ;

(ಝ) ಶೈಕ್ಷಣಿಕ ಸಂಸ್ಥೆಯ ಚಟುವಟಿಕೆಗಳನ್ನು ನಡೆಸುವಲ್ಲಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು, ವಿದ್ಯಾರ್ಥಿಗಳ ತಂದೆ ತಾಯಿಗಳು ಮತ್ತು ಪಾಲಕರು ಹಾಗೂ ಆ ಸಂಸ್ಥೆಯ ಚಟುವಟಿಕೆಗಳಿಗೆ ನೇರವಾಗಿ ಸಂಬಂಧಪಟ್ಟ ವ್ಯಕ್ತಿಗಳಿಗೆ ಶ್ರೋತೃವೃಂದವು ಸೀಮಿತವಾಗಿದ್ದರೆ, ಸಂಸ್ಥೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಂದ ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿಯ ಅಥವಾ ಚಲನಚಿತ್ರ ಫಿಲ್ಮಿನ ಅಥವಾ ಧ್ವನಿಮುದ್ರಿಕೆಯ ಪ್ರದರ್ಶನ ;

(ಞ) (i) ಆ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನು ಅಥವಾ ಅವನ ಲೈಸೆನ್ಸು ಅಥವಾ ಸಮ್ಮತಿಯೊಡನೆ ಆ ಕೃತಿಯನ್ನು ಧ್ವನಿಮುದ್ರಿಸುವ ಧ್ವನಿಮುದ್ರಿಕೆಗಳನ್ನು ಈ ಹಿಂದೆಯೇ ಮಾಡಿದ್ದರೆ ; ಮತ್ತು

(ii) ಧ್ವನಿಮುದ್ರಿಕೆಗಳನ್ನು ಮಾಡುವ ವ್ಯಕ್ತಿಯು ಧ್ವನಿಮುದ್ರಿಕೆಗಳನ್ನು ಮಾಡುವ ತನ್ನ ಉದ್ದೇಶದ ಬಗ್ಗೆ ನಿಯಮಿಸಿದ ನೋಟೀಸನ್ನು ಕೊಟ್ಟಿದ್ದರೆ ಮತ್ತು ಅವನು ಮಾಡಬೇಕಾದಂಥ, ಧ್ವನಿಮುದ್ರಿಕೆಗಳಿಗೆ ಸಂಬಂಧಿಸಿದಂತೆ, ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನಿಗೆ ಈ ಬಗ್ಗೆ ಕೃತಿಸ್ವಾಮ್ಯ ಮಂಡಲಿಯು ನಿಗದಿಪಡಿಸಿದ ದರದಲ್ಲಿ ಸ್ವಾಮ್ಯ ಶುಲ್ಕಗಳನು ನಿಯಮಿಸಿದ ರೀತಿಯಲ್ಲಿ ಸಂದಾಯ ಮಾಡಿದ್ದರೆ

—ಯಾವುದೇ ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿಗೆ ಸಂಬಂಧಿಸಿದಂತೆ ಧ್ವನಿಮುದ್ರಿಕೆಗಳನ್ನು ಮಾಡುವುದು:

ಪರಂತು, ಧ್ವನಿಮುದ್ರಿಕೆಗಳನ್ನು ಮಾಡುವಲ್ಲಿ ಅಂಥ ವ್ಯಕ್ತಿಯು, ಕೃತಿಸ್ವಾಮ್ಯದ ಒಡೆಯ ಅಥವಾ ಅವನ ಲೈಸೆನ್ಸ್ ಅಥವಾ ಸಮ್ಮತಿಯೊಡನೆ, ಅಂಥಹುವೇ ಬದಲಾವಣೆಗಳು ಮತ್ತು ಲೋಪಗಳಿಗೆ ಒಳಪಟ್ಟು ಕೃತಿಯನ್ನು ಧ್ವನಿಮುದ್ರಿಸುವ ಧ್ವನಿಮುದ್ರಿಕೆಗಳನ್ನು ಈ ಹಿಂದೆಯೇ ಮಾಡಿದ್ದ ಹೊರತು ಅಥವಾ ಅಂಥ ಬದಲಾವಣೆಗಳು ಅಥವಾ ಲೋಪಗಳು ಪ್ರಶ್ನಿತ ಧ್ವನಿಮುದ್ರಿಕೆಗಳಿಗೆ ಆ ಕೃತಿಯನ್ನು ಅಳವಡಿಸುವುದಕ್ಕಾಗಿ ಯುಕ್ತವಾಗಿ ಅವಶ್ಯವಾಗಿದ್ದ ಹೊರತು. ಆ ಕೃತಿಯಲ್ಲಿ—ಅದರಿಂದ ಯಾವುವೇ ಬದಲಾವಣೆಗಳನ್ನು ಅಥವಾ ಲೋಪಗಳನ್ನು ಮಾಡತಕ್ಕದಲ್ಲ ;

(ಟ) (i) ವ್ಯಕ್ತಿಗಳು ವಾಸಿಸುವ ಯಾವುದೇ ಆವರಣದಲ್ಲಿ, ಅದರಲ್ಲಿನ ನಿವಾಸಿಗಳಿಗಾಗಿ ಅನನ್ಯವಾಗಿ ಅಥವಾ ಮುಖ್ಯವಾಗಿ ಒದಗಿಸಿದ ಸೌಲಭ್ಯಗಳ ಭಾಗವಾಗಿ, ಅಥವಾ

(ii) ಲಾಭಕ್ಕಾಗಿ ಸ್ಥಾಪಿತವಾಗಿಲ್ಲದ ಅಥವಾ ನಡೆಸದಂಥ ಕ್ಲಬ್ಬು, ಸಂಘ ಅಥವಾ ಇತರ ಸಂಸ್ಥೆಯ ಚಟುವಟಿಕೆಗಳ ಭಾಗವಾಗಿ

—ಧ್ವನಿಮುದ್ರಿಕೆಯನ್ನು ಉಪಯೋಗಿಸಿಕೊಂಡು ಧ್ವನಿಮುದ್ರಿಕೆಯಲ್ಲಿ ಒಳಗೊಂಡ ಧ್ವನಿಮುದ್ರಣವನ್ನು ಸಾರ್ವಜನಿಕವಾಗಿ ಕೇಳುವ ಹಾಗೆ ಮಾಡುವುದು ;

(ಠ) ಸಂದಾಯ ಮಾಡದಿರುವ ಶ್ರೋತೃವೃಂದಕ್ಕೆ ಅಥವಾ ಧಾರ್ಮಿಕ ಸಂಸ್ಥೆಯ ಪ್ರಯೋಜನಕ್ಕಾಗಿ ಪ್ರದರ್ಶನವನ್ನು ಕೊಟ್ಟರೆ, ಹವ್ಯಾಸಿ ಕ್ಲಬ್ಬು ಅಥವಾ ಸಂಘದಿಂದ ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿಯ ಪ್ರದರ್ಶನ ;

(ಡ) ಪ್ರಚಲಿತ ಆರ್ಥಿಕ, ರಾಜಕೀಯ, ಸಾಮಾಜಿಕ ಅಥವಾ ಧಾರ್ಮಿಕ ವಿಷಯಗಳ ಮೇಲೆ ಲೇಖನವನ್ನು, ಅಂಥ ಲೇಖನದ ಕರ್ತೃವು ಅಂಥ ಯಥಾವತ್ತಾದ ನಿರೂಪಣೆಯ ಹಕ್ಕನ್ನು ತನಗಾಗಿ ಸ್ಪಷ್ಟವಾಗಿ ಕಾಯ್ದಿರಿಸಿಕೊಂಡಿದ್ದ ಹೊರತು, ವೃತ್ತಪತ್ರಿಕೆ, ಮ್ಯಾಗಝಿನ್, ಅಥವಾ ಪತ್ರಿಕೆ ಅಥವಾ ಇತರ ನಿಯತಕಾಲಿಕದಲ್ಲಿ ಅದನ್ನು ಯಥಾವತ್ತಾಗಿ ನಿರೂಪಿಸುವುದು ;

(ಢ) ಸಾರ್ವಜನಿಕವಾಗಿ ಕೊಟ್ಟ ಉಪನ್ಯಾಸದ ವರದಿಯನ್ನು ವೃತ್ತಪತ್ರಿಕೆ, ಮ್ಯಾಗಝಿನ್ ಅಥವಾ ಇತರ ನಿಯತಕಾಲಿಕದಲ್ಲಿ ಪ್ರಕಟಿಸುವುದು ;

(ಣ) ಪುಸ್ತಕವು ಭಾರತದಲ್ಲಿ ಮಾರಾಟಕ್ಕೆ ದೊರೆಯದಿದ್ದರೆ, ಗ್ರಂಥಾಲಯದ ಉಪಯೋಗಕ್ಕಾಗಿ ಸಾರ್ವಜನಿಕ ಗ್ರಂಥಾಲಯದ ಪ್ರಭಾರದಲ್ಲಿರುವ ವ್ಯಕ್ತಿಯ ನಿರ್ದೇಶನದ ಮೂಲಕ ಅಥವಾ ಮೇರೆಗೆ ಅಂಥ ಪುಸ್ತಕದ (ಕಿರುಹೊತ್ತಿಗೆ, ಸಂಗೀತದ ಭೂಪಟ, ನಕಾಶೆ ಅಥವಾ ನಕ್ಷೆಯ ಹಾಳೆ ಸೇರಿ) ಮೂರು ಪ್ರತಿಗಳಿಗೆ ಹೆಚ್ಚಲ್ಲದ ಪ್ರತಿಗಳನ್ನು ಮಾಡುವುದು ;

(ತ) ಸಾರ್ವಜನಿಕರಿಗೆ ಪ್ರವೇಶವಿರುವಂಥ ಗ್ರಂಥಾಲಯದಲ್ಲಿ, ವಸ್ತು ಸಂಗ್ರಹಾಲಯದಲ್ಲಿ ಅಥವಾ ಇತರ ಸಂಸ್ಥೆಯಲ್ಲಿ ಇಟ್ಟಿರುವ ಅಪ್ರಕಟಿತ ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿಯನ್ನು ಸಂಶೋಧನೆಯ ಅಥವಾ ಖಾಸಗಿ ಅಧ್ಯಯನದ ಉದ್ದೇಶಕ್ಕಾಗಿ ಅಥವಾ ಪ್ರಕಟಣೆಯ ದೃಷ್ಟಿಯಿಂದ ಯಥಾವತ್ತಾಗಿ ನಿರೂಪಿಸುವುದು :

ಪರಂತು, ಅಂಥ ಯಾವುದೇ ಕೃತಿಯ ಕರ್ತೃ ಅಥವಾ ಸಹ ಕರ್ತೃತ್ವದ ಕೃತಿಯ ಸಂದರ್ಭದಲ್ಲಿ, ಯಾವನೇ ಒಬ್ಬ ಕರ್ತೃವಿನ ಗುರುತು, ಸಂದರ್ಭಾನುಸಾರ ಗ್ರಂಥಾಲಯ, ವಸ್ತು ಸಂಗ್ರಹಾಲಯ ಅಥವಾ ಇತರ ಸಂಸ್ಥೆಗೆ ತಿಳಿದಿರುವಲ್ಲಿ, ಈ ಖಂಡದ ಉಪಬಂಧಗಳು, ಕರ್ತೃವಿನ ಮರಣದ ದಿನಾಂಕದಿಂದ ಅಥವಾ ಸಹ ಕರ್ತೃತ್ವದ ಕೃತಿಯ ಸಂದರ್ಭದಲ್ಲಿ ಗುರುತು ಗೊತ್ತಿರುವ ಕರ್ತೃವಿನ ಮರಣದ ದಿನಾಂಕದಿಂದ ಅಥವಾ ಒಬ್ಬನಿಗಿಂತ ಹೆಚ್ಚಿನ ಕರ್ತೃಗಳ ಗುರುತು ತಿಳಿದಿದ್ದರೆ, ಕೊನೆಯಲ್ಲಿ ಮರಣ ಹೊಂದುವಂಥ ಕರ್ತೃವಿನ ಮರಣದ ದಿನಾಂಕದಿಂದ ಐವತ್ತು ವರ್ಷಗಳಿಗಿಂತ ಹೆಚ್ಚಿನ ಕಾಲದಲ್ಲಿ ಅಂಥ ಯಥಾವತ್ತಾದ ನಿರೂಪಣೆಯನ್ನು ಮಾಡಿದ್ದರೆ ಮಾತ್ರ ಅನ್ವಯಿಸತಕ್ಕದು ;

(ಥ) (i) ವಿಧಾನ ಮಂಡಲದ ಅಧಿನಿಯಮದ ಹೊರತು, ಯಾವುದೇ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲಾದಂಥ ಯಾವುದೇ ವಿಷಯದ ;

(ii) ಅಧಿನಿಯಮವನ್ನು ಅದರ ಮೇಲಿನ ಯಾವುದೇ ವ್ಯಾಖ್ಯಾನ ಅಥವಾ ಯಾವುದೇ ಇತರ ಮೂಲ ವಿಷಯದೊಂದಿಗೆ ಯಥಾವತ್ತಾಗಿ ನಿರೂಪಿಸಲಾಗಿದೆ ಅಥವಾ ಪ್ರಕಟಿಸಲಾಗಿದೆ ಎಂಬ ಷರತ್ತಿಗೆ ಒಳಪಟ್ಟು, ವಿಧಾನಮಂಡಲದ ಯಾವುದೇ ಅಧಿನಿಯಮದ ;

(iii) ವರದಿಯ ಯಥಾವತ್ತಾದ ನಿರೂಪಣೆ ಅಥವಾ ಪ್ರಕಟಣೆಯನ್ನು ಸರ್ಕಾರವು ನಿಷೇಧಿಸಿದ್ದ ಹೊರತು, ಅಂಥ ವರದಿಯನ್ನು ವಿಧಾನಮಂಡಲದ ಮುಂದೆ ಇಡಲಾಗಿದ್ದರೆ, ಸರ್ಕಾರದಿಂದ ನೇಮಕಗೊಂಡ ಯಾವುದೇ ಸಮಿತಿ, ಆಯೋಗ, ಪರಿಷತ್ತು, ಮಂಡಲಿ, ಅಥವಾ ಅಂತಹುದೇ ಇತರ ನಿಕಾಯದ ವರದಿಯ;

(iv) ತೀರ್ಪು ಅಥವಾ ಆದೇಶದ ಯಥಾವತ್ತಾದ ನಿರೂಪಣೆ ಅಥವಾ ಪ್ರಕಟಣೆಯನ್ನು ಸಂದರ್ಭಾನುಸಾರ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ನ್ಯಾಯಿಕ ಪ್ರಾಧಿಕಾರವು ನಿಷೇಧಿಸಿದ ಹೊರತು, ನ್ಯಾಯಾಲಯದ, ನ್ಯಾಯಾಧಿಕರಣದ ಅಥವಾ ಇತರ ನ್ಯಾಯಿಕ ಪ್ರಾಧಿಕಾರದ ಯಾವುದೇ ತೀರ್ಪು ಅಥವಾ ಆದೇಶದ

—ಯಥಾವತ್ತಾದ ನಿರೂಪಣೆ ಅಥವಾ ಪ್ರಕಟಣೆ;

(ದ) (i) ಅಧಿನಿಯಮದ ಅಥವಾ ನಿಯಮಗಳ ಅಥವಾ ಆದೇಶಗಳ ಯಾವುದೇ ಭಾಷಾಂತರವನ್ನು ಆ ಭಾಷೆಯಲ್ಲಿ ಸರ್ಕಾರವು ಮೊದಲೇ ಮಾಡಿಲ್ಲದಿದ್ದರೆ ಅಥವಾ ಪ್ರಕಟಿಸಿಲ್ಲದಿದ್ದರೆ;

(ii) ಆ ಭಾಷೆಯಲ್ಲಿ ಅಂಥ ಅಧಿನಿಯಮ ಅಥವಾ ನಿಯಮಗಳ ಅಥವಾ ಆದೇಶಗಳ ಭಾಷಾಂತರವನ್ನು ಸರ್ಕಾರ ಮಾಡಿರುವಲ್ಲಿ ಅಥವಾ ಪ್ರಕಟಿಸಿರುವಲ್ಲಿ ಭಾಷಾಂತರವು ಸಾರ್ವಜನಿಕರಿಗೆ ಮಾರಾಟಕ್ಕಾಗಿ ಲಭ್ಯವಿಲ್ಲದಿರುವಲ್ಲಿ

—ವಿಧಾನಮಂಡಲದ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಅಥವಾ ಆದೇಶಗಳ ಭಾಷಾಂತರವನ್ನು ಯಾವುದೇ ಭಾರತೀಯ ಭಾಷೆಯಲ್ಲಿ ಮಾಡುವುದು ಅಥವಾ ಪ್ರಕಟಿಸುವುದು:

ಪರಂತು, ಅಂಥ ಭಾಷಾಂತರವು, ಸರ್ಕಾರವು ಅದನ್ನು ಅಧಿಕೃತವೆಂದು ಅಧಿಕೃತಗೊಳಿಸಿಲ್ಲ ಅಥವಾ ಅಂಗೀಕರಿಸಿಲ್ಲ ಎಂಬ ಬಗ್ಗೆ ಮುಖ್ಯ ಸ್ಥಳದಲ್ಲಿ ನಿರೂಪಣೆಯನ್ನು ಒಳಗೊಂಡಿರಬೇಕು ;

(ಧ) ವಾಸ್ತುಶಿಲ್ಪ ಕಲಾಕೃತಿಯ ವರ್ಣಚಿತ್ರ, ರೇಖಾಚಿತ್ರ, ಕೆತ್ತನೆ ಅಥವಾ ಛಾಯಾಚಿತ್ರವನ್ನು ಮಾಡುವುದು ಅಥವಾ ಪ್ರಕಟಿಸುವುದು ;

(ನ) ಶಿಲ್ಪಕಲೆಯ ಅಥವಾ (2)ನೇ ಉಪಪ್ರಕರಣದ (ಗ) ಖಂಡದ (iii)ನೇ ಉಪಖಂಡದಡಿಯಲ್ಲಿ ಬರುವ ವರ್ಣಚಿತ್ರ, ರೇಖಾಚಿತ್ರ, ಕೆತ್ತನೆ ಅಥವಾ ಶಿಲ್ಪದ ಛಾಯಾಚಿತ್ರ ಅಥವಾ ಕಲಾತ್ಮಕ ಕೃತಿಯನ್ನು ಅಂಥ ಕೃತಿಯು ಸಾರ್ವಜನಿಕ ಸ್ಥಳ ಅಥವಾ ಸಾರ್ವಜನಿಕರಿಗೆ ಪ್ರವೇಶಾವಕಾಶವಿರುವಂಥ ಯಾವುವೇ ಆವರಣಗಳಲ್ಲಿ ಖಾಯಂ ಆಗಿ ಇದ್ದರೆ ಅವುಗಳನ್ನು ಮಾಡುವುದು ಅಥವಾ ಪ್ರಕಟಿಸುವುದು :

(ಪ) (i) ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕರಿಗೆ ಪ್ರವೇಶಾವಕಾಶವಿರುವಂಥ ಆವರಣದಲ್ಲಿ ಖಾಯಂ ಆಗಿರುವ ಯಾವುದೇ ಕಲಾತ್ಮಕ ಕೃತಿಯನ್ನು; ಅಥವಾ

(ii) ಯಾವುದೇ ಇತರ ಕಲಾಕೃತಿಯನ್ನು, ಅಂಥ ಸೇರ್ಪಡೆಯು, ಚಿತ್ರದಲ್ಲಿನ ಮುಖ್ಯ ವಿಷಯಗಳಿಗೆ ಹಿನ್ನಲೆ ಅಥವಾ ಅನ್ಯಥಾ ಪ್ರಾಸಂಗಿಕವಾಗಿದ್ದರೆ,
— ಚಲನಚಿತ್ರ ಫಿಲ್ಮಿನಲ್ಲಿ ಸೇರಿಸುವುದು;

(ಫ) ಕಲಾತ್ಮಕ ಕೃತಿಯ ಕರ್ತೃವಿನಿಂದ, ಅಂಥ ಕೃತಿಯ ಕರ್ತೃವು ಅದರಲ್ಲಿನ ಕೃತಿಸ್ವಾಮ್ಯದ ಒಡೆಯನಾಗಿಲ್ಲದಿರುವಲ್ಲಿ, ಯಾವುದೇ ಅಚ್ಚು, ಎರಕ, ಕರಡುಚಿತ್ರ, ನಕ್ಷೆ, ಮಾದರಿಯ ಉಪಯೋಗ ಅಥವಾ ಕೃತಿಯ ಉದ್ದೇಶಕ್ಕಾಗಿ ಅವನು ಮಾಡಿದ ಅಧ್ಯಯನ :

ಪರಂತು, ಅವನು ಕೃತಿಯ ಮುಖ್ಯ ವಿನ್ಯಾಸವನ್ನು ಈ ಮೂಲಕ ಪುನರಾವರ್ತಿಸತಕ್ಕದಲ್ಲ ಅಥವಾ ಅನುಕರಣೆ ಮಾಡತಕ್ಕದಲ್ಲ ;

(ಬ) ಯಾವುದೇ ವಿವರಣೆಯ ವಸ್ತುವನ್ನು ಮೂರು ಪರಿಮಾಣಗಳಲ್ಲಿ, ಕಲಾತ್ಮಕ ಕೃತಿಯನ್ನು ಎರಡು ಪರಿಮಾಣಗಳಲ್ಲಿ, ಕಲಾತ್ಮಕ ಕೃತಿಯು ಯಥಾವತ್ತಾದ ನಿರೂಪಣೆಯಾಗಿರುವುದಾಗಿ, ಆ ವಿವರಣೆಯು ವಸ್ತುಗಳಿಗೆ ಸಂಬಂಧಪಟ್ಟಂತೆ ತಜ್ಞರಲ್ಲದ ವ್ಯಕ್ತಿಗಳಿಗೆ ಆ ವಸ್ತುವು ಕಂಡುಬರದಿದ್ದರೆ, ಮಾಡುವುದು;

(ಭ) ಯಾವ ವಾಸ್ತುಶಿಲ್ಪ, ರೇಖಾಚಿತ್ರಗಳು ಅಥವಾ ನಕ್ಷೆಗಳನ್ನು ಉಲ್ಲೇಖಿಸಿ ಕಟ್ಟಡವನ್ನು ಅಥವಾ ರಚನೆಯನ್ನು ಮೂಲತಃ ನಿರ್ಮಿಸಲಾಯಿತೋ ಆ ಯಾವುದೇ ವಾಸ್ತುಶಿಲ್ಪ, ರೇಖಾ ಚಿತ್ರಗಳು ಅಥವಾ ನಕ್ಷೆಗಳಿಗನುಸಾರ ಕಟ್ಟಡ ಅಥವಾ ರಚನೆಯ ಪುನರ್ ನಿರ್ಮಾಣ :

ಪರಂತು, ಅಂಥ ರೇಖಾಚಿತ್ರ ಮತ್ತು ನಕ್ಷೆಗಳಲ್ಲಿ ಕೃತಿಸ್ವಾಮ್ಯದ ಒಡೆಯನ ಸಮ್ಮತಿ ಅಥವಾ ಲೈಸನ್ಸಿನೊಂದಿಗೆ ಮೂಲ ನಿರ್ಮಾಣವನ್ನು ಮಾಡಿದ್ದಿರಬೇಕು ;

(ಮ) ಯಾವುದೇ ಚಲನಚಿತ್ರ ಫಿಲ್ಮಿನಲ್ಲಿ, ಧ್ವನಿಮುದ್ರಿಸಿದ ಅಥವಾ ಯಥಾವತ್ತಾಗಿ ನಿರೂಪಿಸಿದ ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿಯ ಸಂಬಂಧದಲ್ಲಿ ಅದರಲ್ಲಿನ ಕೃತಿಸ್ವಾಮ್ಯದ ಅವಧಿಯು ಮುಕ್ತಾಯದ ತರುವಾಯ ಅಂಥ ಫಿಲ್ಮಿನ ಪ್ರದರ್ಶನ :

ಪರಂತು, (ಕ) ಖಂಡದ, (ii)ನೇ ಉಪಖಂಡ, (ಖ) ಖಂಡದ (i)ನೇ ಉಪಖಂಡ ಮತ್ತು (ಘ), (ಚ), (ಛ), (ಢ) ಮತ್ತು (ತ) ಖಂಡಗಳ ಉಪಬಂಧಗಳು ಯಾವುದೇ ಕೃತ್ಯಕ್ಕೆ ಸಂಬಂಧಿಸಿದಂತೆ ಆ ಕೃತ್ಯವು—

(i) ಕೃತಿಯನ್ನು ಅದರ ಶೀರ್ಷಿಕೆ ಅಥವಾ ಇತರ ವಿವರಣೆಯಿಂದ ಗುರುತಿಸುವ; ಮತ್ತು

(ii) ಕೃತಿಯು ಅನಾಮಧೇಯವಾಗಿದ್ದ ಅಥವಾ ಕೃತಿಯ ಕರ್ತೃ ತನ್ನ ಹೆಸರಿನ ಯಾವುದೇ ಸ್ವೀಕೃತಿಯನ್ನು ಮಾಡ ಕೂಡದೆಂದು ಈಹಿಂದೆಯೇ ಒಪ್ಪಿಕೊಂಡಿದ್ದ ಅಥವಾ ಅಗತ್ಯಪಡಿಸಿದ್ದ ಹೊರತು, ಕರ್ತೃವನ್ನು ಕೂಡ ಗುರುತಿಸುವ ಸ್ವೀಕೃತಿಯೊಡನೆ ಇದ್ದ ಹೊರತು,
—ಅನ್ವಯಿಸತಕ್ಕದಲ್ಲ.

(2) (1) ನೇ ಉಪ-ಪ್ರಕರಣದ ಉಪಬಂಧಗಳು ಸಾಹಿತ್ಯಕ, ನಾಟಕ ಅಥವಾ ಸಂಗೀತ ಕೃತಿಯ ಭಾಷಾಂತರಕ್ಕೆ ಸಂಬಂಧಪಟ್ಟಂತೆ ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಯ ಅಳವಡಿಕೆಯ ಸಂಬಂಧದಲ್ಲಿ ಮಾಡುವ ಯಾವುದೇ ಕಾರ್ಯಗಳಿಗೆ ಸಂಬಂಧಿಸಿ ಅವು ಅನ್ವಯಿಸುವಂತೆಯೇ ಅನ್ವಯವಾಗತಕ್ಕದು.

52ಕ. **ಧ್ವನಿಮುದ್ರಿಕೆಗಳು ಮತ್ತು ವಿಡಿಯೋ ಚಲನಚಿತ್ರಗಳಲ್ಲಿ ಸೇರಿಸಬೇಕಾದ ವಿವರಗಳು:**— (1) ಯಾವನೇ ವ್ಯಕ್ತಿಯು ಯಾವುದೇ ಕೃತಿಗೆ ಸಂಬಂಧಿಸಿದಂತೆ ಧ್ವನಿಮುದ್ರಿಕೆಯನ್ನು, ಈ ಕೆಳಕಂಡ ವಿವರಗಳನ್ನು ಧ್ವನಿಮುದ್ರಿಕೆಯ ಮೇಲೆ ಮತ್ತು ಅದರ ಯಾವುದೇ ಪೆಟ್ಟಿಗೆಯ ಮೇಲೆ ಪ್ರದರ್ಶಿಸಿದ್ದ ಹೊರತು ಪ್ರಕಟಿಸತಕ್ಕದಲ್ಲ, ಎಂದರೆ:—

(ಕ) ಧ್ವನಿಮುದ್ರಿಕೆಯನ್ನು ಮಾಡಿದ ವ್ಯಕ್ತಿಯ ಹೆಸರು ಮತ್ತು ವಿಳಾಸ ;

(ಖ) ಅಂಥ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನ ಹೆಸರು ಮತ್ತು ವಿಳಾಸ; ಮತ್ತು

(ಗ) ಅದರ ಮೊದಲ ಪ್ರಕಟಣೆಯ ವರ್ಷ.

(2) ಯಾವನೇ ವ್ಯಕ್ತಿಯು ಯಾವುದೇ ಕೃತಿಗೆ ಸಂಬಂಧಿಸಿದಂತೆ ವಿಡಿಯೋ ಚಲನಚಿತ್ರವನ್ನು ಪ್ರದರ್ಶಿಸಿದಾಗ ವಿಡಿಯೊ ಚಲನಚಿತ್ರದಲ್ಲಿ ಮತ್ತು ವಿಡಿಯೋ ಕ್ಯಾಸೆಟ್ ಅಥವಾ ಅದರ ಇತರ ಪೆಟ್ಟಿಗೆಯ ಮೇಲೆ ಈ ಕೆಳಕಂಡ ವಿವರಗಳನ್ನು ಪ್ರದರ್ಶಿಸಿದ್ದ ಹೊರತು ಪ್ರಕಟಿಸತಕ್ಕದಲ್ಲ, ಎಂದರೆ:—

(ಕ) ಅಂತಹ ಕೃತಿಯು ಚಲನಚಿತ್ರ ಅಧಿನಿಯಮ, 1952 (1952ರ 37)ದ ಉಪಬಂಧಗಳ ಮೇರೆಗೆ ಪ್ರದರ್ಶನಕ್ಕಾಗಿ ಪ್ರಮಾಣೀಕರಿಸಲು ಅಗತ್ಯಪಡಿಸಿದ್ದ ಚಲನಚಿತ್ರವಾಗಿದ್ದು ಫಿಲ್ಮ್ ಆಗಿದ್ದರೆ ಅಂತಹ ಕೃತಿಗೆ ಸಂಬಂಧಿಸಿದಂತೆ ಆ ಅಧಿನಿಯಮದ 5ಕ ಪ್ರಕರಣದ ಮೇರೆಗೆ ಚಲನಚಿತ್ರ ಪ್ರಮಾಣದ ಮಂಡಲಿಯು ಮಂಜೂರು ಮಾಡಿದ ಪ್ರಮಾಣಪತ್ರದ ಪ್ರತಿ;

(ಖ) ವಿಡಿಯೋ ಚಲನಚಿತ್ರವನ್ನು ಮಾಡುವ ವ್ಯಕ್ತಿಯ ಹೆಸರು ಮತ್ತು ವಿಳಾಸ ಮತ್ತು ಅಂತಹ ವಿಡಿಯೋ ಚಲನಚಿತ್ರ ಮಾಡುವುದಕ್ಕಾಗಿ ಅಂತಹ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನಿಂದ ಅಗತ್ಯವಾದ ಲೈಸೆನ್ಸ್ ಅಥವಾ ಸಮ್ಮತಿಯನ್ನು ಪಡೆದುಕೊಂಡಿದ್ದೇನೆಂದು ಅವನು ಮಾಡಿದ ಘೋಷಣೆ; ಮತ್ತು

(ಗ) ಅಂತಹ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನ ಹೆಸರು ಮತ್ತು ವಿಳಾಸ.

**53. ಅತಿಲಂಘನಾ ಪ್ರತಿಗಳನ್ನು ಆಮದು ಮಾಡಿಕೊಳ್ಳುವುದು:**—(1) ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು, ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯ ಒಡೆಯ ಅಥವಾ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಏಜೆಂಟನ ಅರ್ಜಿಯ ಮೇಲೆ ಮತ್ತು ನಿಯಮಿಂತ ಫೀಜನ್ನು ಸಂದಾಯ ಮಾಡಿದ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆ ಮಾಡಿದ ತರುವಾಯ ಯಾವ ಕೃತಿಯನ್ನು ಭಾರತದಲ್ಲಿ ಮಾಡಿದ್ದರೆ ಕೃತಿಸ್ವಾಮ್ಯದ ಅತಿಲಂಘನೆಯಾಗುತ್ತಿದ್ದಿತೋ ಅಂಥ ಭಾರತದ ಹೊರಗಡೆ ಮಾಡಿದ ಕೃತಿಯ ಪ್ರತಿಗಳನ್ನು ಆಮದು ಮಾಡಿಕೊಳ್ಳತಕ್ಕದಲ್ಲವೆಂದು ಆದೇಶಿಸತಕ್ಕದು.

(2) ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ನಿಯಮಕ್ಕೆ ಒಳಪಟ್ಟು, ಕೃತಿಸ್ವಾಮ್ಯಗಳ ರಿಜಿಸ್ಟ್ರಾರನೇ ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ಯಾವನೇ ವ್ಯಕ್ತಿಯು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂಥ ಯಾವುದೆ ಪ್ರತಿಗಳು ಇರುವ ಯಾವುದೇ ಹಡಗು, ಹಡಗುಕಟ್ಟೆ ಅಥವಾ ಆವರಣಗಳನ್ನು ಪ್ರವೇಶಿಸಬಹುದು ಮತ್ತು ಅಂಥ ಪ್ರತಿಗಳನ್ನು ಪರೀಕ್ಷಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವು ಅನ್ವಯಿಸುವಂಥ ಎಲ್ಲಾ ಪ್ರತಿಗಳನ್ನು, 1962ರ ಸೀಮಾ ಶುಲ್ಕ ಅಧಿನಿಯಮದ 11ನೇ ಪ್ರಕರಣದ ಮೇರೆಗೆ ಯಾವ ಸರಕುಗಳಿಗೆ ಆಮದನ್ನು ನಿಷೇಧಿಸಲಾಗಿದೆಯೋ ಅಥವಾ ನಿರ್ಬಂಧಿಸಲಾಗಿದೆಯೋ ಆ ಸರಕುಗಳೆಂದು ಭಾವಿಸತಕ್ಕದು ಮತ್ತು ತದನುಸಾರವಾಗಿ ಅಧಿನಿಯಮದ ಎಲ್ಲ ಉಪಬಂಧಗಳು ಪರಿಣಾಮವನ್ನು ಹೊಂದಿರತಕ್ಕದು:

ಪರಂತು, ಸದರಿ ಅಧಿನಿಯಮದ ಉಪಬಂಧಗಳ ಮೇರೆಗೆ ಮುಟ್ಟುಗೋಲಾದಂಥ ಎಲ್ಲಾ ಪ್ರತಿಗಳು ಸರ್ಕಾರದಲ್ಲಿ ನಿಹಿತವಾಗತಕ್ಕದಲ್ಲ ಆದರೆ ಅವುಗಳನ್ನು ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನಿಗೆ ವಶಾವಣೆ ಮಾಡತಕ್ಕದು.

## ಅಧ್ಯಾಯ—XII

### ಸಿವಿಲ್ ಪರಿಹಾರೋಪಾಯಗಳು

**54. ಪರಿಭಾಷೆ:**—ಈ ಅಧ್ಯಾಯದ ಉದ್ದೇಶಗಳಿಗಾಗಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, "ಕೃತಿಸ್ವಾಮ್ಯದ ಒಡೆಯ" ಎಂಬ ಪದಾವಳಿಯು—

(ಕ) ಅನನ್ಯ ಲೈಸೆನ್ಸ್‌ದಾರನನ್ನು;

(ಖ) ಅನಾಮಧೇಯ ಅಥವಾ ಲೇಖನಾಮದ ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಯ ಸಂದರ್ಭದಲ್ಲಿ, ಕರ್ತೃವಿನ ಗುರುತು ತಿಳಿಯುವವರೆಗೆ ಅಥವಾ ಸಹಕರ್ತೃತ್ವದ ಅನಾಮಧೇಯ ಕೃತಿಯ ಸಂದರ್ಭದಲ್ಲಿ ಅಥವಾ ಎಲ್ಲ ಲೇಖನಾಮಗಳ ಮೇರೆಗೆ ಪ್ರಕಟಿಸಿದ ಸಹ ಕರ್ತೃತ್ವದ ಕೃತಿಯ ಸಂದರ್ಭದಲ್ಲಿ ಕರ್ತೃ ಮತ್ತು ಪ್ರಕಾಶಕನು ಸಾರ್ವಜನಿಕವಾಗಿ ಯಾವನೇ ಕರ್ತೃವಿನ ಗುರುತನ್ನು ಬಹಿರಂಗಪಡಿಸುವವರೆಗೆ ಅಥವಾ ಅನ್ಯಥಾ ಆ ಕರ್ತೃ ಅಥವಾ ಅವನ ಕಾನೂನುಸಮ್ಮತ ಪ್ರತಿನಿಧಿಗಳು ಕೃತಿಸ್ವಾಮ್ಯ ಮಂಡಲಿಗೆ ಮನದಟ್ಟಾಗುವಂತೆ ಅನ್ಯಥಾ ಸ್ಥಾಪಿಸುವವರೆಗೆ ಕೃತಿಯ ಪ್ರಕಾಶಕನನ್ನು

—ಒಳಗೊಳ್ಳತಕ್ಕದು.

**55. ಕೃತಿಸ್ವಾಮ್ಯದ ಅತಿಲಂಘನೆಗಾಗಿ ಸಿವಿಲ್ ಪರಿಹಾರೋಪಾಯಗಳು:**—(1) ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯವನ್ನು ಅತಿಲಂಘಿಸಲಾಗಿರುವಲ್ಲಿ, ಕೃತಿಸ್ವಾಮ್ಯದ ಒಡೆಯನು, ಈ ಅಧಿನಿಯಮವು ಅನ್ಯಥಾ ಉಪಬಂಧಿಸಿರುವಂತೆ ಹೊರತು, ಹಕ್ಕಿನ ಅತಿಲಂಘನೆಗೆ ಕಾನೂನಿನ ಮೂಲಕ ಪ್ರದತ್ತವಾದ ಅಥವಾ ಪ್ರದತ್ತವಾಗಬಹುದಾದಂಥ ನಿರ್ಬಂಧಕಾಜ್ಞೆಯ, ಹಾನಿಪರಿಹಾರಗಳ, ಲೆಕ್ಕಪತ್ರಗಳ ರೂಪದಲ್ಲಿ ಮತ್ತು ಅನ್ಯಥಾ ಎಲ್ಲ ಅಂಥ ಪರಿಹಾರೋಪಾಯಗಳಿಗೆ ಹಕ್ಕುಳ್ಳವನಾಗಿರತಕ್ಕದು:

ಪರಂತು, ಪ್ರತಿವಾದಿಯು, ಅತಿಲಂಘನೆಯ ದಿನಾಂಕದಂದು ಕೃತಿಯಲ್ಲಿ ಕೃತಿಸ್ವಾಮ್ಯವು ಅಸ್ತಿತ್ವದಲ್ಲಿದ್ದುದು ತನಗೆ ತಿಳಿದಿರಲಿಲ್ಲವೆಂದು ಮತ್ತು ನಂಬಲು ಸೂಕ್ತ ಕಾರಣವಿದ್ದಿಲ್ಲವೆಂದು ರುಜುವಾತುಪಡಿಸಿದರೆ, ವಾದಿಯು ಅತಿಲಂಘನೆಗೆ ಸಂಬಂಧಿಸಿದಂತೆ ನಿರ್ಬಂಧಕಾಜ್ಞೆಯನ್ನು ಮತ್ತು ಆ ಸಂದರ್ಭಗಳಲ್ಲಿ ನ್ಯಾಯಾಲಯವು ಯುಕ್ತವೆಂದು ಭಾವಿಸುವಂಥ ಅತಿಲಂಘನಾ ಪ್ರತಿಗಳ ಮಾರಾಟದ ಮೂಲಕ ಪ್ರತಿವಾದಿಯು ಮಾಡಿಕೊಂಡ ಲಾಭಗಳ ಪೂರ್ಣ ಅಥವಾ ಅದರ ಭಾಗಕ್ಕಾಗಿನ ಡಿಕ್ರಿಯನ್ನು ಹೊರತುಪಡಿಸಿ ಯಾವುದೇ ಪರಿಹಾರೋಪಾಯಕ್ಕೆ ಹಕ್ಕುಳ್ಳವನಾಗಿರತಕ್ಕದಲ್ಲ.

(2) ಸಾಹಿತ್ಯಕ, ನಾಟಕ, ಸಂಗೀತ ಅಥವಾ ಕಲಾತ್ಮಕ ಕೃತಿಯ ಸಂದರ್ಭದಲ್ಲಿ ಪ್ರಕಟವಾದ್ದ ಕೃತಿಯ ಪ್ರತಿಗಳ ಮೇಲೆ ಸಂದರ್ಭಾನುಸಾರ ಕರ್ತೃವು ಅಥವಾ ಪ್ರಕಾಶಕನೆಂದು ತಾತ್ಪರ್ಯವಾಗುವ ಹೆಸರು ಕಂಡುಬಂದಲ್ಲಿ ಅಥವಾ ಕಲಾತ್ಮಕ ಕೃತಿಯ ಸಂದರ್ಭದಲ್ಲಿ, ಅದನ್ನು ರಚಿಸಿದಾಗ ಕೃತಿಯ ಮೇಲೆ, ಹೆಸರು ಕಂಡುಬಂದಲ್ಲಿ ಯಾರ ಹೆಸರು ಹಾಗೆ ಕಂಡುಬರುತ್ತದೋ ಅಥವಾ ಕಂಡುಬಂದಿದೆಯೋ ಆ ವ್ಯಕ್ತಿಯನ್ನು, ಅಂಥ ಕೃತಿಯಲ್ಲಿನ ಕೃತಿಸ್ವಾಮ್ಯದ ಅತಿಲಂಘನೆಗೆ ಸಂಬಂಧಪಟ್ಟಂತೆ ಯಾವುದೇ ವ್ಯವಹರಣೆಯಲ್ಲಿ, ತದ್ವಿರುದ್ಧವಾದುದು ರುಜುವಾತು ಆಗುವ ಹೊರತು, ಸಂದರ್ಭಾನುಸಾರ ಕೃತಿಯ ಕರ್ತೃ ಅಥವಾ ಪ್ರಕಾಶಕನೆಂಬುದಾಗಿ ಭಾವಿಸತಕ್ಕದು.

(3) ಕೃತಿಸ್ವಾಮ್ಯದ ಅತಿಲಂಘನೆಯ ಸಂಬಂಧವಲ್ಲಿನ ಯಾವುದೇ ವ್ಯವಹರಣೆಗಳಲ್ಲಿ ಎಲ್ಲ ಪಕ್ಷಕಾರರ ಖರ್ಚುಗಳು ನ್ಯಾಯಾಲಯದ ವಿವೇಚನೆಗೆ ಒಳಪಟ್ಟಿರತಕ್ಕದು.

**56. ಪ್ರತ್ಯೇಕ ಹಕ್ಕಿನ ಸಂರಕ್ಷಣೆ:**—ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಕೃತಿಯಲ್ಲಿ ಕೃತಿಸ್ವಾಮ್ಯವು ಅಡಕವಾಗಿರುವ ವಿವಿಧ ಹಕ್ಕುಗಳು ಬೇರೆ ಬೇರೆ ವ್ಯಕ್ತಿಗಳ ಒಡೆತನದಲ್ಲಿರುವಲ್ಲಿ, ಅಂಥ ಯಾವುದೇ ಹಕ್ಕಿನ ಒಡೆಯನು, ಆ ಹಕ್ಕಿನಷ್ಟರ ಮಟ್ಟಿಗೆ, ಈ ಅಧಿನಿಯಮವು ಒದಗಿಸಿರುವ ಪರಿಹಾರೋಪಾಯಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಯಾವುದೇ ದಾವೆ, ಕ್ರಮ ಅಥವಾ ಇತರ ವ್ಯವಹರಣೆಯ ಮೂಲಕ ಇತರ ಯಾವುದೇ ಹಕ್ಕಿನ ಒಡೆಯನನ್ನು ಅಂಥ ದಾವೆ, ಕ್ರಮ ಅಥವಾ ವ್ಯವಹರಣೆಗೆ ಪಕ್ಷಕಾರನನ್ನಾಗಿ ಮಾಡದೆ ಅಂಥ ಹಕ್ಕನ್ನು ವೈಯಕ್ತಿಕವಾಗಿ ಜಾರಿಗೊಳಿಸಬಹುದು.

**57. ಕರ್ತೃವಿನ ವಿಶೇಷ ಹಕ್ಕುಗಳು:**—ಕರ್ತೃವಿನ ಕೃತಿ ಸ್ವಾಮ್ಯಕ್ಕೆ ಸ್ವತಂತ್ರವಾಗಿ ಮತ್ತು ಸದರಿ ಕೃತಿಸ್ವಾಮ್ಯವನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶ:ವಾಗಿಯಾಗಲಿ ಹಸ್ತಾಂತರ ಮಾಡಿದ ತರುವಾಯವೂ ಸಹ, ಕೃತಿಯ ಕರ್ತೃವು, ಈ ಕೃತಿಯ ಕರ್ತೃತ್ವವನ್ನು ಕ್ಲೇಮು ಮಾಡಲು ಹಾಗೂ—

(ಕ) ಸದರಿ ಕೃತಿಯ ಯಾವುದೇ ವಿಕೃತಿ ಅಥವಾ ವಿರೂಪ ಅಥವಾ ಇತರ ಮಾರ್ಪಾಟಿನ; ಅಥವಾ

(ಖ) ಅವನ ಗೌರವ ಅಥವಾ ಖ್ಯಾತಿಗೆ ಬಾಧಕವಾಗುವಂಥ ಸದರಿ ಕೃತಿಗೆ ಸಂಬಂಧಿಸಿದ ಯಾವುದೇ ಇತರ ಕ್ರಮದ

—ಸಂಬಂಧದಲ್ಲಿ ಅದನ್ನು ಪ್ರತಿಬಂಧಿಸುವ ಮತ್ತು ಹಾನಿ ಪರಿಹಾರಗಳನ್ನು ಕ್ಲೇಮು ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(2) ಕೃತಿಯ ಕರ್ತೃತ್ವವನ್ನು ಕ್ಲೇಮು ಮಾಡುವ ಹಕ್ಕನ್ನು ಹೊರತುಪಡಿಸಿ (1)ನೇ ಉಪ ಪ್ರಕರಣದಿಂದ ಕೃತಿಯ ಕರ್ತೃವಿಗೆ ಪ್ರದತ್ತವಾದ ಹಕ್ಕನ್ನು ಕರ್ತೃವಿನ ಕಾನೂನುಸಮ್ಮತ ಪ್ರತಿನಿಧಿಗಳು ಚಲಾಯಿಸಬಹುದು.

**58. ಅತಿಲಂಘನಾ ಪ್ರತಿಗಳನ್ನು ಹೊಂದಿರುವ ಅಥವಾ ಅವುಗಳ ಬಗ್ಗೆ ವ್ಯವಹರಿಸುತ್ತಿರುವ ವ್ಯಕ್ತಿಗಳ ವಿರುದ್ಧ ಒಡೆಯನ ಹಕ್ಕುಗಳು:**—ಕೃತಿಸ್ವಾಮ್ಯ ಅಸ್ತಿತ್ವದಲ್ಲಿರುವಂಥ ಯಾವುದೇ ಕೃತಿಯ ಎಲ್ಲ ಅತಿಲಂಘನಾ ಪ್ರತಿಗಳು ಮತ್ತು ಅಂಥ ಅತಿಲಂಘನಾ ಪ್ರತಿಗಳನ್ನು ತಯಾರಿಸಲು ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿದ ಎಲ್ಲ ಪ್ಲೇಟುಗಳನ್ನು ಕೃತಿಸ್ವಾಮ್ಯದ ಒಡೆಯನ ಸ್ವತ್ತೆಂದು ಭಾವಿಸತಕ್ಕದ್ದು ಅವನು ತದನುಸಾರವಾಗಿ, ಅದರ ಸ್ವಾಧೀನತೆಯನ್ನು ಪಡೆಯುವುದಕ್ಕಾಗಿ ಅಥವಾ ಅದರ ಪರಿವರ್ತನೆಯ ಸಂಬಂಧದಲ್ಲಿ ವ್ಯವಹರಣೆಗಳನ್ನು ಕೈಗೊಳ್ಳಬಹುದು:

ಪರಂತು, ಎದುರಾಳಿಯು—

(ಕ) ಯಾವ ಕೃತಿಯ ಪ್ರತಿಗಳನ್ನು ಅತಿಲಂಘನಾ ಪ್ರತಿಗಳೆಂದು ಆರೋಪಿಸಲಾಗಿದೆಯೋ ಆ ಕೃತಿಯಲ್ಲಿ ಕೃತಿಸ್ವಾಮ್ಯವು ಅಸ್ತಿತ್ವದಲ್ಲಿತ್ತೆಂದು ತನಗೆ ತಿಳಿದಿರಲಿಲ್ಲವೆಂದು ಮತ್ತು ನಂಬಲು ಸೂಕ್ತ ಕಾರಣವಿದ್ದಿಲ್ಲವೆಂದು; ಅಥವಾ

(ಖ) ಅಂಥ ಪ್ರತಿಗಳು ಅಥವಾ ಪ್ಲೇಟುಗಳು ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯದ ಅತಿಲಂಘನೆಯನ್ನು ಒಳಗೊಳ್ಳುವುದಿಲ್ಲವೆಂದು ನಂಬಲು ತನಗೆ ಸೂಕ್ತ ಕಾರಣವಿತ್ತೆಂದು

—ರುಜುವಾತುಪಡಿಸಿದರೆ ಕೃತಿಸ್ವಾಮ್ಯದ ಒಡೆಯನು ಯಾವುದೇ ಅತಿಲಂಘನಾ ಪ್ರತಿಗಳ ಪರಿವರ್ತನೆಗೆ ಸಂಬಂಧಿಸಿದಂತೆ ಯಾವುದೇ ಪರಿಹಾರೋಪಾಯಕ್ಕೆ ಹಕ್ಕುಳ್ಳವನಾಗಿರತಕ್ಕದಲ್ಲ.

**59. ವಾಸ್ತುಶಿಲ್ಪ ಕೃತಿಗಳ ಸಂದರ್ಭದಲ್ಲಿ ಪರಿಹಾರೋಪಾಯಗಳ ಮೇಲೆ ನಿರ್ಬಂಧ:**—(1) ನಿರ್ದಿಷ್ಟ ಪರಿಹಾರ ಅಧಿನಿಯಮ, 1963 (1963ರ 47) ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ಇತರ ಕೆಲಸದಲ್ಲಿನ ಕೃತಿಸ್ವಾಮ್ಯವನ್ನು ಅತಿಲಂಘಿಸುವಂಥ ಅಥವಾ ಅದನ್ನು ಪೂರ್ತಿಗೊಳಿಸಿದರೆ ಅದನ್ನು ಅತಿಲಂಘಿಸಬಹುದಾದಂಥ ಕಟ್ಟಡ ಅಥವಾ ಇತರ ರಚನೆಯ ನಿರ್ಮಾಣವನ್ನು ಪ್ರಾರಂಭಿಸಿರುವಲ್ಲಿ ಕೃತಿಸ್ವಾಮ್ಯದ ಒಡೆಯನು ಅಂಥ ಕಟ್ಟಡ ಅಥವಾ ರಚನೆಯ ನಿರ್ಮಾಣವನ್ನು ಪ್ರತಿಬಂಧಿಸಲು ನಿರ್ಬಂಧಕಾಜ್ಞೆಯನ್ನು ಪಡೆಯಲು ಅಥವಾ ಅದನ್ನು ಕೆಡವಿ ಹಾಕುವ ಆದೇಶಕ್ಕೆ ಹಕ್ಕುಳ್ಳವನಾಗಿರತಕ್ಕದಲ್ಲ.

(2) 58ನೇ ಪ್ರಕರಣದಲ್ಲಿರುವುದಾವುದೂ, ಯಾವುದೇ ಇತರ ಕೆಲಸದಲ್ಲಿನ ಕೃತಿಸ್ವಾಮ್ಯವನ್ನು ಅತಿಲಂಘಿಸುವಂಥ ಅಥವಾ ಅದನ್ನು ಪೂರ್ಣಗೊಳಿಸಿದರೆ, ಅತಿಲಂಘಿಸಬಹುದಾದಂಥ ಕಟ್ಟಡ ಅಥವಾ ಇತರ ರಚನೆಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕದಲ್ಲ.

**60. ಕಾನೂನು ವ್ಯವಹರಣೆಗಳ ಆಧಾರ ರಹಿತ ಬೆದರಿಕೆಯ ಸಂದರ್ಭದಲ್ಲಿ ಪರಿಹಾರೋಪಾಯ:**—ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯದ ಒಡೆಯನೆಂದು ಕ್ಲೇಮು ಮಾಡುವ ಯಾವನೇ ವ್ಯಕ್ತಿಯು, ಸುತ್ತೋಲೆಗಳು ಜಾಹೀರಾತುಗಳ ಮೂಲಕ ಅಥವಾ ಅನ್ಯಥಾ, ಆ ಕೃತಿಸ್ವಾಮ್ಯದ ಆಪಾದಿತ ಅತಿಲಂಘನೆಗೆ ಸಂಬಂಧಿಸಿದಂತೆ ಯಾವುದೇ ಕಾನೂನು ವ್ಯವಹರಣೆಗಳು ಅಥವಾ ಹೊಣೆಗಾರಿಕೆಯಿಂದ ಯಾವನೇ ಇತರ ವ್ಯಕ್ತಿಗೆ ಬೆದರಿಕೆ ಹಾಕಿರುವಲ್ಲಿ, ಅದರಿಂದ ಬಾಧಿತನಾದ ಯಾವನೇ ವ್ಯಕ್ತಿಯು, ನಿರ್ದಿಷ್ಟ ಪರಿಹಾರ ಅಧಿನಿಯಮ, 1963 (1963ರ 47) ರ 34ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಬೆದರಿಕೆಗಳು ಸಂಬಂಧಪಟ್ಟಂಥ ಆಪಾದಿತ ಅತಿಲಂಘನೆಯು ಅಂಥ ಬೆದರಿಕೆಗಳನ್ನು ಹಾಕುವ ವ್ಯಕ್ತಿಯ ಯಾವುದೇ ಕಾನೂನುಸಮ್ಮತ ಹಕ್ಕುಗಳನ್ನು ವಾಸ್ತವವಾಗಿ ಅತಿಲಂಘಿಸಿಲ್ಲವೆಂಬ ಘೋಷಣೆಗಾಗಿ ದಾವೆಯನ್ನು ಹೂಡಬಹುದು ಮತ್ತು ಅಂಥ ಯಾವುದೇ ದಾವೆಯಲ್ಲಿ—

(ಕ) ಅಂಥ ಬೆದರಿಕೆಗಳನ್ನು ಮುಂದುವರೆಸುವುದರ ವಿರುದ್ಧ ನಿರ್ಬಂಧಕಾಜ್ಞೆಯನ್ನು ಪಡೆಯಬಹುದು; ಮತ್ತು

(ಖ) ಅಂಥ ಬೆದರಿಕೆಗಳ ಕಾರಣದಿಂದ ಅವನು ಅನುಭವಿಸಿದಂಥ ಹಾನಿಪರಿಹಾರಗಳು ಯಾವುವಾದರೂ ಇದ್ದರೆ, ಅವುಗಳನ್ನು ವಸೂಲು ಮಾಡಬಹುದು :

ಪರಂತು, ಈ ಪ್ರಕರಣವು ಅಂಥ ಬೆದರಿಕೆಗಳನ್ನು ಹಾಕುತ್ತಿರುವ ವ್ಯಕ್ತಿಯು ಯುಕ್ತ ಶ್ರದ್ಧೆಯಿಂದ, ತಾನು ಕ್ಲೇಮು ಮಾಡಿದ ಕೃತಿಸ್ವಾಮ್ಯದ ಅತಿಲಂಘನೆಗಾಗಿನ ಕ್ರಮವನ್ನು ಪ್ರಾರಂಭಿಸಿದ್ದರೆ ಮತ್ತು ನಡೆಸಿದ್ದರೆ ಅನ್ವಯವಾಗತಕ್ಕದಲ್ಲ.

**61. ಕೃತಿಸ್ವಾಮ್ಯದ ಒಡೆಯನು ವ್ಯವಹರಣೆಗೆ ಪಕ್ಷಕಾರನಾಗಿರತಕ್ಕದ್ದು:**—(1) ಅನನ್ಯ ಲೈಸೆನ್ಸ್‌ದಾರನು ಹೂಡಿದ ಕೃತಿಸ್ವಾಮ್ಯದ ಅತಿಲಂಘನೆಯ ಬಗೆಗಿನ ಪ್ರತಿಯೊಂದು ಸಿವಿಲ್ ದಾವೆ ಅಥವಾ ಇತರ ವ್ಯವಹರಣೆಯಲ್ಲಿ ಕೃತಿಸ್ವಾಮ್ಯದ ಒಡೆಯನನ್ನು ನ್ಯಾಯಾಲಯವು ಅನ್ಯಥಾ ನಿರ್ದೇಶಿಸಿದ ಹೊರತು, ಪ್ರತಿವಾದಿಯಾಗಿ ಮಾಡತಕ್ಕದ್ದು ಮತ್ತು ಅಂಥ ಒಡೆಯನನ್ನು ಪ್ರತಿವಾದಿಯನ್ನಾಗಿ ಮಾಡಿರುವಲ್ಲಿ, ಅವನು ಅನನ್ಯ ಲೈಸೆನ್ಸ್‌ದಾರನ ಕ್ಲೇಮನ್ನು ವಿವಾದಿಸುವ ಹಕ್ಕನ್ನು ಹೊಂದಿರತಕ್ಕದ್ದು.

(2) ಅನನ್ಯ ಲೈಸೆನ್ಸ್‌ದಾರನು ಹೂಡಿದ ಕೃತಿಸ್ವಾಮ್ಯದ ಅತಿಲಂಘನೆಯ ಬಗೆಗಿನ ಯಾವುದೇ ಸಿವಿಲ್ ದಾವೆ ಅಥವಾ ಇತರ ವ್ಯವಹರಣೆಯು ಬಾಕಿಯಿರುವಲ್ಲಿ, ಅದೇ ವ್ಯಾಜ್ಯ ಕಾರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಹೊಸ ದಾವೆ ಅಥವಾ ಇತರ ವ್ಯವಹರಣೆಯು ಕೃತಿಸ್ವಾಮ್ಯದ ಒಡೆಯನಿಂದ ಇರತಕ್ಕದ್ದಲ್ಲ.

**62. ಈ ಅಧ್ಯಾಯದ ಮೇರೆಗೆ ಉದ್ಭವಿಸುವ ವಿಷಯಗಳ ಮೇಲೆ ನ್ಯಾಯಾಲಯದ ಅಧಿಕಾರ ವ್ಯಾಪ್ತಿ :**—(1) ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯದ ಅತಿಲಂಘನೆಗೆ ಈ ಅಧಿನಿಯಮದಿಂದ ಪ್ರದತ್ತವಾದ ಇತರ ಯಾವುದೇ ಹಕ್ಕಿನ ಅತಿ ಲಂಘನೆಗೆ ಸಂಬಂಧಿಸಿದಂತೆ ಈ ಅಧ್ಯಾಯದ ಮೇರೆಗೆ ಉದ್ಭವಿಸುವ ಪ್ರತಿಯೊಂದು ದಾವೆ ಅಥವಾ ಇತರ ಸಿವಿಲ್ ವ್ಯವಹರಣೆಯನ್ನು, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಲಯದಲ್ಲಿ ಹೂಡತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವ ಜಿಲ್ಲಾ ನ್ಯಾಯಾಲಯದ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ, ದಾವೆ ಅಥವಾ ಇತರ ವ್ಯವಹರಣೆಯನ್ನು ಹೂಡುವ ಕಾಲದಲ್ಲಿ, ಆ ದಾವೆ ಅಥವಾ ಇತರ ವ್ಯವಹರಣೆಯನ್ನು ಹೂಡುವ ವ್ಯಕ್ತಿಯು ಅಥವಾ ಅಂಥ ವ್ಯಕ್ತಿಗಳು ಒಬ್ಬನಿಗಿಂತ ಹೆಚ್ಚು ಇರುವಲ್ಲಿ, ಅವರಲ್ಲಿ ಯಾರಾದರೂ ಒಬ್ಬನು ವಾಸ್ತವವಾಗಿ ಮತ್ತು ಸ್ವಇಚ್ಛೆಯಿಂದ ವಾಸಿಸುವ ಅಥವಾ ವ್ಯವಹಾರವನ್ನು ನಡೆಸುತ್ತಿರುವ ಅಥವಾ ಗಳಿಕೆಗಾಗಿ ಖುದ್ದಾಗಿ ಕೆಲಸ ಮಾಡುತ್ತಿರುವನೋ ಆ ಜಿಲ್ಲಾ ನ್ಯಾಯಾಲಯವನ್ನು ಒಳಗೊಳ್ಳುತ್ತದೆ.

## ಅಧ್ಯಾಯ—XIII

## ಅಪರಾಧಗಳು

**63. ಕೃತಿಸ್ವಾಮ್ಯದ ಅಥವಾ ಈ ಅಧಿನಿಯಮದ ಮೂಲಕ ಪ್ರದತ್ತವಾದ ಇತರ ಹಕ್ಕುಗಳ ಅತಿಲಂಘನೆಯ ಅಪರಾಧ:**—ಯಾವನೇ ವ್ಯಕ್ತಿಯು—

(ಕ) ಕೃತಿಯಲ್ಲಿನ ಕೃತಿಸ್ವಾಮ್ಯವನ್ನು. ಅಥವಾ

(ಖ) ಈ ಅಧಿನಿಯಮದ ಮೂಲಕ ಪ್ರದತ್ತವಾದ ಇತರ ಯಾವುದೇ ಹಕ್ಕನ್ನು

—ತಿಳಿದೂ ತಿಳಿದೂ ಅತಿಲಂಘಿಸಿದರೆ ಅಥವಾ ಅತಿಲಂಘನೆಯನ್ನು ದುಷ್ಪ್ರೇರಿಸಿದರೆ, ಆರು ತಿಂಗಳುಗಳಿಗೆ ಕಡಿಮೆ ಇಲ್ಲದಂಥ ಆದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂಥ ಆದರೆ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು :

ಪರಂತು, ಆ ನ್ಯಾಯಾಲಯವು ತೀರ್ಪಿನಲ್ಲಿ ನಮೂದಿಸಬೇಕಾದ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ ಆರು ತಿಂಗಳುಗಳಿಗಿಂತ ಕಡಿಮೆ ಅವಧಿಯ ಕಾರಾವಾಸ ಅಥವಾ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಬಹುದು.

**ವಿವರಣೆ.**—ಇತರ ಯಾವುದೇ ಕೆಲಸದಲ್ಲಿನ ಕೃತಿಸ್ವಾಮ್ಯವನ್ನು ಅತಿಲಂಘಿಸುವಂಥ ಅಥವಾ ಅದನ್ನು ಪೂರ್ಣಗೊಳಿಸಿದರೆ ಅತಿಲಂಘಿಸಬಹುದಾದಂಥ ಕಟ್ಟಡ ಅಥವಾ ಇತರ ರಚನೆಯ ನಿರ್ಮಾಣವು ಈ ಪ್ರಕರಣದ ಮೇರೆಗೆ ಅಪರಾಧವಾಗತಕ್ಕದ್ದಲ್ಲ.

**63ಕ. ಎರಡನೇ ಮತ್ತು ತರುವಾಯದ ಅಪರಾಧ ನಿರ್ಣಯಗಳಿಗೆ ಹೆಚ್ಚಿನದಾದ ದಂಡನೆ:**—63ನೇ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಈಗಾಗಲೆ ಅಪರಾಧಿ ಎಂದು ನಿರ್ಣೀತನಾದ ಯಾರೇ ಆಗಲಿ ಅಂತಹ ಯಾವುದೇ ಅಪರಾಧದ ಬಗ್ಗೆ ಪುನ: ಅಪರಾಧಿಯೆಂದು ನಿರ್ಣೀತನಾಗಿದ್ದರೆ, ಎರಡನೇ ಮತ್ತು ತರುವಾಯದ ಪ್ರತಿಯೊಂದು ಅಪರಾಧದ ಬಗ್ಗೆ ಒಂದು ವರ್ಷಕ್ಕೆ ಕಡಿಮೆ ಇಲ್ಲದ ಆದರೆ ಮೂರು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆ ಇಲ್ಲದ ಆದರೆ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅವನು ದಂಡನೀಯನಾಗತಕ್ಕದ್ದು :

ಪರಂತು , ನ್ಯಾಯಾಲಯವು ತೀರ್ಪಿನಲ್ಲಿ ನಮೂದಿಸಬೇಕಾದ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ, ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ಕಾರಾವಾಸ ಅಥವಾ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಬಹುದು :

ಮತ್ತೂ ಪರಂತು, ಈ ಪ್ರಕರಣದ ಉದ್ದೇಶಗಳಿಗಾಗಿ ಕೃತಿಸ್ವಾಮ್ಯ (ತಿದ್ದುಪಡಿ) ಅಧಿನಿಯಮ, 1984 ಪ್ರಾರಂಭವಾಗುವುದಕ್ಕೆ ಮುಂಚೆ ಮಾಡಿದ ಯಾವುದೇ ಅಪರಾಧ ನಿರ್ಣಯದ ಯಾವುದೇ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

**64 ಅತಿಲಂಘನಾ ಪ್ರತಿಗಳನ್ನು ಅಭಿಗ್ರಹಿಸಲು ಪೊಲೀಸರ ಅಧಿಕಾರ:**—(1) ಸಬ್‌ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆ ಇಲ್ಲದ ಯಾವನೇ ಪೊಲೀಸು ಅಧಿಕಾರಿಯು ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯದ ಅತಿಲಂಘನೆಗೆ ಸಂಬಂಧಿಸಿದಂತೆ 63ನೇ ಪ್ರಕರಣದ ಮೇರೆಗಿನ ಅಪರಾಧವನ್ನು ಮಾಡಲಾಗಿದೆ, ಮಾಡಲಾಗುತ್ತಿದೆ ಅಥವಾ ಮಾಡುವ ಸಂಭವವಿದೆ ಎಂದು ಅವನಿಗೆ ಮನವರಿಕೆಯಾದರೆ, ಅವನು ವಾರಂಟಿಲ್ಲದೆ ಆ ಕೃತಿಯ ಎಲ್ಲ ಪ್ರತಿಗಳನ್ನು ಮತ್ತು ಆ ಕೃತಿಯ ಅತಿಲಂಘನಾ ಪ್ರತಿಗಳನ್ನು ಮಾಡುವ ಉದ್ದೇಶಕ್ಕಾಗಿ ಉಪಯೋಗಿಸಿದ ಎಲ್ಲಾ ಪ್ಲೇಟುಗಳನ್ನು ಅವುಗಳು ಎಲ್ಲಿಯೇ ಕಂಡುಬರಲಿ, ಅಭಿಗ್ರಹಿಸಬಹುದು ಮತ್ತು ಹಾಗೆ ಅಭಿಗ್ರಹಿಸಿದ ಎಲ್ಲ ಪ್ರತಿಗಳನ್ನು ಮತ್ತು ಪ್ಲೇಟುಗಳನ್ನು ಕಾರ್ಯಸಾಧ್ಯವಾದಷ್ಟು ಬೇಗ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಅಭಿಗ್ರಹಿಸಿದ ಕೃತಿಯ ಅಥವಾ ಪ್ಲೇಟುಗಳ ಯಾವುದೇ ಪ್ರತಿಗಳಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯು ಅಂಥ ಅಭಿಗ್ರಹಣದ ಹದಿನೈದು ದಿವಸಗಳೊಳಗೆ, ಅಂಥ

ಪ್ರತಿಗಳನ್ನು ಅಥವಾ ಪ್ಲೇಟುಗಳನ್ನು ತನಗೆ ಹಿಂದಿರುಗಿಸಬೇಕೆಂದು ಮ್ಯಾಜಿಸ್ಟ್ರೇಟನಿಗೆ ಅರ್ಜಿ ಹಾಕಿಕೊಳ್ಳಬಹುದು ಮತ್ತು ಆ ಮ್ಯಾಜಿಸ್ಟ್ರೇಟನು ಅರ್ಜಿದಾರನನ್ನು ಮತ್ತು ಫಿರ್ಯಾದಿಯನ್ನು ಸುನಾವಣೆ ಮಾಡಿದ ತರುವಾಯ ಮತ್ತು ಅವಶ್ಯವಾಗಬಹುದಾದಂಥ ಹೆಚ್ಚಿನ ತನಿಖೆಯನ್ನು ಮಾಡಿದ ತರುವಾಯ ಆ ಬಗ್ಗೆ ತಾನು ಯೋಗ್ಯವೆಂದು ಭಾವಿಸಬಹುದಾಂಥ ಆದೇಶವನ್ನು ಅರ್ಜಿಯ ಮೇಲೆ ಮಾಡತಕ್ಕದ್ದು.

65. **ಅತಿಲಂಘನಾ ಪ್ರತಿಗಳನ್ನು ಮಾಡುವ ಉದ್ದೇಶಕ್ಕಾಗಿ ಪ್ಲೇಟುಗಳ ಸ್ವಾಧೀನತೆ:**—ಕೃತಿಸ್ವಾಮ್ಯವು ಅಸ್ತಿತ್ವದಲ್ಲಿರುವಂಥ ಯಾವುದೇ ಕೃತಿಯ ಅತಿಲಂಘನಾ ಪ್ರತಿಗಳನ್ನು ಮಾಡುವ ಉದ್ದೇಶಕ್ಕಾಗಿ ಯಾವುದೇ ಪ್ಲೇಟನ್ನು, ಯಾವನೇ ವ್ಯಕ್ತಿಯು ತಿಳಿದೂ ತಿಳಿದೂ ಮಾಡಿದರೆ ಅಥವಾ ತನ್ನ ಸ್ವಾಧೀನದಲ್ಲಿ ಹೊಂದಿದ್ದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ದಂಡನೀಯನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**66. ಅತಿಲಂಘನಾ ಪ್ರತಿಗಳನ್ನು ಮಾಡುವ ಉದ್ದೇಶಕ್ಕಾಗಿನ ಅತಿಲಂಘನಾ ಪ್ರತಿಗಳ ಪ್ಲೇಟುಗಳ ವಿಲೆ:**—ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧದ ಅಧಿವಿಚಾರಣೆ ನಡೆಸುತ್ತಿರುವ ನ್ಯಾಯಾಲಯವು, ಆರೋಪಿತ ಅಪರಾಧಿಯು ಅಪರಾಧಿಯೆಂದು ನಿರ್ಣೀತನಾಗಿರಲಿ ಅಥವಾ ಆಗಿಲ್ಲದಿರಲಿ, ಕೃತಿಯ ಅತಿಲಂಘನಾ ಪ್ರತಿಗಳಾಗಿರುವುದಾಗಿ ತನಗೆ ಕಂಡುಬರುವ ಅಥವಾ ಅತಿಲಂಘನಾ ಪ್ರತಿಗಳನ್ನು ಮಾಡುವ ಉದ್ದೇಶಕ್ಕಾಗಿನ ಪ್ಲೇಟುಗಳಾಗಿರುವುದಾಗಿ ತನಗೆ ಕಂಡುಬರುವಂಥ ಆರೋಪಿತ ಅಪರಾಧಿಯ ಸ್ವಾಧೀನದಲ್ಲಿರುವ ಕೃತಿಯ ಎಲ್ಲ ಪ್ರತಿಗಳನ್ನು ಅಥವಾ ಎಲ್ಲಾ ಪ್ಲೇಟುಗಳನ್ನು ಕೃತಿಸ್ವಾಮ್ಯದ ಒಡೆಯನಿಗೆ ವಶಾವಣೆ ಮಾಡತಕ್ಕದೆಂದು ಆದೇಶಿಸಬಹುದು.

67. **ಸುಳ್ಳು ನಮೂದುಗಳನ್ನು ಹಾಜರ್ಪಡಿಸುವುದಕ್ಕಾಗಿ ಅಥವಾ ಕೊಡಮಾಡುವುದಕ್ಕಾಗಿ ರಿಜಿಸ್ಟರು, ಇತ್ಯಾದಿಗಳಲ್ಲಿ ಸುಳ್ಳು ನಮೂದುಗಳನ್ನು ಮಾಡುವುದಕ್ಕಾಗಿ ದಂಡನೆ:**—ಯಾವನೇ ವ್ಯಕ್ತಿಯು,—

(ಕ) ಈ ಅಧಿನಿಯಮದ ಮೇರೆಗೆ ಇಟ್ಟಿರುವ ಕೃತಿಸ್ವಾಮ್ಯಗಳ ರಿಜಿಸ್ಟರಿನಲ್ಲಿ ಸುಳ್ಳು ನಮೂದು ಮಾಡಿದರೆ ಅಥವಾ ಮಾಡುವಂತೆ ಮಾಡಿದರೆ, ಅಥವಾ

(ಖ) ಅಂಥ ರಿಜಿಸ್ಟರಿನಲ್ಲಿನ ಯಾವುದೇ ನಮೂದಿನ ಪ್ರತಿಯೆಂಬುದಾಗಿ ಸುಳ್ಳಾಗಿ ತಾತ್ಪರ್ಯವಾಗುವ ಬರಹವನ್ನು ಮಾಡಿದರೆ ಅಥವಾ ಮಾಡುವಂತೆ ಮಾಡಿದರೆ, ಅಥವಾ

(ಗ) ಅದು ಸುಳ್ಳೆಂದು ತಿಳಿದೂ ತಿಳಿದೂ ಅಂಥ ಯಾವುದೇ ನಮೂದು ಅಥವಾ ಬರಹವನ್ನು ಸಾಕ್ಷ್ಯವಾಗಿ ಹಾಜರಪಡಿಸಿದರೆ ಅಥವಾ ಕೊಡಮಾಡಿದರೆ ಅಥವಾ ಹಾಜರ್ಪಡಿಸುವಂತೆ ಅಥವಾ ಕೊಡಮಾಡುವಂತೆ ಮಾಡಿದರೆ

—ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

68. **ಯಾವನೇ ಪ್ರಾಧಿಕಾರಿ ಅಥವಾ ಅಧಿಕಾರಿಯನ್ನು ವಂಚಿಸುವ ಅಥವಾ ಅವನ ಮೇಲೆ ಪ್ರಭಾವ ಬೀರುವ ಉದ್ದೇಶಕ್ಕಾಗಿ ಸುಳ್ಳು ಹೇಳಿಕೆಗಳನ್ನು ಮಾಡುವುದಕ್ಕೆ ದಂಡನೆ:**—ಯಾವನೇ ವ್ಯಕ್ತಿಯು,—

(ಕ) ಈ ಅಧಿನಿಯಮದ ಉಪಬಂಧಗಳ ನಿರ್ವಹಣೆಯಲ್ಲಿ ಯಾವನೇ ಪ್ರಾಧಿಕಾರಿ ಅಥವಾ ಅಧಿಕಾರಿಯನ್ನು ವಂಚಿಸುವ ದೃಷ್ಟಿಯಿಂದ, ಅಥವಾ

(ಖ) ಈ ಅಧಿನಿಯಮದ ಅಥವಾ ಅದರ ಮೇರೆಗಿನ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ, ಯಾವುದನ್ನಾದರೂ ಮಾಡಲು ಅಥವಾ ಬಿಟ್ಟುಬಿಡಲು, ಅದನ್ನು ದೊರಕಿಸಿಕೊಳ್ಳುವ ಅಥವಾ ಪ್ರಭಾವ ಬೀರುವ ದೃಷ್ಟಿಯಿಂದ

—ಅದು ಸುಳ್ಳೆಂದು ತಿಳಿದೂ ತಿಳಿದೂ ಸುಳ್ಳು ಹೇಳಿಕೆಯನ್ನು ಅಥವಾ ನಿರೂಪಣೆಯನ್ನು ಮಾಡಿದರೆ, ಅವನು, ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

68ಕ. **52ಕ ಪ್ರಕರಣದ ಉಲ್ಲಂಘನೆಗೆ ದಂಡನೆ:**—52ಕ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಧ್ವನಿಮುದ್ರಿಕೆ ಅಥವಾ ವಿಡಿಯೋ ಚಲನಚಿತ್ರವನ್ನು ಪ್ರಕಟಿಸುವ ಯಾವನೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

69. **ಕಂಪನಿಗಳಿಂದ ಅಪರಾಧ:**— (1) ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ವ್ಯವಹಾರದ ನಡವಳಿಕೆಯ ಪ್ರಭಾರದಲ್ಲಿದ್ದ ಮತ್ತು ಅದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು;

ಪರಂತು, ಈ ಉಪಪ್ರಕರಣದಲ್ಲಿ ಅಡಕವಾಗಿರುವುದಾವುದೂ, ಅಂಥ ಅಪರಾಧವು ತನಗೆ ತಿಳಿಯದೆಯೇ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ಯುಕ್ತವಾದ ಎಲ್ಲ ಶ್ರದ್ಧೆಯನ್ನು ಅವನು ವಹಿಸಿದ್ದನೆಂದು ರುಜುವಾತುಪಡಿಸಿದರೆ ಯಾವನೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಯಾಗಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಮತ್ತು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಆ ಅಪರಾಧವನ್ನು ಮಾಡಲಾಯಿತೆಂದು ಅಥವಾ ಆ ಅಪರಾಧವನ್ನು ಅವನ ಕಡೆಯಿಂದ ಆದ ಯಾವುದೇ ನಿರ್ಲಕ್ಷತೆಗೆ ಆರೋಪಿಸಬಹುದೆಂದು ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.**—ಈ ಪ್ರಕರಣದ ಉದ್ದೇಶಗಳಿಗಾಗಿ,—

(ಕ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಖ) ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ, ಆ ಫರ್ಮಿನ ಪಾಲುದಾರ.

70. **ಅಪರಾಧಗಳ ಸಂಜ್ಞೇಯತೆ:**— ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟಿನ ದರ್ಜೆಗೆ ಕಡಿಮೆಯಿರುವ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ನಡೆಸತಕ್ಕುದಲ್ಲ.

## ಅಧ್ಯಾಯ—XIV

### ಅಪೀಲುಗಳು

71. **ಮ್ಯಾಜಿಸ್ಟ್ರೇಟನ ಕೆಲವು ಆದೇಶಗಳ ವಿರುದ್ಧ ಅಪೀಲುಗಳು.**— 64ನೇ ಪ್ರಕರಣದ (2)ನೇ ಉಪಪ್ರಕರಣದ ಅಥವಾ 66ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ, ಆದೇಶವನ್ನು ಮಾಡುವ ನ್ಯಾಯಾಲಯದಿಂದ ಸಾಮಾನ್ಯವಾಗಿ ಅಪೀಲುಗಳು ಇರುವಂಥ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು ಮತ್ತು ಅಂಥ ಅಪೀಲು ನ್ಯಾಯಾಲಯವು ಅಪೀಲಿನ ವಿಲೇಯಾಗುವವರೆಗೆ ಆದೇಶದ ಜಾರಿಯನ್ನು ತಡೆಹಿಡಿಯಬೇಕೆಂದು ನಿರ್ದೇಶಿಸಬಹುದು.

72. **ಕೃತಿಸ್ವಾಮ್ಯ ರಿಜಿಸ್ಟ್ರಾರನ ಮತ್ತು ಕೃತಿಸ್ವಾಮ್ಯ ಮಂಡಲಿಯ ಆದೇಶಗಳ ವಿರುದ್ಧ ಅಪೀಲುಗಳು:**— (1) ಕೃತಿಸ್ವಾಮ್ಯಗಳ ರಿಜಿಸ್ಟ್ರಾರನ ಯಾವುದೇ ಅಂತಿಮ ತೀರ್ಮಾನ ಅಥವಾ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಆ ಆದೇಶ ಅಥವಾ ತೀರ್ಮಾನದ ದಿನಾಂಕದಿಂದ ಮೂರು ತಿಂಗಳೊಳಗೆ ಕೃತಿಸ್ವಾಮ್ಯ ಮಂಡಲಿಗೆ ಅಪೀಲು ಮಾಡಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ಮೇರೆಗೆ, ಅಪೀಲಿನಲ್ಲಿ ಮಾಡಿದ ತೀರ್ಮಾನ ಅಥವಾ ಆದೇಶವಲ್ಲದ, ಕೃತಿಸ್ವಾಮ್ಯ ಮಂಡಲಿಯ ಯಾವುದೇ ಅಂತಿಮ ತೀರ್ಮಾನ ಅಥವಾ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ತೀರ್ಮಾನ ಅಥವಾ ಆದೇಶದ ದಿನಾಂಕದಿಂದ ಮೂರು ತಿಂಗಳೊಳಗೆ ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಅಪೀಲುದಾರನು ವಾಸ್ತವವಾಗಿ ಮತ್ತು ಸ್ವಯಿಚ್ಛೆಯಿಂದ ವಾಸಿಸುತ್ತಿರುವನೋ ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಅಥವಾ ಗಳಿಕೆಗಾಗಿ ಖುದ್ದಾಗಿ ಕೆಲಸ ಮಾಡುತ್ತಿರುವನೋ, ಆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಿಕೊಳ್ಳಬಹುದು:

ಪರಂತು, ಅಂಥ ಯಾವುದೇ ಅಪೀಲು 6ನೇ ಪ್ರಕರಣದ ಮೇರೆಗೆ ಕೃತಿಸ್ವಾಮ್ಯ ಮಂಡಲಿಯ ತೀರ್ಮಾನದ ವಿರುದ್ಧ ಇರತಕ್ಕುದಲ್ಲ.

(3) ಈ ಪ್ರಕರಣದ ಮೇರೆಗೆ ಅಪೀಲಿಗಾಗಿ ಉಪಬಂಧಿಸಿದ ಮೂರು ತಿಂಗಳ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಯಾವ ಆದೇಶ ಅಥವಾ ತೀರ್ಮಾನದ ವಿರುದ್ಧ ಅಪೀಲು ಮಾಡಿಕೊಳ್ಳಲಾಗಿದೆಯೋ ಆ ಆದೇಶ ಅಥವಾ ತೀರ್ಮಾನದ ದಾಖಲೆಯ ಪ್ರಮಾಣಿತ ಪ್ರತಿಯನ್ನು ಕೊಡಲು ತೆಗೆದುಕೊಂಡ ಕಾಲವನ್ನು ಹೊರತುಪಡಿಸತಕ್ಕುದು.

73. **ಅಪೀಲುಗಳಿಗಾಗಿ ಪ್ರಕ್ರಿಯೆ:**—ಉಚ್ಚ ನ್ಯಾಯಾಲಯವು, 72ನೇ ಪ್ರಕರಣದ ಮೇರೆಗೆ ತನಗೆ ಮಾಡಿಕೊಂಡ ಅಪೀಲುಗಳಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಪ್ರಕ್ರಿಯೆಯ ಬಗ್ಗೆ ಈ ಅಧಿನಿಯಮಕ್ಕೆ ಸುಸಂಗತವಾದ ನಿಯಮಗಳನ್ನು ರಚಿಸಬಹುದು.

## ಅಧ್ಯಾಯ—XV

### ಸಂಕೀರ್ಣ

74. **ಕೃತಿಸ್ವಾಮ್ಯಗಳ ರಿಜಿಸ್ಟ್ರಾರ್ ಮತ್ತು ಕೃತಿಸ್ವಾಮ್ಯ ಮಂಡಲಿಯು ಸಿವಿಲ್ ನ್ಯಾಯಾಲಯಗಳ ಕೆಲವು ಅಧಿಕಾರಗಳನ್ನು ಹೊಂದಿರತಕ್ಕುದು:**—ಕೃತಿಸ್ವಾಮ್ಯಗಳ ರಿಜಿಸ್ಟ್ರಾರ್ ಮತ್ತು ಕೃತಿಸ್ವಾಮ್ಯ ಮಂಡಲಿಯು ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಮೇರೆಗೆ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ:—

(ಕ) ಯಾವನೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಿಯನ್ನು ಒತ್ತಾಯಪಡಿಸುವುದು ಮತ್ತು ಅವನನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದು;

(ಖ) ಯಾವುದೇ ದಸ್ತಾವೇಜನ್ನು ಕಂಡು ಹಿಡಿಯಲು ಮತ್ತು ಹಾಜರು ಪಡಿಸಲು ಅಗತ್ಯಪಡಿಸುವುದು ;

(ಗ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಘ) ಸಾಕ್ಷಿಗಳ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನುಗಳನ್ನು ಹೊರಡಿಸುವುದು;

(ಙ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಚ) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

**ವಿವರಣೆ.**— ಸಾಕ್ಷಿಗಳ ಹಾಜರಾತಿಯನ್ನು ಒತ್ತಾಯಪಡಿಸುವ ಉದ್ದೇಶಕ್ಕಾಗಿ, ಸಂದರ್ಭಾನುಸಾರ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನ ಅಥವಾ ಕೃತಿಸ್ವಾಮ್ಯ ಮಂಡಲಿಯ ಅಧಿಕಾರ ವ್ಯಾಪ್ತಿಯು ಸ್ಥಳೀಯ ಪರಿಮಿತಿಗಳು ಭಾರತದ ರಾಜ್ಯಕ್ಷೇತ್ರದ ಪರಿಮಿತಿಗಳಾಗಿರತಕ್ಕುದು.

**75. ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು ಮತ್ತು ಕೃತಿಸ್ವಾಮ್ಯ ಮಂಡಲಿಯು ಮಾಡಿದ ಹಣ ಸಂದಾಯಕ್ಕಾಗಿನ ಆದೇಶಗಳು ಡಿಕ್ರಿಯಂತೆ ಅಮಲ್ಜಾರಿಯಾಗತಕ್ಕದು:**—ಯಾವುದೇ ಹಣದ ಸಂದಾಯಕ್ಕಾಗಿ ಈ ಅಧಿನಿಯಮದ ಮೇರೆಗೆ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು ಅಥವಾ ಕೃತಿಸ್ವಾಮ್ಯ ಮಂಡಲಿಯು ಅಥವಾ ಕೃತಿಸ್ವಾಮ್ಯ ಮಂಡಲಿಯ ಅಂಥ ಯಾವುದೇ ಆದೇಶದ ವಿರುದ್ಧ ಮಾಡಿದ ಯಾವುದೇ ಅಪೀಲಿನಲ್ಲಿ ಉಚ್ಚನ್ಯಾಯಾಲಯವು ಮಾಡಿದ ಪ್ರತಿಯೊಂದು ಆದೇಶವನ್ನು ಸಂದರ್ಭಾನುಸಾರ, ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು, ಕೃತಿಸ್ವಾಮ್ಯ ಮಂಡಲಿಯು ಅಥವಾ ಉಚ್ಚನ್ಯಾಯಾಲಯದ ರಿಜಿಸ್ಟ್ರಾರನು ಕೊಟ್ಟ ಪ್ರಮಾಣ ಪತ್ರದ ಮೇಲೆ ಸಿವಿಲ್ ನ್ಯಾಯಾಲಯದ ಡಿಕ್ರಿಯೆಂಬಂತೆ ಭಾವಿಸತಕ್ಕದು ಮತ್ತು ಅಂಥ ನ್ಯಾಯಾಲಯದ ಡಿಕ್ರಿಯ ಹಾಗೆ ಅದೇ ರೀತಿಯಲ್ಲಿ ಅಮಲ್ಜಾರಿಯಾಗತಕ್ಕದು.

**76. ಸದ್ಭಾವನೆಯಿಂದ ಕೈಗೊಂಡ ಕ್ರಮಗಳ ಸಂರಕ್ಷಣೆ:**— ಈ ಅಧಿನಿಯಮದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ, ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ನ್ಯಾಯಿಕ ವ್ಯವಹರಣೆಯನ್ನು ಹೂಡತಕ್ಕದಲ್ಲ.

**77. ಕೆಲವು ವ್ಯಕ್ತಿಗಳು ಲೋಕನೌಕರರಾಗಿರತಕ್ಕದು:**—ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಅಧಿಕಾರಿ ಮತ್ತು ಕೃತಿಸ್ವಾಮ್ಯ ಮಂಡಲಿಯ ಪ್ರತಿಯೊಬ್ಬ ಸದಸ್ಯನನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರನೆಂಬುದಾಗಿ ಭಾವಿಸತಕ್ಕದು.

**78. ನಿಯಮ ರಚನಾಧಿಕಾರ:**— (1) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಕೇಂದ್ರ ಸರ್ಕಾರವು ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಲು ನಿಯಮಗಳನ್ನು ರಚಿಸಬಹುದು, ಅಂದರೆ:—

(ಕ) ಕೃತಿಸ್ವಾಮ್ಯ ಮಂಡಲಿಯ ಅಧ್ಯಕ್ಷ ಮತ್ತು ಇತರ ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು;

(ಖ) ಈ ಅಧಿನಿಯಮದ ಮೇರೆಗೆ ಮಾಡಬೇಕಾದ ದೂರುಗಳ ಮತ್ತು ಅರ್ಜಿಗಳ ನಮೂನೆ ಮತ್ತು ಮಂಜೂರು ಮಾಡಬೇಕಾದ ಲೈಸನ್ಸ್‌ಗಳು;

(ಗ) ಕೃತಿಸ್ವಾಮ್ಯಗಳ ರಿಜಿಸ್ಟ್ರಾರನ ಮುಂದಿರುವ ಯಾವುದೇ ವ್ಯವಹರಣೆಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಪ್ರಕ್ರಿಯೆ;

(ಘ) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬಹುದಾದ ಸ್ವಾಮ್ಯಶುಲ್ಕಗಳನ್ನು ನಿರ್ಧರಿಸುವ ರೀತಿ ಮತ್ತು ಅಂಥ ಸ್ವಾಮ್ಯಶುಲ್ಕಗಳ ಸಂದಾಯಕ್ಕಾಗಿ ತೆಗೆದು ಕೊಳ್ಳಬೇಕಾದ ಭದ್ರತೆ;

(ಙ) ಈ ಅಧಿನಿಯಮದ ಮೇರೆಗೆ ಇಡಬೇಕಾದ ಕೃತಿಸ್ವಾಮ್ಯಗಳ ರಿಜಿಸ್ಟರಿನ ನಮೂನೆ ಮತ್ತು ಅದರಲ್ಲಿ ನಮೂದಿಸಬೇಕಾದ ವಿವರಗಳು;

(ಚ) ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನು ಮತ್ತು ಕೃತಿಸ್ವಾಮ್ಯ ಮಂಡಲಿಯು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದೋ ಆ ವಿಷಯಗಳು;

(ಛ) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬಹುದಾದಂಥ ಫೀಜುಗಳು;

(ಜ) ಕೃತಿಸ್ವಾಮ್ಯ ಕಚೇರಿಯ ವ್ಯವಹಾರದ ಮತ್ತು ಈ ಅಧಿನಿಯಮದ ಮೂಲಕ ಕೃತಿಸ್ವಾಮ್ಯಗಳ ರಿಜಿಸ್ಟ್ರಾರನ ನಿರ್ದೇಶನ ಅಥವಾ ನಿಯಂತ್ರಣದಲ್ಲಿ ಇಡಲಾದ ಎಲ್ಲ ವಿಷಯಗಳ ವಿನಿಯಮನ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿ ಇರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದು ಅಥವಾ ಪರಿಣಾಮಕಾರಿಯಾಗತಕ್ಕದಲ್ಲ; ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯುಂಟು ಮಾಡತಕ್ಕದಲ್ಲ.

**79. ನಿರಸನಗಳು, ಉಳಿಸುವಿಕೆಗಳು ಮತ್ತು ಮಧ್ಯಕಾಲೀನ ಉಪಬಂಧಗಳು:**—(1) ಭಾರತ ಕೃತಿಸ್ವಾಮ್ಯ ಅಧಿನಿಯಮ, 1914 (1914 ರ 3) ರಿಂದ ಭಾರತಕ್ಕೆ ಅದನ್ನು ಅನ್ವಯಿಸುವಲ್ಲಿ ಭಾರತ ಕೃತಿಸ್ವಾಮ್ಯ ಅಧಿನಿಯಮ, 1914ರ ಮೂಲಕ ಮಾರ್ಪಾಟು ಮಾಡಿದಂತೆ, ಯುನೈಟೆಡ್ ಕಿಂಗ್‌ಡಂನ ಸಂಸತ್ತು ಅಂಗೀಕರಿಸಿದ ಕೃತಿಸ್ವಾಮ್ಯ ಅಧಿನಿಯಮ, 1911 ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಯಾವನೇ ವ್ಯಕ್ತಿಯು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಆ ಕಾಲದಲ್ಲಿ ಕಾನೂನು ಸಮ್ಮತವಾಗಿದ್ದಂಥ ರೀತಿಯಲ್ಲಿ ಯಾವುದೇ ಕೃತಿಯ ಯಥಾವತ್ತಾದ ನಿರೂಪಣೆ ಅಥವಾ ಪ್ರದರ್ಶನಕ್ಕೆ ಸಂಬಂಧಪಟ್ಟಂತೆ ಅಥವಾ ಈ ಅಧಿನಿಯಮವು ಜಾರಿಗೆ ಬರದಿದ್ದರೆ, ಅಂಥ ಯಥಾವತ್ತಾದ ನಿರೂಪಣೆ ಅಥವಾ ಪ್ರಸ್ತುತಪಡಿಸುವಿಕೆಯು ಕಾನೂನು ಬದ್ಧವಾಗಬಹುದಾಗಿದ್ದ ಕಾಲದಲ್ಲಿ ಕೃತಿಯ ಯಥಾವತ್ತಾದ ನಿರೂಪಣೆ ಅಥವಾ ಪ್ರಸ್ತುತಪಡಿಸುವ ಉದ್ದೇಶಕ್ಕಾಗಿ ಅಥವಾ ಆ ದೃಷ್ಟಿಯಿಂದ ಯಾವುದೇ ವೆಚ್ಚ ಅಥವಾ ಹೊಣೆಗಾರಿಕೆಗಳನ್ನು ಅವನು ವಹಿಸಿರುವ ಮೂಲಕ ಯಾವುದೇ ಕ್ರಮವನ್ನು ಕೈಗೊಂಡಿರುವಲ್ಲಿ, ಈ ಪ್ರಕರಣದಲ್ಲಿರುವುದಾವುದೂ, ಅಂಥ ಯಥಾವತ್ತಾದ ನಿರೂಪಣೆ ಅಥವಾ ಪ್ರಸ್ತುತಪಡಿಸುವುದನ್ನು ಪ್ರತಿಬಂಧಿಸಲು ಈ ಅಧಿನಿಯಮದಿಂದಾಗಿ ಹಕ್ಕುಳ್ಳವನಾಗುವ ವ್ಯಕ್ತಿಯು, ಒಪ್ಪಂದವು ಆಗದಿದ್ದರೆ,

'ಕೃತಿಸ್ವಾಮ್ಯ' ಮಂಡಲಿಯು, ನಿರ್ಧರಿಸಬಹುದಾದಂಥ ನಷ್ಟ ಪರಿಹಾರವನ್ನು ಸಂದಾಯ ಮಾಡಲು ಒಪ್ಪಿಕೊಂಡ ಹೊರತು, ಸದರಿ ದಿನಾಂಕದಂದು ಅಸ್ತಿತ್ವದಲ್ಲಿರುವ ಮತ್ತು ಬೆಲೆಯುಳ್ಳಂಥ, ಅಂಥ ಕ್ರಮದಿಂದ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುವೇ ಹಕ್ಕುಗಳು ಅಥವಾ ಹಿತಾಸಕ್ತಿಗಳನ್ನು ಕಡಿಮೆ ಮಾಡತಕ್ಕುದಲ್ಲ ಅಥವಾ ಬಾಧಿಸತಕ್ಕುದಲ್ಲ.

(3) (1)ನೇ ಉಪಪ್ರಕರಣದ ಮೂಲಕ ನಿರಸನಗೊಂಡ ಯಾವುದೇ ಅಧಿನಿಯಮದ ಮೇರೆಗೆ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿಲ್ಲದಿದ್ದಂಥ ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯವು ಈ ಅಧಿನಿಯಮದಿಂದಾಗಿ ಅಸ್ತಿತ್ವದಲ್ಲಿ ಇರತಕ್ಕುದಲ್ಲ.

(4) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯವು ಅಸ್ತಿತ್ವದಲ್ಲಿದ್ದಲ್ಲಿ, ಅಂಥ ಕೃತಿಸ್ವಾಮ್ಯವನ್ನು ಒಳಗೊಳ್ಳುವ ಹಕ್ಕುಗಳು, ಅಂಥ ಪ್ರಾರಂಭದ ದಿನಾಂಕದಿಂದ, ಅಂಥ ಕೃತಿಯು ಸೇರಿರುವಂಥ ಕೃತಿಗಳ ವರ್ಗಕ್ಕೆ ಸಂಬಂಧಪಟ್ಟಂತೆ ಆ ವರ್ಗದ 14ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಹಕ್ಕುಗಳಾಗಿರತಕ್ಕುದು, ಮತ್ತು ಆ ಪ್ರಕರಣದ ಮೂಲಕ ಯಾವುದೇ ಹೊಸ ಹಕ್ಕುಗಳನ್ನು ಪ್ರದಾನ ಮಾಡಿರುವಲ್ಲಿ ಅಂಥ ಹಕ್ಕುಗಳ ಒಡೆಯನು,—

(ಕ) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಕೃತಿಯ ಕೃತಿಸ್ವಾಮ್ಯವನ್ನು ಪೂರ್ಣವಾಗಿ ಹಸ್ತಾಂತರ ಮಾಡಿರುವ ಯಾವುದೇ ಸಂದರ್ಭದಲ್ಲಿ, ಹಸ್ತಾಂತರ ಪಡೆದವನು ಅಥವಾ ಹಿತಾಸಕ್ತಿಯಲ್ಲಿ ಅವನ ಉತ್ತರಾಧಿಕಾರಿಯು;

(ಖ) ಇತರ ಯಾವುದೇ ಸಂದರ್ಭದಲ್ಲಿ, (1)ನೇ ಉಪಪ್ರಕರಣದ ಮೂಲಕ ನಿರಸನಗೊಂಡ ಯಾವುದೇ ಅಧಿನಿಯಮದ ಮೇರೆಗೆ ಕೃತಿಯ ಕೃತಿಸ್ವಾಮ್ಯದ ಮೊದಲನೇ ಒಡೆಯನಾಗಿದ್ದ ವ್ಯಕ್ತಿ ಅಥವಾ ಅವನ ಕಾನೂನು ಸಮ್ಮತ ಪ್ರತಿನಿಧಿಗಳು

—ಆಗಿರತಕ್ಕುದು.

(5) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ್ದಂತೆ ಹೊರತು, ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಯಾವನೇ ವ್ಯಕ್ತಿಯು ಯಾವುದೇ ಕೃತಿಯಲ್ಲಿನ ಕೃತಿಸ್ವಾಮ್ಯಕ್ಕೆ ಅಥವಾ ಅಂಥ ಕೃತಿಸ್ವಾಮ್ಯದಲ್ಲಿನ ಯಾವುದೇ ಹಕ್ಕಿಗೆ ಅಥವಾ ಅಂಥ ಯಾವುದೇ ಹಕ್ಕಿನಲ್ಲಿನ ಹಿತಾಸಕ್ತಿಗೆ ಹಕ್ಕುಳ್ಳವನಾಗಿರುವಲ್ಲಿ, ಈ ಅಧಿನಿಯಮವು ಜಾರಿಯಲ್ಲಿ ಬರದಿದ್ದರೆ ಯಾವ ಅವಧಿಗೆ ಅದಕ್ಕೆ ಅವನು ಹಕ್ಕುಳ್ಳವನಾಗಿರುತ್ತಿದ್ದನೋ ಆ ಅವಧಿಗೆ ಅಂಥ ಹಕ್ಕು ಅಥವಾ ಹಿತಾಸಕ್ತಿಗೆ ಅವನು ಹಕ್ಕುಳ್ಳವನಾಗಿರುವುದು ಮುಂದುವರಿಯತಕ್ಕುದು.

(6) ಈ ಅಧಿನಿಯಮದಲ್ಲಿ ಅಡಕವಾಗಿರುವುದಾವುದೂ, ಅದರ ಪ್ರಾರಂಭಕ್ಕೆ ಮುಂಚೆ ಮಾಡಿದ ಯಾವುದೇ ಕಾರ್ಯವು, ಆ ಕಾರ್ಯವು ಅನ್ಯಥಾ ಅಂಥ ಉಲ್ಲಂಘನೆ ಆಗುತ್ತಿದ್ದಿರದಿದ್ದರೆ ಕೃತಿಸ್ವಾಮ್ಯದ ಉಲ್ಲಂಘನೆಯನ್ನಾಗಿಸುವುದಾಗಿ ಭಾವಿಸತಕ್ಕುದಲ್ಲ.

(7) ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಈ ಪ್ರಕರಣದಲ್ಲಿರುವುದಾವುದೂ, ನಿರಸನಗಳ ಪರಿಣಾಮಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10) ರ ಅನ್ವಯಕ್ಕೆ ಬಾಧಕವಾಗುತ್ತದೆಂಬುದಾಗಿ ಭಾವಿಸತಕ್ಕುದಲ್ಲ.

* * *

ಮೇಲ್ಕಂಡ ಕೃತಿ ಸ್ವಾಮ್ಯ ಅಧಿನಿಯಮ, 1957 (1957ರ 14)ರ ಕನ್ನಡ ಭಾಷಾಂತರವನ್ನು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಕ) ಖಂಡದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲು ರಾಷ್ಟ್ರಪತಿಯವರು ಅಧಿಕೃತಗೊಳಿಸಿದ್ದಾರೆ.

ಕಾರ್ಯದರ್ಶಿ,
ಭಾರತ ಸರ್ಕಾರ.

ನವದೆಹಲಿ
ದಿನಾಂಕ

The above translation in Kannada of The Copy Right Act, 1957 (14 of 1957) has been authorised by the President to be publised in the Offical Gazette under clause (a) of Section 2 of the Authoritative Texts (Central Laws) Act, 1973.

V. S. RAMADEVI,
Secretary to the Government of India.

New Delhi
Date: